
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 15
ಏಪ್ರಿಲ್ 13, 2003 ಬೆಲೆ ರೂ. 3.00



ವಾಜಪೇಯಿ ಸರ್ಕಾರ: ಐದು ವರುಷಗಳು ವಿನಾಶದ ಹೆಜ್ಜೆಗಳು



ಸುಪ್ರೀಂ ಕೋರ್ಟ್ ತೀರ್ಪು : ಗೊಂದಲದಲ್ಲಿ ಸಿಇಟಿ ಸರ್ಕಾರದ ಮೇಲೆ ಸುಲಿಗೆಖೋರರ ಸವಾರಿ!



VRL ಮಾಲೀಕರ ದಬ್ಬಾಳಿಕೆ




ತೈಲಕ್ಕಾಗಿ ರಕ್ತಪಾತ: ಎರಡನೇ ಈ ವಾರ ?..

ಬರ್ಮಾದ ದೇಶಪ್ರೇಮಿ ಸೈನಿಕರ ಸಂಪರ್ಕ

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ 22

ಹಿಂದಿನ ಸಂಚಿಕೆಯಲ್ಲಿ ಯುದ್ಧದ ಯಾತನೆ ಬಗ್ಗೆ, ಹಸಿರ ರಣಹದ್ದುಗಳಂತೆ ತರುಣಿಯರ ಮೇಲೆ ಅತ್ಯಾಚಾರವೆಸಗುತ್ತಿದ್ದ ಸೈನಿಕರು, ಜಯಪಾಲ್‌ರ ಪ್ರಾಣವುಳಿಸಿದ ಯಹೂದಿ ವೈದ್ಯ, ತೀವ್ರಗೊಳ್ಳುತ್ತಿದ್ದ ಸೈನ್ಯದ ಒಳಗೆ ಹಾಗೂ ಹೊರಗಿನ ಬ್ರಿಟಿಷ್ ವಿರೋಧಿ ಜ್ವಾಲೆ ಮತ್ತು ಹೊಸ ವೈಮಾನಿಕ ಘಟಕ ರಚಿಸಲು ಜಯಪಾಲ್ ಸಿಂಗರಿಗೆ ಹೊಣೆ ಈ ಬಗ್ಗೆ ಓದಿರುವಿರಿ. ಮುಂದೆ.....



ಕನ್ನಡಕ್ಕೆ: ವಿಶ್ವ ಕುಂದಾಪುರ

"ನಾನು ಈ ಕಾರ್ಯಭಾರವನ್ನು ವಹಿಸಿಕೊಳ್ಳುತ್ತೇನೆ, ಸರ್. ನಾನು ಖಂಡಿತವಾಗಿಯೂ ನಿಮ್ಮನ್ನು ನಿರಾಸೆಗೊಳಿಸುವುದಿಲ್ಲ" - ನಾನಂದೆ.

ಅವರು ಎದ್ದು ನಿಂತರು. ಒಳ್ಳೆಯದು! ಅಭಿನಂದನೆಗಳು. ಈ ರೀತಿಯ ಕೆಲಸ ಹಾಗೂ ಕಮಾಂಡ್‌ಗೆ ಆಯ್ಕೆಯಾದ ಪ್ರಥಮ ಭಾರತೀಯ ನೀವೆಂಬುದು ನಿಮಗೆ ತಿಳಿದಿದೆಯೇ?" ಎಂದರು.

ನನಗೆ ಅದು ಗೊತ್ತಿತ್ತು. ಅವರ ಬಯಕೆ ಬೇರೆಯಾಗಿದ್ದರೂ ನಾನು ಅಲ್ಲಿದ್ದೆ ಎನ್ನುವುದೂ ನನಗೆ ಗೊತ್ತಿತ್ತು. ಈ ಕೆಲಸದಿಂದ ಜಿಎಚ್‌ಕ್ಯು ಭಾರತೀಯ ಅಧಿಕಾರಿಗಳನ್ನು ಹೊರಗಿಟ್ಟ ಅಂಶದ ಅರಿವು ನನಗಿತ್ತು. ಇನ್ನೂ ಹೆಚ್ಚು ವಿಷಯ ನನಗೆ ತಿಳಿದಿತ್ತು.

ನಾನೀಗ ಮೇಜರ್ ಆಗಿದ್ದೆ. ಏಳು ಬ್ರಿಟೀಷ್ ಅಧಿಕಾರಿಗಳು, ಐದು ಕ್ಯಾಪ್ಟನ್‌ಗಳು ಹಾಗೂ ಇಬ್ಬರು ಲೆಫ್ಟಿನೆಂಟ್‌ಗಳ ನೇತೃತ್ವ ವಹಿಸುವ ಅವಕಾಶ ಮೊದಲ ಬಾರಿಗೆ ಸಿಕ್ಕಿತ್ತು. ಸಿಖ್ಖರು, ಜಾಟಗಳು, ಪಠಾಣರನ್ನೊಳಗೊಂಡ 600 ಸೈನಿಕರು, ಅತ್ಯುತ್ತಮ 12 ವೈಸರಾಯರ ಕಮಿಷನ್ಡ್ ಅಧಿಕಾರಿಗಳು ನನ್ನ ಅಧೀನದಲ್ಲಿದ್ದರು. ಭಾರತೀಯನಾಗಿದ್ದಕ್ಕೆ ನನಗೆ ಹೆಮ್ಮೆಯೆನಿಸಿತು. "ಭಾರತೀಯರಿಗೆ ಇದನ್ನು ಮಾಡಲು ಆಗುತ್ತದೋ ಇಲ್ಲವೋ ನೋಡೋಣ" ಎಂಬ ಸವಾಲನ್ನು ನನಗೆ ನಾನೇ ಹಾಕಿಕೊಂಡೆ. ಆ ಸವಾಲನ್ನು ನಾನು ಸ್ವೀಕರಿಸಿದೆ.

ಈ ಘಟಕವನ್ನು ಸ್ಥಾಪಿಸಲು ಆರಂಭದಲ್ಲಿ ನನಗೆ ಎರಡು ತಿಂಗಳ ಕಾಲಾವಕಾಶ ನೀಡಲಾಗಿತ್ತು. ಫಿರೋಜ್‌ಪುರ ಡಿಪೋದಿಂದ ಸೈನಿಕರು ಬಂದರು. ಅದರ ಬೆನ್ನಲ್ಲೇ ಯುದ್ಧ ಕಾಲದ ಏರ್ ಡಿಸ್ಪ್ಯಾಚ್ ಘಟಕದಿಂದ ಸಾಮಾನು ಸರಂಜಾಮು ಶಿಬಿರದ ಪ್ರದೇಶಕ್ಕೆ ಬಂದವು.

ಮೂರು ದಿನಗಳ ನಂತರ ಜಿಹೆಚ್‌ಕ್ಯೂನಿಂದ ಸೂಚನೆಯೊಂದು ಬಂತು. 15 ದಿನಗಳಲ್ಲಿ ಘಟಕವನ್ನು ರಚಿಸಬೇಕೆಂಬುದೇ ಆ ಸೂಚನೆ. ಅದೊಂದು ಆಶ್ಚರ್ಯದ ಕ್ರಮವಾಗಿತ್ತು.

"ನಿನ್ನ ಸ್ಥೈರ್ಯ ಉಡುಗಿಸುವುದು ಅವರ ಉದ್ದೇಶವಾಗಿದೆ" - ಹೀಗೆಂದು ಕರ್ನಲ್ ಕಾಥ್ರಾನ್ ನನಗೆ ಗುಟ್ಟಾಗಿ ಹೇಳಿದರು. "ನಾನು ಅಷ್ಟು ಸುಲಭವಾಗಿ ಬಲಿಯಾಗುವುದಿಲ್ಲ" ಎಂದು ನಾನು ಉತ್ತರಿಸಿದೆ.

ಆ ದಿನ ಸಂಜೆ ನನ್ನ ಅಧಿಕಾರಿಗಳ ಸಭೆ ಕರೆದು ಮುಕ್ತವಾಗಿ ಮಾತನಾಡಿದೆ.

"ಒಬ್ಬ ಭಾರತೀಯ ಅಧಿಕಾರಿಯ ಅಧೀನದಲ್ಲಿರಲು ನೀವು ಇಷ್ಟಪಡಲಾರಿರಿ ಎನ್ನುವುದು ನನಗೆ ಗೊತ್ತು. ನಿಮ್ಮ ಇಚ್ಛೆ ಮೇರೆಗೆ ನೀವು ಇಲ್ಲಿಗೆ ಬಂದಿಲ್ಲ ಎನ್ನುವುದರ ಅರಿವು ನನಗಿದೆ. ಆದರೆ ನಾನು ಯಾವುದೇ ಕೀಳರಿಮೆ ಭಾವನೆಯಿಂದ ಬಳಲುತ್ತಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಿದ್ದೇನೆ. ನನ್ನ ಘಟಕದಲ್ಲಿ ಕರಿಯ-ಬಿಳಿಯ ಭೇದಭಾವವನ್ನು ನಾನು ಯಾವತ್ತೂ ಸಹಿಸಿಕೊಳ್ಳುವುದಿಲ್ಲ. ಮಾನವೀಯ ರೀತಿಯಲ್ಲಿ ಶಿಸ್ತನ್ನು ಪಾಲಿಸುವ ವಿಚಾರದಲ್ಲಿ ನಾನು ಕೂಡ ನಿಮ್ಮಂತೆಯೇ. ಈ ಘಟಕದಲ್ಲಿ ಸೈನಿಕರನ್ನು ಬಯ್ಯುವುದನ್ನು ನಾನು ಸಹಿಸುವುದಿಲ್ಲ. ನೀವು ನನ್ನನ್ನು 'ಸರ್' ಎಂದು ಕರೆಯಬೇಡಿ. ನಾನು ನಿಮ್ಮೆಲ್ಲರಿಗೆ 'ಜೈ' ; ನೀವು ನನಗೆ ಕೆನ್, ಸ್ಟೀವ್, ಪ್ಯಾಡಿ ಇದ್ದಂತೆ.. ಎಲ್ಲ ಜನಾಂಗೀಯ ಭ್ರಮೆ ಹಾಗೂ ವೈರತ್ವ ಮರೆತು ಒಂದೇ ಕುಟುಂಬದ ಸದಸ್ಯರಂತೆ ಒಗ್ಗಟ್ಟಿನಿಂದ ಕೆಲಸ ಮಾಡಿ. ಶ್ರಮಪೂರ್ಣ ಕೆಲಸವನ್ನು ನಾನು ನಿರೀಕ್ಷಿಸುತ್ತೇನೆ" ಎಂದು ಸಭೆಯಲ್ಲಿ ಹೇಳಿದೆ.

ಮುಕ್ತ ಮಾತುಕತೆ ಬ್ರಿಟೀಷರಿಗೆ ಇಷ್ಟ. ಅದು ನನಗೆ ಗೊತ್ತಿತ್ತು. ಯುದ್ಧ ಕಾಲದಲ್ಲಿ ಬಲವಂತದಿಂದ ಸೈನ್ಯಕ್ಕೆ ಸೇರ್ಪಡೆಯಾದ ಈ ಅಧಿಕಾರಿಗಳು ನನ್ನ ಘಟಕದಲ್ಲಿ ನಾನು ಜಾರಿಗೆ ತಂದ ಪ್ರಜಾಸತ್ತಾತ್ಮಕ ನೀತಿ ನಿಯಮಗಳಿಗೆ ಸ್ಪಂದಿಸಿದರು. ಅವರು ಅದ್ಭುತವಾಗಿ ಕೆಲಸ ಮಾಡಿದರು. ಸೈನಿಕರ ಜತೆ ಉತ್ತಮವಾಗಿ ವರ್ತಿಸಿದರು. ನಾನೊಬ್ಬ ಬುದ್ಧಿಭ್ರಮಣೆಯಾದ ಪಕ್ಕಾ ಬ್ರಿಟೀಷ್- ವಿರೋಧಿ ಅಲ್ಲ ಎಂಬುದನ್ನು ಅವರು ಬಹುಬೇಗ ತಿಳಿದುಕೊಂಡರು. ಬ್ರಿಟೀಷರ ಜತೆಗಿನ ನನ್ನ ಸಂಘರ್ಷ ರಾಜಕೀಯವಾದುದಾಗಿತ್ತು.

ನನ್ನ ಸೈನಿಕರ ಮಹಾಸಭೆಯನ್ನು ಕರೆದು ಅವರೊಂದಿಗೆ ಮುಕ್ತವಾಗಿ ಮಾತನಾಡಿದೆ.

"ನಾವು 15 ದಿನಗಳೊಳಗೆ ಘಟಕ ರಚನೆ ಕೆಲಸವನ್ನು ಮುಗಿಸಬೇಕು. ನಿಮಗದು ಗೊತ್ತಿದೆಯೇ? ನಾವು ಭಾರತೀಯರು; ಇಂಥ ಸವಾಲಿನ ಕೆಲಸಗಳ ಬಗ್ಗೆ ಸೂಕ್ಷ್ಮ ಭಾವನೆ ಹೊಂದಿರುವಂಥವರು. ನಾನೊಬ್ಬ ಭಾರತೀಯನಾಗಿ, ನಿಮ್ಮ ಕಮಾಂಡಿಂಗ್ ಆಫೀಸರ್ ಆಗಿ ಈ ಸವಾಲನ್ನು ಸ್ವೀಕರಿಸುತ್ತಿದ್ದೇನೆ. ನೀವು ನನ್ನನ್ನು ನಿರಾಶೆಗೊಳಿಸಲಾರಿರಿ ಎಂದು ನನಗೆ ಗೊತ್ತು"

ಹೌದು.... ಅವರು ನನ್ನನ್ನು ನಿರಾಶೆಗೊಳಿಸಲಿಲ್ಲ. ಅವರು ಹಗಲೂ ರಾತ್ರಿ ಶ್ರಮಪಟ್ಟು ಕೆಲಸ ಮಾಡಿದರು, ತರಬೇತಿ ಪಡೆದರು. 'ವಿಶೇಷಜ್ಞರು' ತಮ್ಮ ಎರಡು ತಿಂಗಳ ತರಬೇತಿಯನ್ನು 15 ದಿನಗಳಲ್ಲಿ ಪೂರೈಸಿದಾಗ ಅದೊಂದು ದಾಖಲೆ ಸಮಯದ ಘಟಕ ರಚನೆ ಕಾರ್ಯವಾಯಿತು.

ಘಟಕ ಸನ್ನದ್ಧಗೊಂಡು ವಿದೇಶಕ್ಕೆ ತೆರಳಲು ಸಿದ್ಧವಾಗುವ ಸಂದರ್ಭದಲ್ಲಿ ತಪಾಸಣೆಗಾಗಿ ಬಂದ ಏರಿಯಾ ಕಮಾಂಡರ್ ಜತೆ ಮಾತನಾಡಿದ ಕಾಥ್ರಾನ್ "ಈತನೊಬ್ಬ ದೆವ್ವ ಇದ್ದಂತೆ" ಎಂದು ಹೇಳಿ ನನ್ನ ಶ್ರಮದ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಮಾರ್ಚ್‌ನಲ್ಲಿ ನಾನು ಅಕ್ಯಾಬ್‌ನಲ್ಲಿ ಇಳಿದೆ.

ಯುದ್ಧದಿಂದ ಜರ್ಝರಿತಗೊಂಡ ಬರ್ಮಾವನ್ನು ಕಾಣುವ ಮೊದಲ ಅವಕಾಶ ನನಗೆ ಸಿಕ್ಕಿತು. ಇಡೀ ದೇಶ ಅವಶೇಷಗಳ ಒಂದು ಗುಡ್ಡೆಯಾಗಿ ಪರಿವರ್ತನೆ ಯಾಗಿತ್ತು. ಆರ್ಕಾನ್ಸ್‌ನ ಪ್ರಮುಖ ಪಟ್ಟಣವಾದ ಅಕ್ಯಾಬ್ ಅವಶೇಷಗಳ ಮಧ್ಯೆ ಹೂತು ಹೋಗಿತ್ತು. ಅದರ ರಸ್ತೆಗಳಲ್ಲಿ ಬೆಳಿಗ್ಗೆ ವೇಳೆ ನರಿಗಳು ಓಡಾಡುತ್ತಿದ್ದವು. ವಿಶಾಲ ಬಯಲು ಪ್ರದೇಶಗಳು, ನದಿಗಳು ಸುಂದರವಾದ ಬೆಟ್ಟಗಳು... ಹೀಗೆ ಇಡೀ ಬರ್ಮಾದ ಮೇಲೆ ನಾನು ಹಾರಾಡಿದೆ.

ಬಯಲು ಪ್ರದೇಶಗಳಲ್ಲಿ ಭಾರಿಸಂಖ್ಯೆಯ ಸೈನಿಕರು ಸಾಗುತ್ತಿದ್ದರು. ಬೃಹತ್ ಗಾತ್ರದ ಯುದ್ಧ ಟ್ಯಾಂಕ್‌ನ ತಂಡಗಳನ್ನು ವಿಮಾನದಿಂದ ನೋಡುವಾಗ ಇರುವೆ ಸಾಲುಗಳು ಸಾಗಿದಂತೆ ಭಾಸವಾಗುತ್ತಿತ್ತು. ಗ್ರಾಮಾಂತರ ಪ್ರದೇಶ ಅವಶೇಷಗಳಿಂದ ಮುಚ್ಚಿಹೋಗಿತ್ತು, ಬಾಂಬ್ ದಾಳಿಯಿಂದ ನಗರಗಳು ಉದ್ವಸ್ತಗೊಂಡಿದ್ದವು. ಅಲ್ಲಿ ಯಾರೂ ಬದುಕುಳಿದ ಲಕ್ಷಣಗಳೇ ಕಾಣಲಿಲ್ಲ. ಸ್ಮಶಾನದಲ್ಲಿ ದೂರದ ರಮಣೀಯ ಬೆಟ್ಟಗಳ ಮೇಲೆ ಚಿನ್ನದ ತುರಾಯಿ ಹೊತ್ತಂಥ ಬಿಳಿ ಪಗೋಡಗಳು ಕಂಗೊಳಿಸುತ್ತಿದ್ದವು.

ಬರ್ಮಾ ಮೆಡಿಕಲ್ ಸರ್ವಿಸ್‌ನಲ್ಲಿ ಸಿವಿಲ್ ಸರ್ಜನ್ ಆಗಿದ್ದ ಕರ್ನಲ್ ಗ್ಯಾನ್‌ಸಿಂಗ್‌ರ ನೆರವಿನಿಂದ ಅಕ್ಯಾಬ್‌ನಲ್ಲಿನ ಬರ್ಮಾದ ದೇಶಪ್ರೇಮಿ ಸೈನಿಕರನ್ನು ನಾನು ಸಂಪರ್ಕಿಸಿದೆ. ನಂ.. 5 ಏರ್ ಡಿಸ್‌ಪ್ಯಾಚ್‌ನ ಕ್ಯಾಪ್ಟನ್ ಜಿ.ಶೇಷಾದ್ರಿ ಅವರನ್ನು ನಮ್ಮ ಮೆಸ್‌ಗೆ ಕರೆ ತಂದರು.

ಆಂಗ್‌ಸನ್‌ರ ಕ್ರಾಂತಿಕಾರಿ ಪ್ರಯತ್ನಗಳ ಫಲವಾಗಿ ತಲೆಯೆತ್ತಿದ ಈ ಸೇನೆ, ಬ್ರಿಟಿಷರನ್ನು ದೇಶದಿಂದ ಒದ್ದೋಡಿಸುವ ಸಲುವಾಗಿ ಯುದ್ಧದ ಆರಂಭಿಕ ದಿನಗಳಲ್ಲಿ ಜಪಾನಿ ಪಡೆಗಳ ಮುಂಚೂಣಿಯಾಗಿ ಮುನ್ನುಗ್ಗಿತು. ವರ್ಷಗಟ್ಟಲೆ ಕಾಲ ಬರ್ಮಾವನ್ನು ಜಪಾನಿಯರು ಆಕ್ರಮಿಸಿಕೊಂಡಿದ್ದರಿಂದ ಬರ್ಮಾಜನರಿಗೆ ಜಪಾನಿನ ನಿಜವಾದ ಸಾಮ್ರಾಜ್ಯಶಾಹಿ ಉದ್ದೇಶ ತಿಳಿಯಿತು. ಹೀಗಾಗಿ ಈ ಬಾರಿ ಅವರು ಜಪಾನಿಯರನ್ನು ಹೊರದಬ್ಬಲಿಕ್ಕಾಗಿ ಬ್ರಿಟಿಷರ ಜತೆ ಸಹಕರಿಸಿದರು. ಬ್ರಿಟಿಷರನ್ನು ತನ್ನ ಮಿತ್ರ ಎಂದು ಎಸ್.ಇ.ಎ.ಸಿ. ಘೋಷಿಸಿತು. ಈ ಒಗಟನ್ನು ಅರ್ಥಮಾಡಿಕೊಳ್ಳಲು ನಾನು ಬಯಸಿದೆ.

ಅವರಿಂದ ಐಎನ್‌ಎ ಬಗ್ಗೆ ವಿವರವಾದ ಸುದ್ದಿ ತಿಳಿಯಲು ನಾನು ಕಾತರನಾಗಿದ್ದೆ. ದಕ್ಷಿಣ ಭಾರತೀಯ ತರುಣ ಕ್ಯಾಪ್ಟನ್ ಶೇಷಾದ್ರಿ ನನಗಾಗಿ ಆ ಕೆಲಸ ಮಾಡಿದರು. ಐಎನ್‌ಎ ಸೈನಿಕರನ್ನೇ ಹುಡುಕಿ ಕರೆ ತಂದರು.

ಒರಟಾಗಿ ಬಟ್ಟೆ ಧರಿಸಿದ್ದ, ಹಳೆ ಜಮಾನದ ರೈಫಲ್‌ಗಳನ್ನು ಹೆಗಲಿಗೆ ತೂಗುಬಿಟ್ಟು ಮೂವರು ತರುಣರು ಊಟದ ಹೊತ್ತಿಗೆ ಬಂದರು. ನಾನು ಬ್ರಿಟಿಷ್ ಅಧಿಕಾರಿಗಳ ಜತೆ ಊಟ ಮಾಡುತ್ತಿದ್ದೆ. 'ಅತಿಥಿ'ಗಳು ಹೊರಗೆ ಕಾಯುತ್ತಿದ್ದಾಗ 'ಶೇಷ್' ನಮ್ಮ ಕೋಣೆಗೆ ನುಗ್ಗಿದರು.

"ಅವರು ಬಂದಿದ್ದಾರೆ ಜೈ, ಬಹುಶಃ ಅವರಿಗೆ ಸ್ವಲ್ಪ ಊಟ ಬೇಕಾಗಿದೆ".

ಶೇಷ್ ನನ್ನ ಕಿವಿಯಲ್ಲಿ ಉಸುರಿದರು.

(ಮುಂದುವರಿಯುವುದು)

ಬರಹಗಾರರ ಶಿಬಿರ

ದುಡಿವ ಜನರ ಪ್ರಾಣಮಿತ್ರನಾಗಿರುವ ಐಕ್ಯರಂಗ ಹೊಸ ಸ್ವರೂಪ-ಹೊಸ ವಿನ್ಯಾಸದಲ್ಲಿ ಹೊರಬರುತ್ತಿದೆ. ಈ ಪ್ರಕ್ರಿಯೆಯನ್ನು ಇನ್ನೂ ಹೆಚ್ಚು ಉತ್ತಮಗೊಳಿಸಲು ಬರಹಗಾರರಿಗೆ ತರಬೇತಿ ಶಿಬಿರವನ್ನು ಸಂಘಟಿಸಲಾಗುತ್ತಿದೆ. ಈ ಶಿಬಿರದಲ್ಲಿ ರಾಷ್ಟ್ರದ ಹಿರಿಯ ಮಾರ್ಕ್ಸ್‌ವಾದಿ ಚಿಂತಕರಾದ ಕಾಂ. ಪಿ.ಗೋವಿಂದ ಪಿಳ್ಳೆಯವರು ಉಪನ್ಯಾಸ ನೀಡಲು ಒಪ್ಪಿದ್ದಾರೆ. ಅಲ್ಲದೇ ಎರಡೂ ದಿನಗಳೂ ಪ್ರಾಯೋಗಿಕ ಸೈದ್ಧಾಂತಿಕ ಉಪನ್ಯಾಸಗಳನ್ನು ತಜ್ಞರಿಂದ ಯೋಜಿಸಲಾಗಿದೆ.

ಇದು ವಿಶೇಷ ಯತ್ನ,
ನಿಮ್ಮ ಬೆಂಬಲವಿರಲಿ.

ಶಿಬಿರದ ದಿನಗಳು
ಏಪ್ರಿಲ್ 12-13, 2003 ರಂದು
ಬೆಂಗಳೂರಿನಲ್ಲಿ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಏಪ್ರಿಲ್ 12, 13, 2003
ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯ ಮಟ್ಟದ ಅಧ್ಯಯನ ಶಿಬಿರ, ಗಂಗಾವತಿ

ಏಪ್ರಿಲ್ 12, 13 - 2003
ಐಕ್ಯರಂಗ ಪತ್ರಿಕಾ ಬರಹಗಾರರ ಕಾರ್ಯಾಗಾರ

ಏಪ್ರಿಲ್ 27 ರಿಂದ 30, 2003
ಡಿವೈಎಫ್‌ಐ ನೇತೃತ್ವದಲ್ಲಿ ರಾಜ್ಯಮಟ್ಟದ ಯುವಜನ ಶಿಬಿರ - ಉದ್ಯೋಗ ಹಾಗೂ ಕೋಮು ಸೌಹಾರ್ದತೆಗಾಗಿ. ಚಿಕ್ಕಬೇಗೂರು ಗೇಟ್, ಹೊಸೂರು ರಸ್ತೆ, ಬೆಂಗಳೂರು

ಮೇ 5, 2003
ವಿದ್ಯುತ್ ಪಂಪ್‌ಸೆಟ್ ಹಾಗೂ ಭಾಗ್ಯಜ್ಯೋತಿ ಬಳಕೆದಾರರ ಸಂಘದಿಂದ ದರ ಏರಿಕೆ, ಮೀಟರೀಕರಣ, ಖಾಸಗೀಕರಣ ವಿರುದ್ಧ ರಸ್ತೆ ತಡೆ

ಮೇ 21, 2003
ಕೇಂದ್ರ ಸರ್ಕಾರದ ಆರ್ಥಿಕ ನೀತಿ, ಕೋಮುವಾದಿ ನೀತಿಗಳ ವಿರುದ್ಧ ಅಖಿಲ ಭಾರತ ಮುಷ್ಕರ

ರಾಯಚೂರು: ಸಂಬಳ ಕೇಳಿದರೆ ಲಾಠಿ ಏಟು!

ವರುಷವಾದರೂ ಸಂಬಳವೇ ನೀಡದ ಜಿಲ್ಲಾಪಂಚಾಯತ್ ಎದುರು 'ಸಂಬಳ ನೀಡಿ ಜೀವನ ಉಳಿಸಿ' ಎಂದು ಶಾಂತಿಯುತವಾಗಿ ಪ್ರತಿಭಟಿಸಿದ ನೌಕರರ ಮೇಲೆ ಪೋಲೀಸರು ಅಮಾನುಷ ದೌರ್ಜನ್ಯ ಎಸಗಿದ್ದಾರೆ. ಸಂಬಳದಲ್ಲಿ ಸಾಲ ತೀರಿಸಲಾಗದೆ ಗುಲ್ಬರ್ಗಾದಲ್ಲಿ ಒಬ್ಬ ಆತ್ಮಹತ್ಯೆ ಮಾಡಿಕೊಂಡ. ದುಡಿವ ಜನರ ಹೋರಾಟ ದಮನಿಸಲು ಪೋಲೀಸರ ಬಳಕೆಯು ಹೆಚ್ಚುತ್ತಿದೆ. ಕಾಂಗ್ರೆಸ್ ದುರಾಡಳಿತದ ವೈಖರಿಗೆ ಇಲ್ಲಿದೆ ಈಚಿನ ಉದಾಹರಣೆ

ಬಾಕಿ ಇರುವ ಸಂಬಳ ಕೇಳಿದ ಗ್ರಾಮ ಪಂಚಾಯತ್ ನೌಕರರ ಮೇಲೆ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ಪೋಲೀಸರು ಲಾಠಿ ಚಾರ್ಜ್ ಮಾಡಿದ ಘಟನೆ ಮಾರ್ಚ್ 22 ರಂದು ರಾಯಚೂರಿನಲ್ಲಿ ನಡೆದಿದೆ. ಲಾಠಿ ಏಟಿನಿಂದ ಹನುಮಂತಪ್ಪ ಚಲುವಾದಿ ಎಂಬ ನೌಕರ ಜೀವನ್ಮರಣ ಸ್ಥಿತಿಯಲ್ಲಿ ಇದ್ದಾನೆ. ಅನೇಕ ನೌಕರರು ಹಾಗೂ ಮುಖಂಡರುಗಳು ಗಾಯಗೊಂಡಿದ್ದಾರೆ. ಗ್ರಾಮ ಪಂಚಾಯತಗಳು ಸಂಬಳ ನೀಡಲಾರದ ಪರಿಸ್ಥಿತಿಗೆ ಬಂದಿವೆ.

ಸ್ವಾತಂತ್ರ್ಯ ಗಳಿಸಿ 55 ವರ್ಷ ಗತಿಸಿದರು ಗಾಂಧೀಜಿಯ ರಾಮರಾಜ್ಯದ ಕನಸು ಕನಸಾಗಿ ಉಳಿದಿದೆ. ಹಳ್ಳಿಗಳ ಪ್ರಗತಿಯೇ ದೇಶದ ಪ್ರಗತಿ ಎಂಬ ಘೋಷಣೆ ಹುಸಿಯಾಗಿ ಹೋಗಿದೆ.



ಲಾಠಿ ಏಟಿನಿಂದ ತಲೆ ಒಡೆದು ನೆಲಕ್ಕುರುಳಿದ ಹನುಮಂತಪ್ಪ. ರಕ್ತ ಹರಿದಿರುವುದು ಕಾಣುತ್ತಿದೆ.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರದ ಪಂಚಾಯತ್ ರಾಜ್ ವ್ಯವಸ್ಥೆ ಸಾಮಾಜಿಕ ಮತ್ತು ರಾಜಕೀಯ ಭದ್ರತೆಯನ್ನು ಒದಗಿಸಿರುವುದು ವಿರೋಧಿಗಳನ್ನು ಬೆರಗುಗೊಳಿಸಿದೆ. ರಾಮಕೃಷ್ಣ ಹೆಗಡೆ ನೇತೃತ್ವದ ಕರ್ನಾಟಕ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಿ ನಜೀರ್ ಸಾಬರಿಂದ ಪಶ್ಚಿಮ ಬಂಗಾಳದ ಮಾದರಿಯ ಪಂಚಾಯತ್ ರಾಜ್ ಉದಯಿಸಿತು. ಪರಿಶಿಷ್ಟ ಜಾತಿ/ಪಂಗಡ, ಮಹಿಳೆ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಏನೆಲ್ಲಾ ಒದಗಿಸಿದರೂ, ಭೂಮಾಲೀಕರ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಿಂದ ಹಳ್ಳಿಗಳನ್ನು ಬಿಡಿಸಲಾಗಲಿಲ್ಲ. ಪಶ್ಚಿಮ ಬಂಗಾಳದಂತೆ ಸ್ವಾಯತ್ತತೆ ದೊರೆಯಲಿಲ್ಲ. ಹಣಕಾಸಿನ ನೆರವು ಸಿಗಲಿಲ್ಲ. ಬಂದಂತಹ ಅನುದಾನವು 'ಜನಪ್ರತಿನಿಧಿ ಗಳ' 'ಪರ್ಸೆಂಟೇಜ್'ಗಾಗಿ ಬಡಿದಾಡು ವಂತಾಗಿದೆ. (ಪರ್ಸೆಂಟೇಜ್‌ಗಾಗಿ ರಾಯಚೂರು ತಾಲೂಕ ಪಂಚಾಯತಿ ಸಭೆಯನ್ನು ಆಡಳಿತ ಪಕ್ಷದವರೇ ಬಹಿಷ್ಕರಿಸಿದ್ದಾರೆ)

ಗ್ರಾಮೀಣ ಅಭಿವೃದ್ಧಿ ಇರಲಿ, ಅಲ್ಲಿ ಕೆಲಸ ಮಾಡುವ ನೌಕರರಿಗೆ ಸಂಬಳ ನೀಡಲಾರದ ಪರಿಸ್ಥಿತಿ ಬಂದಿದೆ. ಇವರ ಸಂಬಳ ಎಷ್ಟು ಗೊತ್ತೆ? ಕರ್ನಾಟಕ ರಾಜ್ಯ ಸರಕಾರ ನಿಗದಿಪಡಿಸಿ 1999 ರಲ್ಲಿ ಒಂದು ಸುತ್ತೋಲೆ ಹೊರಡಿಸಿದೆ. (ಸುತ್ತೋಲೆ ಸಂಖ್ಯೆ : ಸರ್ಕಾರದ ಆದೇಶ, ಗ್ರಾಅಪ24, ಗ್ರಾಪಂಸಿ9ರ ಬೆಂಗಳೂರು ದಿನಾಂಕ 24ನೇ ಜೂನ್ 1999). ಸುತ್ತೋಲೆ ಪ್ರಕಾರ ಬಿಲ್ ಕಲೆಕ್ಟರ್/ಗುಮಾಸ್ತ/ ಬೆರಳಚ್ಚುಗಾರರಿಗೆ ಕನಿಷ್ಠ ರೂ. 1000, ಗರಿಷ್ಠ ರೂ. 1200 ವಾಲ್‌ಮ್ಯಾನ್/ ಪಂಪ್ ಆಪರೇಟರ್/ ಮೆಕ್ಯಾನಿಕ್ ಗಳಿಗೆ ರೂ. 800-1000. ಮತ್ತು ಸಿಪಾಯಿ / ಪರಿಚಾಲಕ ಕಸ ಗುಡಿಸುವವರಿಗೆ ರೂ. 700 - 800 ಗಳಿಗಿಂತ ಕಡಿಮೆ ಮತ್ತು ಹೆಚ್ಚು ಇರ ಬಾರದೆಂದು ಆದೇಶಿಸಿದೆ. ಆದರೆ ಅನೇಕ ಗ್ರಾಮ ಪಂಚಾಯತಿಗಳಲ್ಲಿ ಜಾರಿಗೊಳಿಸಿಲ್ಲ. ನೀಡುತ್ತಿರುವ ಅತ್ಯಂತ ಕಡಿಮೆ ಸಂಬಳ ರೂ. 300 ರಿಂದ 600 ವನ್ನು ಸಹ ವರ್ಷಗಳಾದರು ನೀಡುತ್ತಿಲ್ಲ.



ಪೋಲೀಸರ ಅರ್ಭಟ

ಅತ್ಯಂತ ಹಿಂದುಳಿದ ರಾಯಚೂರು ಜಿಲ್ಲೆಯಲ್ಲಿ 164 ಗ್ರಾಮ ಪಂಚಾಯತಿಗಳು ಇದ್ದು ಇದರಲ್ಲಿ 632 ಗ್ರಾಮ ಪಂಚಾಯತಿ ನೌಕರರು ಕೆಲಸ ಮಾಡುತ್ತಾರೆ. ಇವರ್‍ಯಾರಿಗು ಕನಿಷ್ಠ ಸೌಲಭ್ಯ ಮತ್ತು ಸರಿಯಾದ ವೇತನ ಸಿಗುತ್ತಿಲ್ಲ. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ (ಸಿಐಟಿಯು ಸಂಯೋಜಿತ) ನೇತೃತ್ವದಲ್ಲಿ ಅನೇಕ ಹೋರಾಟಗಳನ್ನು ಮಾಡುತ್ತಾ ಕೆಲವೆಡೆ ಜಾರಿಗೊಳಿಸಲಾಗಿದೆ, ಇನ್ನೂ ಹಲವೆಡೆ ಆದೇಶ ಜಾರಿಗೊಳಿಸಿಲ್ಲ. ನೌಕರರನ್ನು ಮನಸ್ಸಿಗೆ ಬಂದಂತೆ ವಜಾ ಮಾಡುತ್ತಿದ್ದರು. ವಿದ್ಯುತ್ ಕಬ್ಬಿಣಕಂಬದಿಂದ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರು ಒದಗಿಸುವುದು ಕಷ್ಟವಾಗಿದೆ. ದಿನದ 24 ಗಂಟೆ ಶ್ರಮಿಸಬೇಕು. ಸೈಕಲ್, ಬ್ಯಾಟರಿಗಳಂತ ಕನಿಷ್ಠ ಸೌಲಭ್ಯಗಳನ್ನು ನೀಡುತ್ತಿಲ್ಲ.

ಆದ್ದರಿಂದ ನೌಕರರ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ತರಲು ಮಾರ್ಚ್ 22 ರಂದು ರಾಜ್ಯ ಅಧ್ಯಕ್ಷ ಮಾರುತಿ ಮಾನಪಡೆ ನೇತೃತ್ವದಲ್ಲಿ ಜಿಲ್ಲಾ ಪಂಚಾಯತ್ ಮುತ್ತಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಸ್ ಸೌಕರ್ಯ ಇಲ್ಲದವರು ಒಂದು ದಿನ ಮುಂಚಿತವಾಗಿ ಮತ್ತು ಕೆಲವರು ಅಂದು ಮುಂಜಾನೆ ತಾಲೂಕು ಪಂಚಾಯತ್ ಕಛೇರಿ ಮುಂದೆ ಸೇರಿದರು. ಗ್ರಾಮ ಪಂಚಾಯತ್ ನೌಕರರ ಬೃಹತ್ ಮೆರವಣಿಗೆ ಜಿಲ್ಲಾ ಪಂಚಾಯತ್ ಸಭೆ ನಡೆಯುವ ಕ್ಲಬ್‌ಹಾಲ್‌ಗೆ ಬಂದಿತು. ಸಭೆಯಲ್ಲಿ ಜಿಲ್ಲೆಯ ಶಾಸಕರು, ಜಿಲ್ಲಾ ಪಂಚಾಯತ್ ಸದಸ್ಯರು, ಅಧಿಕಾರಿಗಳು ಹಾಗೂ ಇನ್ನೂ ಅನೇಕ ಜನಪ್ರತಿನಿಧಿಗಳು ಭಾಗವಹಿಸಿದ್ದರು. ಶಾಂತ ರೀತಿಯಲ್ಲಿ ಸಂಬಂಧಪಟ್ಟ

ಪುಟ 5 ನೋಡಿ

ಗಂಗಾವತಿ

VRL ತಾಳಕ್ಕೆ ಕುಣಿಯುತ್ತಿರುವ ಪೋಲೀಸರು ಸೆಟೆದು ನಿಂತ ಹಮಾಲಿ ಕಾರ್ಮಿಕರು

ಉದ್ಯೋಗದಾತನೆಂದು ಕೀರ್ತಿ ಪದಕ ಪಡೆದ 'ಸಾರಿಗೆ-ಪತ್ರಿಕೆಗಳ ಉದ್ಯಮದಾರ' ಬಿಜೆಪಿ ಸಂಸತ್ ಸದಸ್ಯ ವಿಆರ್‌ಎಲ್ ಮಾಲೀಕ ವಿಜಯಸಂಕೇಶ್ವರ ಮತ್ತು ಅವರ ಪಡೆ ಗಂಗಾವತಿಯ ಹಮಾಲರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯ ಕಥೆಯಿಲ್ಲಿದೆ. ನ್ಯಾಯಸಮ್ಮತ ಕೂಲಿ ಕೇಳಿದ ಹಮಾಲರ ಮೇಲೆ ಪೋಲೀಸರಿಂದ ದೌರ್ಜನ್ಯ ನಡೆಸಿದ್ದಲ್ಲದೇ ಹಮಾಲರ ಮೇಲೆಯೇ ಕೊಲೆ ಆರೋಪದ ಸುಳ್ಳು ಕೇಸ್ ಹಾಕಿಸಿ, ಜೈಲಿಗೆ ದಬ್ಬಿದ 'ಧರ್ಮಾತ್ಮ' ಈ ವಿಜಯ ಸಂಕೇಶ್ವರ್. 'ಹಿಂದೂಗಳೆಲ್ಲಾ ಒಂದು ಬಂಧು' ಎಂದು ಬೊಗಳೆ ಹೊಡೆಯುವ ಈ 'ಚಿಡ್ಡಿ ವೀರ'ನಿಗೆ ದುಡಿವ ಬಡ ಹಮಾಲರು ಹಿಂದುಗಳಂತೆ ಕಾಣಲಿಲ್ಲವೇ? ಮಾಲೀಕರು-ಸುಲಿಗೆಕಾರರು ಮಾತ್ರವೇ ಅವರ ಹಿಂದು-ಬಂಧುಗಳೇ? ಕಾನೂನು-ಶಾಂತಿ ಪಾಲಿಸಬೇಕಾದ ಪೋಲೀಸರು ಮಾಲೀಕರ ಕಾಲು ನೆಕ್ಕುವ ನೀಚ ಮಟ್ಟಕ್ಕೆ ಇಳಿದಿದ್ದ್ಯಾಕೆ? ಕಾಂಗ್ರೆಸ್ ಮಂತ್ರಿಗಳೂ ಸಂತ್ರಿಗಳ ಜೊತೆ ಸೇರಿಕೊಂಡಿದ್ದಾರೆಯೇ? ಹಮಾಲರು ಗಂಭೀರ ಸ್ಥಿತಿಯಲ್ಲೂ ದಿಟ್ಟ ಹೋರಾಟ ಮುಂದುವರಿಸಿರುವ ವರದಿಯಿಲ್ಲಿದೆ.

VRL ಟ್ರಾನ್ಸ್‌ಪೋರ್ಟ್ ಸಾರಿಗೆ ಉದ್ಯಮದಲ್ಲಿ ಕರ್ನಾಟದಲ್ಲಿಯೇ ದೊಡ್ಡ ಸಂಸ್ಥೆ. ವಿಜಯ ಸಂಕೇಶ್ವರ ಇದರ ಮಾಲೀಕರು. ಇವರು ಬಿಜೆಪಿ ಪಕ್ಷದ ಎಂ.ಪಿ. ಕೂಡ. ಜನಪ್ರತಿನಿಧಿಯಾಗಿ ಜನರ ಕಷ್ಟಸುಖಗಳಿಗೆ ಸ್ಪಂದಿಸಬೇಕಾದಂತಹ ಇವರ ಸಂಸ್ಥೆಯಲ್ಲಿ ಕಾರ್ಮಿಕರು ಮತ್ತು ಹಮಾಲಿಗಳನ್ನು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಇದಕ್ಕೆ ಸ್ಪಷ್ಟ ಉದಾಹರಣೆ ಈ ಸಂಸ್ಥೆಯ ಗಂಗಾವತಿ ಶಾಖೆಯಲ್ಲಿ ಕಾರ್ಮಿಕರ ದಮನಕ್ಕೆ ಇಳಿದಿರುವ ಅಲ್ಲಿನ ಏಜೆಂಟ್ ಮತ್ತು ಅವರಿಗೆ ಅಡಿಯಾಳುಗಳಾಗಿ ವರ್ತಿಸುತ್ತಿರುವ ಪೋಲೀಸರು.

ಗಂಗಾವತಿ ತಾಲೂಕಿನಲ್ಲಿ ಹಮಾಲಿಗಳು ಮತ್ತು ಇತರ ಕಾರ್ಮಿಕರು ತಮ್ಮ ಹಕ್ಕುಗಳು ರಕ್ಷಿಸಿಕೊಳ್ಳಲು ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿದ್ದಾರೆ. ಇದನ್ನು ಸಹಿಸದ ಮಾಲೀಕ ವರ್ಗ ತಮ್ಮದೊಂದು ಸಂಘಟನೆ ಮಾಡಿಕೊಂಡು ಕಾರ್ಮಿಕರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾ ಜನರಿಗೆ ತಪ್ಪು ತಿಳುವಳಿಕೆ ಬರುವ ಹಾಗೆ ಕಾರ್ಮಿಕರ ಬಗ್ಗೆ ಅಪಪ್ರಚಾರ ನಡೆಸುತ್ತಿದ್ದಾರೆ. ಈಗಾಗಲೇ ಕಾರ್ಮಿಕರು ಮತ್ತು ಮಾಲೀಕರ ನಡುವೆ ಒಪ್ಪಂದವಾಗಿ ದರ ನಿಗದಿಯಾಗಿ ಅದರಂತೆ ಹಮಾಲಿಯನ್ನು ನೀಡುತ್ತಿದ್ದರು. ಆದರೆ ಈಗ ಪ್ರತಿದಿನ ಹಮಾಲಿ ಕೊಡುವಾಗ ಬೇಕೆಂತಲೇ ಜಗಳ ತೆಗೆದು, ಹಮಾಲಿ ಕಡಿಮೆ ಕೊಡುವುದು, ಇಲ್ಲವೇ ಕೊಡದೇ ಸತಾಯಿಸುತ್ತಾರೆ. ಇದನ್ನು ಪ್ರತಿಭಟಿಸುವ ಕಾರ್ಮಿಕರ ಮೇಲೆ ಮತ್ತು ನಾಯಕರುಗಳ ಮೇಲೆ ಪೋಲೀಸರಿಗೆ ದೂರು ನೀಡುವುದು, ಇವರ ದೌರ್ಜನ್ಯ ಹೆಚ್ಚಾಗಿದೆ, ಈ ಹಮಾಲರು ಬೇಡ, ಬೇರೆ ರಾಜ್ಯದಿಂದ ಹಮಾಲರನ್ನು ಕರೆಸಿಕೊಳ್ಳುತ್ತೇವೆ ಎನ್ನುತ್ತಾರೆ. ಈ ಮಾಲೀಕರುಗಳು ಕೊಡುವ ಪ್ರಸಾದಕ್ಕೆ ಬಾಯ್ತೆರೆದು ನಿಂತ ಪೋಲೀಸರು ಹಮಾಲಿಗಳನ್ನು ಕರೆದು 'ನಿಮ್ಮದು ಅತಿಯಾಗಿದೆ, ಹುಷಾರಾಗಿರಿ' ಎಂದ ಹೆದರಿಸಿ ಬೆದರಿಸುವುದನ್ನು ಮಾಡುತ್ತಿದ್ದಾರೆ.

ಹಮಾಲಿ ಕೇಳಿದರೆ ವಜಾ

ವಿ.ಆರ್.ಎಲ್.ನಲ್ಲಿ ಕೆಲಸ ಮಾಡುತ್ತಿದ್ದ 8 ಜನ ಹಮಾಲಿಗಳು ತಮಗೆ ನೀಡುತ್ತಿರುವ ಹಮಾಲಿ ಕಡಿಮೆ, ಹೆಚ್ಚು ನೀಡಬೇಕೆಂದು ನೋಟೀಸ್ ನೀಡಿದಕಾರಣಕ್ಕೆ ಈ ಹಮಾಲಿಗಳನ್ನು ವಿಆರ್‌ಎಲ್ ನವರು ವಜಾ ಮಾಡಿದ್ದಾರೆ. ಇದೇ ಗಂಗಾವತಿಯಲ್ಲಿ ಬೇರೆಡೆ ಒಂದು ಟನ್ ಲೋಡ್, ಅನ್‌ಲೋಡ್ ಮಾಡಿದರೆ 26 ರೂ. ಇದ್ದು ವಿಆರ್‌ಎಲ್‌ನಲ್ಲಿ ಮಾತ್ರ ಇದು ಕೇವಲ 17 ರೂಪಾಯಿಯಾಗಿದೆ. ಮತ್ತು ಹಗುರವಾದ ವಸ್ತುಗಳಿಗೂ ಕೂಡಾ ಟನ್ ಲೆಕ್ಕದಲ್ಲಿ ಹಮಾಲಿ ಕೊಡುತ್ತಿದ್ದಾರೆ. ಇದೆಲ್ಲವನ್ನು ಪ್ರತಿಭಟಿಸಿದಾಗ ಮಾಲೀಕರು ಈ ಕೆಲಸವನ್ನು ಬೇರೆಯವರಿಗೆ ಮಾಡಲು ಅವಕಾಶ ನೀಡದಾಗ ಅದನ್ನು ವಿರೋಧಿಸಿದ್ದಕ್ಕೆ ಇದ್ದಾಗ ನ್ಯಾಯಾಲಯದಿಂದ ಇಂಜಕ್ಷನ್ ಆದೇಶ ತಂದು ಈ ಕೆಲಸಗಾರರು ಹತ್ತಿರುವು ಸುಳಿಯದ ಹಾಗೆ ಮಾಡಿದ್ದಾರೆ.

ಮಾಲೀಕರ ಪರ ಬೆಂಗಾವಲಾಗಿ ನಿಂತಿರುವ ಪೋಲೀಸ್ ಅಧಿಕಾರಿಗಳು

ಗಂಗಾವತಿಯ ಡಿವೈಎಸ್‌ಪಿ ಸುಭಾಷ್ ಗುಡಿಮನಿ ಹಾಗೂ ಪೋಲೀಸ್ ಇನ್ಸ್‌ಪೆಕ್ಟರ್ ಶಾಂತಕುಮಾರ ಇಬ್ಬರೂ ಸೇರಿ ಕಾರ್ಮಿಕರಿಗೆ ಪದೇ ಪದೇ ಕಿರುಕುಳ ನೀಡುವುದು, ಮುಖಂಡರಿಗೆ ಬೆದರಿಕೆ ಹಾಕುತ್ತಾ ಮಾಲೀಕರು ತಮಗೆ ಯಾರಿಂದ ಅನುಕೂಲವೋ ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಾರೆ. ನೀವು ಅದನ್ನು ಪ್ರಶ್ನಿಸುವ ಹಾಗಿಲ್ಲ. ಯಾರು ಎಲ್ಲಿಬೇಕಾದರೂ ಕೆಲಸ ಮಾಡಬಹುದು. ಬೇರೆ ರಾಜ್ಯದವರು ಇಲ್ಲಿ ಮಾಡಬಹುದು. ನೀವು ಬೇಕಾದರೆ ಬೇರೆಡೆ ಹೋಗಿ ಎಂದು ಹೇಳುತ್ತಾ ಅವರ ಗಾಡಿಗಳನ್ನು ತಡೆಯುವುದು ಮಾಡಿದರೆ ನಿಮ್ಮ ಮೇಲೆ ಕೇಸ್ ಹಾಕಿ ಒಳಗೆ ಹಾಕುತ್ತೇವೆ ಎಂದು ಬೆದರಿಸುವುದು ಮಾಡುತ್ತಿದ್ದಾರೆ. ಮಾಲೀಕರಿಗೂ ಕಾರ್ಮಿಕರಿಗೂ

ಪುಟ 11 ಕ್ಕೆ

ಸುಪ್ರೀಂ ಕೋರ್ಟ್ ತೀರ್ಪೊಂದನ್ನು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯತ್ತಿನ ಮೇಲೆ ಆತಂಕದ ಕಪ್ಪುಮೋಡ ಆವರಿಸುವಂತೆ ಮಾಡಿದೆ. ಉನ್ನತ ಶಿಕ್ಷಣದಿಂದ ಸಾಮಾನ್ಯರ ಮಕ್ಕಳನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದೆ. ಇದನ್ನೇ ಬಳಸಿಕೊಂಡು ವೈದ್ಯಕೀಯ - ತಾಂತ್ರಿಕ ಶಿಕ್ಷಣದ 'ವ್ಯಾಪಾರಿ'ಗಳು ತಾವೇ ಪರಮೋಚ್ಛ ಎಂದು ವಾದಿಸುತ್ತಿದ್ದಾರೆ. ಜನಹಿತ ಕಾಯಲು ಬದ್ಧವಾದ ಸರ್ಕಾರ, ಇತಿಮಿತಿಯಲ್ಲೂ ದೃಢ ನಿಲುವು ತಾಳುತ್ತಿಲ್ಲ. ಕಾರಣ ಸ್ಪಷ್ಟ. ಇಂತಹ 'ವ್ಯಾಪಾರಿ'ಗಳ ದೊಡ್ಡ ದಂಡು ಕೃಷ್ಣರ ಆಡಳಿತ ಪಕ್ಷದ ಶಾಸಕರು, ಸಚಿವರುಗಳಾಗಿ ಬೀಡು ಬಿಟ್ಟಿವೆ. ಹೀಗಾಗಿಯೇ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಜಾಗತೀಕರಣ-ಉದಾರೀಕರಣದ ಬಿರುಗಾಳಿ ನ್ಯಾಯಾಲಯ, ಸರ್ಕಾರಗಳ ಸಾಮಾಜಿಕ ನ್ಯಾಯದ ಮೂಲ ಚಿಂತನೆಯನ್ನೇ ಬುಡಮೇಲುಗೊಳಿಸುತ್ತಿದೆ. ಈ ಸಮಸ್ಯೆಯ ಸ್ವರೂಪವೇನು? ಮುಂದಿನ ಹಾದಿಯೇನು? ಎಂದು ವಿಶ್ಲೇಷಿಸುವ ಲೇಖನವಿಲ್ಲಿ...

ಗೊಂದಲದಲ್ಲಿ ಸಿಇಟಿ ಸುಪ್ರೀಂ ಕೋರ್ಟ್ ತೀರ್ಪು : ಸಾಮಾನ್ಯರ ಭವಿಷ್ಯವೇನು?

ಕೃಷ್ಣೇಗೌಡ .ಬಿ.ಎಲ್

ದೇಶದ ಸರ್ವೋಚ್ಛ ನ್ಯಾಯಾಲಯವು ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ತೀರ್ಪೊಂದನ್ನು ನೀಡಿದೆ. ಈ ತೀರ್ಪಿನ ಅನ್ವಯ ಸರ್ಕಾರದಿಂದ ಅನುದಾನ ಪಡೆಯದಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರವು ಯಾವುದೇ ರೀತಿಯ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದುವಂತಿಲ್ಲ. ಅಂದರೆ ಪ್ರವೇಶ, ಶುಲ್ಕ, ಇತರೆ ಅಂಶಗಳಿಗೆ ಸಂಬಂದಪಟ್ಟಂತೆ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯೇ ಅಂತಿಮ ಅನ್ನುವ ರೀತಿಯಲ್ಲಿ ಈ ತೀರ್ಪು ಹೇಳುತ್ತದೆ.

ಈ ತೀರ್ಪಿನಿಂದ ಒಂದು ಕಡೆ ಚುನಾಯಿತ ಸರ್ಕಾರಗಳ ಸಂವಿಧಾನ ಬದ್ಧ ಅಧಿಕಾರವನ್ನೇ ಪ್ರಶ್ನೆ ಮಾಡುವಂತಹ ಸನ್ನಿವೇಶ ಸೃಷ್ಟಿಯಾಗಿದ್ದರೆ, ಮತ್ತೊಂದೆಡೆ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಸುಗ್ಗಿಯ ವಾತಾವರಣ ಸೃಷ್ಟಿಸಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕದಲ್ಲಿ ಮುಳುಗುವಂತೆ ಮಾಡಿದೆ.

ಅರಣ್ಯ ನ್ಯಾಯ Vs ಸಾಮಾಜಿಕ ನ್ಯಾಯ

80 ರ ದಶಕದಲ್ಲಿ ಕರ್ನಾಟಕವೂ ಸೇರಿದಂತೆ ದೇಶದ ಅನೇಕ ರಾಜ್ಯಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಅದರಲ್ಲೂ ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ಶಿಕ್ಷಣವನ್ನು ಮನಸೋ ಇಚ್ಛೆ, ಮಾರಾಟ ಮಾಡುತ್ತಿದ್ದವು. ಅವುಗಳು ಯಾರಿಗೆ ಸೀಟು ನೀಡಬೇಕು, ಮೀಸಲಾತಿ, ಸಾಮಾಜಿಕ ನ್ಯಾಯ, ಶುಲ್ಕ, ಡೊನೇಷನ್ ಕುರಿತಂತೆ ಸರ್ಕಾರಕ್ಕೆ ಯಾವುದೇ ಆಡಳಿತಾತ್ಮಕ ನಿಯಂತ್ರಣವಿರಲಿಲ್ಲ. ಈ ಮುಕ್ತ ಸನ್ನಿವೇಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳು ಜನರನ್ನು ಲೂಟಿ ಮಾಡಿದ್ದಕ್ಕೆ ಮಿತಿಯೇ ಇಲ್ಲ. ಕೇವಲ ಬೆರಳೆಣಿಕೆಯಷ್ಟಿದ್ದ ಸರ್ಕಾರಿ ಕಾಲೇಜುಗಳಲ್ಲಿ ಮೆರಿಟ್ ಮತ್ತು ಮೀಸಲಾತಿ ಆಧಾರದಲ್ಲಿ ಸೀಟುಗಳು ಕಡಿಮೆ ಶುಲ್ಕಕ್ಕೆ ಹಂಚಿಕೆಯಾಗುತ್ತಿದ್ದವ ಎಂಬುದನ್ನು ಬಿಟ್ಟರೆ, ಖಾಸಗಿ ಕಾಲೇಜುಗಳಲ್ಲಿ ಯಾರು ಹೆಚ್ಚು ಹಣ ನೀಡುತ್ತಾರೆ ಎಂಬುದರ ಆಧಾರದಲ್ಲಿ ಸೀಟುಗಳ ಹಂಚಿಕೆಯಾಗುತ್ತಿದ್ದವು. ಅಲ್ಲಿ ಅರಣ್ಯ ನ್ಯಾಯವನ್ನು ಬಿಟ್ಟರೆ ಯಾವ ಸಾಮಾಜಿಕ ನ್ಯಾಯಕ್ಕೂ ಅವಕಾಶವೇ ಇರಲಿಲ್ಲ. ಎನ್.ಆರ್.ಐ.ಗಳು ಶ್ರೀಮಂತರಿಗೆ ಮಾತ್ರವೇ ವೈದ್ಯಕೀಯ - ಇಂಜನಿಯರಿಂಗ್ ಶಿಕ್ಷಣದ ಕನಸು ಕಾಣಲು, ಅದನ್ನು ಕೊಂಡುಕೊಳ್ಳಲು ಸಾಧ್ಯವಿತ್ತು. ಈಗಿರುವ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಬಹಳಷ್ಟು ಕಾಲೇಜುಗಳು 80 ರ ದಶಕದಲ್ಲಿ ಆರಂಭವಾದವುಗಳೇ.

ಇದರ ವಿರುದ್ಧವಾಗಿ ಎಸ್.ಎಫ್.ಐ ಸೇರಿದಂತೆ ಅನೇಕ ವಿದ್ಯಾರ್ಥಿ- ಪ್ರಗತಿಪರ ಜನ ಸಂಘಟನೆಗಳು ನಿರಂತರವಾಗಿ ಧ್ವನಿಯೆತ್ತಿವೆ. ಇಂತಹ ಸಂದರ್ಭದಲ್ಲಿ ಕೇರಳ ಮೂಲದ ಕೆ.ಪಿ.ಉನ್ನಿಕೃಷ್ಣನ್ ಎಂಬುವರು ಸುಪ್ರೀಂ ಕೋರ್ಟಿನಲ್ಲಿ ದಾವೆ ಹೂಡಿ ಈ ರೀತಿಯ ವ್ಯಾಪಾರೀಕರಣಕ್ಕೆ ತಿಲಾಂಜಲಿ ಹಾಡಬೇಕು, ರೋಸ್ಟರ್ ಪದ್ಧತಿಯ ಆಧಾರದಲ್ಲಿ ಸೀಟುಗಳನ್ನು ಹಂಚಬೇಕೆಂದು ಮನವಿ ಮಾಡಿದರು. ಉನ್ನಿಕೃಷ್ಣನ್ ರವರ ದಾವೆಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಸುಪ್ರಿಂ ಕೋರ್ಟ್ ಹಲವಾರು ಸುತ್ತಿನ ವಾದ-ವಿವಾದಗಳ ನಂತರ 1994 ರಲ್ಲಿ ಈ ರೀತಿಯ ಅನಿಯಂತ್ರಿತ ವ್ಯಾಪಾರೀಕರಣವನ್ನು ತಡೆಗಟ್ಟಬೇಕು, ಸಾಮಾಜಿಕ ನ್ಯಾಯಕ್ಕೆ ಆಸ್ಪದವಿರ ಬೇಕು, ಉಚಿತ ಸೀಟುಗಳೆಷ್ಟು, ಡೊನೇಷನ್ ಸೀಟುಗಳೆಷ್ಟು, ಡೊನೇಷನ್ ಎಷ್ಟಿರಬೇಕು, ಆಡಳಿತ ಮಂಡಳಿಗಳಿಗೆ ವಿವೇಚನಾ ಕೋಟಾ ಏನಿರಬೇಕು ಎಂಬುದರ ಕುರಿತು ತಕ್ಷಣವೇ ರಾಜ್ಯ ಸರ್ಕಾರಗಳು ನೀತಿಗಳನ್ನು ರೂಪಿಸ ಬೇಕೆಂದು ತನ್ನ ತೀರ್ಪಿನಲ್ಲಿ ತಿಳಿಸಿತು.

ಈಗಿರುವ ಶುಲ್ಕದ ವಿವರ

ಇಂಜನಿಯರಿಂಗ್	ಉಚಿತ ಸೀಟು	ಪಾವತಿಸೀಟು
ಸರ್ಕಾರಿ ಕಾಲೇಜು	6000-00	2590-00
ಖಾಸಗಿ ಕಾಲೇಜು	6000-00	44,000-00
	2590-00	2,590-00
ವೈದ್ಯಕೀಯ	ಉಚಿತ ಸೀಟು	ಪಾವತಿ ಸೀಟು
ಸರ್ಕಾರಿ ಕಾಲೇಜು	9200-00	-
ಖಾಸಗಿ ಕಾಲೇಜು	9200-00	a. 1,15,000
		b. 1,03,000
		c. 92,000
ದಂತವೈದ್ಯಕೀಯ	ಉಚಿತ ಸೀಟು	ಪಾವತಿ ಸೀಟು
ಸರ್ಕಾರಿ ಕಾಲೇಜು	6,900	-
ಖಾಸಗಿ ಕಾಲೇಜು	6,900	80,500


ಮೇಲ್ಕಂಡ ಶುಲ್ಕವನ್ನೇ ಪಾವತಿಸಲು ಸಾಧ್ಯವಿಲ್ಲದೆ ಅನೇಕರು ಇಂಜನಿಯರಿಂಗ್ ಮತ್ತು ಮೆಡಿಕಲ್ ಶಿಕ್ಷಣದಿಂದ ವಂಚಿತರಾಗುತ್ತಿರುವಾಗ, ವರ್ಷಕ್ಕೆ 3 ಲಕ್ಷ ಶುಲ್ಕ ನಿಗದಿ ಮಾಡಿದರೆ ಎಷ್ಟು ಜನರಿಗೆ ಈ ಶಿಕ್ಷಣವನ್ನು 'ಕೊಂಡುಕೊಳ್ಳಲು' ಸಾಧ್ಯವಾಗುತ್ತದೆ ಎಂದು ಯೋಚಿಸಬೇಕಾಗಿದೆ.

ಸುಪ್ರಿಂ ಕೋರ್ಟಿನ ಅಂದಿನ ತೀರ್ಪನ್ನು ಜಾರಿ ಮಾಡುವ ನಿಟ್ಟಿನಲ್ಲಿ ಬೇರೆ, ಬೇರೆ ಸರ್ಕಾರಗಳು ವಿವಿಧ ರೀತಿಯ ನಿಯಮಾವಳಿಗಳನ್ನು ರೂಪಿಸಿ ಕೊಂಡವು. ಅದರಂತೆ ಕರ್ನಾಟಕ ರಾಜ್ಯ ಸರ್ಕಾರವೂ ಸಹ ಖಾಸಗಿ ಸಂಸ್ಥೆಗಳ ಶಿಕ್ಷಣದ ವ್ಯಾಪಾರೀ ಧೋರಣೆಯನ್ನು ಹತೋಟಿಗೆ ತರಲು ನಿಯಮಗಳನ್ನು ರೂಪಿಸಿತು. ಶೇ.10 ರಷ್ಟು ಉಚಿತ, 50 ರಷ್ಟು ಪೇಮೆಂಟ್ ಸೀಟುಗಳು ಎಂದು ನಿಗದಿಪಡಿಸಿ, ಪೇಮೆಂಟ್ ಸೀಟುಗಳಲ್ಲಿಯೂ ಎಷ್ಟು ಶುಲ್ಕವನ್ನು ತೆಗೆದುಕೊಳ್ಳಬೇಕು ಎಂಬುದನ್ನು ನಿಗದಿಪಡಿಸಿತ್ತು. ಈ ಹಣಕ್ಕೆ ಶಿಕ್ಷಣ ಸಂಸ್ಥೆ ಜವಾಬ್ದಾರವಾಗಿರಬೇಕು ಎಂಬ ನಿಯಮವಿತ್ತು. ಈ ರೀತಿ ಸೀಟುಗಳನ್ನು ತುಂಬಲು ಮಾನದಂಡ ವೊಂದನ್ನು ರೂಪಿಸುವಾಗ ಸಿ.ಇ.ಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಪದ್ಧತಿಯನ್ನು ಜಾರಿಗೆ ತಂದಿತು.

ಸಿ.ಇ.ಟಿ ಪದ್ಧತಿ

ಕೇಂದ್ರೀಯ ಶಾಲೆಗಳ 12ನೇ ತರಗತಿ, ರಾಜ್ಯಗಳ ಪಿಯುಸಿ + 2ನಲ್ಲಿ ಶೇ.50 ರಷ್ಟು ಅಂಕಗಳಿಸಿ ಪಾಸಾದ ಯಾವುದೇ ವಿದ್ಯಾರ್ಥಿ ಸಿ.ಇ.ಟಿ. ಪರೀಕ್ಷೆಗೆ ಹಾಜರಾಗಬಹುದಿತ್ತು. ಅವರು ಸಿ.ಇ.ಟಿಯಲ್ಲಿ ತೆಗೆದ ಅಂಕಗಳು ಮತ್ತು ಪಿ.ಯು.ಸಿಯಲ್ಲಿ ಪಡೆದ ಅಂಕಗಳು ಎರಡನ್ನು ಸೇರಿಸಿ ರ್‍ಯಾಂಕಿಂಗ್ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ರ್‍ಯಾಂಕಿಂಗ್ ಪಟ್ಟಿಯ ಆಧಾರ ಮತ್ತು ಮೀಸಲಾತಿ ಎರಡನ್ನೂ ಅಳತೆಗೋಲಾಗಿಸಿ ಸರ್ಕಾರದ ಸೀಟುಗಳನ್ನು ಹಂಚಲಾಗುತ್ತದೆ. ಸಿ.ಇ.ಟಿ ಪದ್ಧತಿ ಸಂಪೂರ್ಣ ಪ್ರಗತಿಪರ, ಎಂಬುದನ್ನು ಎಸ್.ಎಫ್.ಐ ಒಪ್ಪಿಲ್ಲವಾದರೂ ಇದರಿಂದಾಗಿ ಇಂಜನಿಯರಿಂಗ್ - ಮೆಡಿಕಲ್ ಶಿಕ್ಷಣದ ಪ್ರವೇಶದ ಮೇಲೆ ಸರ್ಕಾರ ಹತೋಟಿ ಸಾಧಿಸಲು ಸಾಧ್ಯವಾಗಿದೆ.

> **ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ತಲೆಯೆತ್ತಿ ನಿಂತಿವೆ. ಪ್ರತಿಯೊಂದು ಜಾತಿಯೂ, ಮಠಗಳೂ, ಪ್ರಭಾವಿ ವ್ಯಕ್ತಿಗಳು ಇಂದು ವೃತ್ತಿಪರ ಶಿಕ್ಷಣ ಸಂಸ್ಥೇಗಳ ಒಡೆಯರಾಗಿದ್ದಾರೆ. ಆಳುವ ಪಕ್ಷದ ಮುಖಂಡರನೇಕರು ಶಿಕ್ಷಣ ಸಂಸ್ಥೆಗಳ ಮಾಲೀಕರಾಗಿದ್ದು ತಮಗೆ ಬೇಕಾದ ರೀತಿಯಲ್ಲಿ ರಾಜ್ಯದ ಶಿಕ್ಷಣ ನೀತಿಗಳನ್ನು ತಿರುಚಬಲ್ಲಷ್ಟು ಪ್ರಭಾವಿಯಾಗಿದ್ದಾರೆ.**



ಜಾಗತೀಕರಣ ನೀತಿಗಳ ಭಾಗವಾಗಿ ರಾಜ್ಯ ಸರ್ಕಾರಗಳು ಶಿಕ್ಷಣದ ಜವಾಬ್ದಾರಿಯಿಂದ ತಮ್ಮನ್ನು ವಿಮುಖಗೊಳಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಸರ್ಕಾರವೇ ನಿಗದಿಪಡಿಸಿರುವ ಶುಲ್ಕಗಳನ್ನು ಪಾವತಿಸಲು ಬಹುತೇಕ ಜನರಿಗೆ ಸಾಧ್ಯವಾಗುತ್ತಿಲ್ಲವಾದರೂ, ಇರುವ ಶುಲ್ಕವನ್ನು ಪಾವತಿಸುವ ಶಕ್ತಿಯಿರುವ ವಿಭಾಗದ ವಿದ್ಯಾರ್ಥಿಗಳು ಸಿ.ಇ.ಟಿ ಪದ್ಧತಿಯ ಮೂಲಕ ವೃತ್ತಿಪರ ಶಿಕ್ಷಣದ ಕನಸು ಕಾಣುವುದು- ಅದನ್ನು ನನಸಾಗಿಸಿಕೊಳ್ಳಲು ಸಜ್ಜಾಗಲು ತಮ್ಮನ್ನು ತೊಡಗಿಸಿಕೊಳ್ಳುವುದು ಸಾಧ್ಯವಾಗಿದೆ. ಸೀಟುಗಳನ್ನು ಮೆರಿಟ್ ಮತ್ತು ಮೀಸಲಾತಿ ಎರಡನ್ನು ಪರಿಗಣಿಸಿ ಸರ್ಕಾರವೇ ಹಂಚಿಕೆ ಮಾಡುತ್ತಿರುವುದರಿಂದ ಪ್ರತಿಭೆ ಮತ್ತು ಸಾಮಾಜಿಕ ನ್ಯಾಯ ಎರಡಕ್ಕೂ ಸ್ವಲ್ಪವಾದರೂ ನ್ಯಾಯ ಸಲ್ಲಿಸುವುದು ಸಾಧ್ಯವಾಗಿದೆ.

ನಾಯಿಕೊಡೆಗಳಂತೆ ಬೆಳೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು

ಸರ್ಕಾರ ನಿಗದಿಪಡಿಸಿರುವ ಶೇ.50ರಷ್ಟು ಪೇಮೆಂಟ್ ಸೀಟುಗಳಲ್ಲೇ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಮತ್ತು ಸರ್ಕಾರ ತನ್ನ ರಾಜಕೀಯ ಹಿತಾಸಕ್ತಿಗಳಿಗಾಗಿ ನೀಡಿದ ಅನುಮತಿಯಿಂದಾಗಿ ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ತಲೆಯೆತ್ತಿ ನಿಂತಿವೆ. ಪ್ರತಿಯೊಂದು ಜಾತಿಯೂ, ಮಠಗಳೂ, ಪ್ರಭಾವಿ ವ್ಯಕ್ತಿಗಳು ಇಂದು ವೃತ್ತಿಪರ ಶಿಕ್ಷಣ ಸಂಸ್ಥೇಗಳ ಒಡೆಯರಾಗಿದ್ದಾರೆ. ಆಳುವ ಪಕ್ಷದ ಮುಖಂಡರನೇಕರು ಶಿಕ್ಷಣ ಸಂಸ್ಥೆಗಳ ಮಾಲೀಕರಾಗಿದ್ದು ತಮಗೆ ಬೇಕಾದ ರೀತಿಯಲ್ಲಿ ರಾಜ್ಯದ ಶಿಕ್ಷಣ ನೀತಿಗಳನ್ನು ತಿರುಚಬಲ್ಲಷ್ಟು ಪ್ರಭಾವಿಯಾಗಿದ್ದಾರೆ. ಸ್ವಂತ ರಾಜ್ಯದ ಉನ್ನತ ಶಿಕ್ಷಣಮಂತ್ರಿಗಳೇ ಶಿಕ್ಷಣ ಸಂಸ್ಥೆಗಳ 'ಮಾಲೀಕ'ರಾಗಿದ್ದಾರೆ. ಸರ್ಕಾರ ನಿರಂತರವಾಗಿ ಶಿಕ್ಷಣರಂಗದಿಂದ ವಿಮುಖರಾಗುತ್ತಿರುವುದು, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಸೊಪ್ಪು ಹಾಕಿರುವುದು, ಖಾಸಗಿ ಸಂಸ್ಥೆಗಳ ಪಾರುಪತ್ಯಕ್ಕೆ ಮುಕ್ತ ಅವಕಾಶ ನೀಡಿದೆ. ಈ ಖಾಸಗಿ ಸಂಸ್ಥೆಗಳು ನಿರಂತರವಾಗಿ ಸರ್ಕಾರದ ಮೇಲೆ ಒತ್ತಡ ಹೇರಿ ಪ್ರವೇಶ ನೀತಿಯಲ್ಲಿ, ಶುಲ್ಕ ನಿಗದಿಯಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ನೀತಿ ಗಳನ್ನು ಮಾಡಿಸಿಕೊಳ್ಳುವಲ್ಲಿ ಸಫಲವಾಗಿವೆ ಮತ್ತು ಸಿ.ಇ.ಟಿ. ವ್ಯವಸ್ಥೆಯನ್ನು ಕಳಚಿ ಹಾಕಲು ತಮ್ಮ ಲಾಭದ ಹಾದಿಯನ್ನು ಸುಗಮಗೊಳಿಸಿ ಕೊಳ್ಳಲು ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ಹೇರುತ್ತಾ ಬಂದಿವೆ.

ಬದಲಾಗುತ್ತಿರುವ ನೀತಿಗಳು - ಬದಲಾಗುತ್ತಿರುವ ಬದ್ಧತೆ

80 ರ ದಶಕ ಈ ದೇಶದ ಆರ್ಥಿಕ - ಸಾಮಾಜಿಕ- ಶೈಕ್ಷಣಿಕ ನೀತಿಗಳಿಗೆ ಬದಲಾವಣೆಯ ಒಂದು ದಿಕ್ಕನ್ನು ತೋರಿಸಿದ ಸಮಯ. ಐ.ಎಮ್.ಎಫ್., ವಿಶ್ವಬ್ಯಾಂಕ್, ವಿಶ್ವವ್ಯಾಪಾರ ಸಂಸ್ಥೆಯ ಒತ್ತಡಗಳು ಮತ್ತು ದೇಶದ ಆಳುವವರ್ಗದ ಅನಿವಾರ್ಯತೆಯಿಂದಾಗಿ ಜಾಗತೀಕರಣ- ಉದಾರೀಕರಣ- ಖಾಸಗೀಕರಣ ನೀತಿಗಳು ಜಾರಿಯಾಗಲು ಆರಂಭವಾದ ಸಮಯ. ಈ ನೀತಿಗಳು ಜಾರಿಯಾಗಲು ಆರಂಭವಾದಂದಿನಿಂದಲೇ ಅವರ ಛಾಯೆ ನ್ಯಾಯಾಂಗವೂ ಸೇರಿದಂತೆ ದೇಶದ ಎಲ್ಲಾ ವಲಯಗಳನ್ನು ಆವರಿಸಿ ಕೊಂಡು, ತನ್ನ ಸೈದ್ಧಾಂತಿಕ ಪ್ರಭಾವವನ್ನು ಹರಡುತ್ತಿದೆ.

→

ಗದರಿಂದಾಗಿ ನ್ಯಾಯಾಲಯ ಗಳೂ ಕೂಡ ಇಂದು ಈ ಸಿದ್ಧಾಂತಗಳ ಪ್ರಭಾವಕ್ಕೊಳ ಗಾಗಿವೆ. ಇಂತಹ ಸನ್ನಿವೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಗುಂಪೊಂದು ತಮ್ಮ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವಿರಬಾರದು ಎಂದು ಹಾಕಿದ ಅರ್ಜಿಯ ವಿಚಾರಣೆ ಯಲ್ಲಿ ತೀರ್ಪಿತ್ತ ಸುಪ್ರಿಂ ಕೋರ್ಟು, ಆ ತೀರ್ಪನ್ನು ಸರ್ಕಾರದಿಂದ ಅನುದಾನ ಪಡೆಯದ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಿದೆ. ಈ ತೀರ್ಪನ್ನು ನೀಡುವಾಗ ಸುಪ್ರೀಂ ಕೋರ್ಟಿನ ಪೀಠ ಉಲ್ಲೇಖಿಸಿರುವ ಕೆಲವು ಅಂಶಗಳು ಆತಂಕಕಾರಿಯಾದವು. ಅದರಲ್ಲಿ ಅನುದಾನ ಪಡೆಯದ ಖಾಸಗಿ ಸಂಸ್ಥೆಗಳ ಮೇಲೆ ಸರ್ಕಾರಕ್ಕೆ ಆಡಳಿತಾತ್ಮಕ ನಿಯಂತ್ರಣವಿರಬಾರದು ಎಂಬುದು



ಖಾಸಗಿ ಸಂಸ್ಥೆಗಳೊಂದಿ... ಸಮಾಲೋಚನೆ...?

ಚುನಾಯಿತ ಸರ್ಕಾರಗಳ ಸಂವಿಧಾನಬದ್ಧ ಅಧಿಕಾರವನ್ನೇ ಪ್ರಶ್ನೆ ಮಾಡುತ್ತದೆ ಮತ್ತು ಈ ಸಂಸ್ಥೆಗಳನ್ನು ಯಾರು ನಿಯಂತ್ರಿಸಬೇಕು ಎಂಬ ಪ್ರಶ್ನೆಗೆ ಉತ್ತರ ಬೇಕಾಗುತ್ತದೆ.

'ಕೆ.ಪಿ ಉನ್ನಿಕೃಷ್ಣನ್' ಕೇಸಿನಲ್ಲಿ ತಾನೇ ನೀಡಿದ್ದ ತೀರ್ಪನ್ನು ಸಂಪೂರ್ಣ ತಿರಸ್ಕರಿಸಿರುವ ಸುಪ್ರೀಂ ಕೋರ್ಟು ಬದಲಾಗಿರುವ ಸನ್ನಿವೇಶದಲ್ಲಿ ಉನ್ನಿ ಕೃಷ್ಣನ್ ತೀರ್ಪನ್ನು ಸಂಪೂರ್ಣವಾಗಿ ಪರಿಷ್ಕರಿಸ ಬೇಕಾಗಿದೆ ಎಂದಿದೆ. ನ್ಯಾಯಾಲಯ ಈಗ ಆ ತೀರ್ಪಿನ ಮಹತ್ವವನ್ನೇ ಅಲ್ಲಗಳೆದಿದೆ. ಒಟ್ಟಾರೆ ಯಾಗಿ **ನ್ಯಾಯಾಲಯದ ತೀರ್ಪುಗಳು ಮತ್ತು ನ್ಯಾಯಾದೀಶರು ಕೂಡ ಆಳುವ ವರ್ಗದ ಸೈದ್ಧಾಂತಿಕ ಪರಿಧಿಯಿಂದ ಹೊರಗಿದ್ದು ತೀರ್ಪು ನೀಡಲು ಸಾಧ್ಯವಿಲ್ಲ ಎಂಬುದನ್ನು ಈ ಪ್ರಕರಣ ಕೋರಿಸಿದೆ.** ವ್ಯಾಪಾರೀಕರಣಗೊಳ್ಳುತ್ತಿರುವ ಸಾಮಾಜಿಕ ಮೌಲ್ಯಗಳು ಸಾಮ್ರಾಜ್ಯಶಾಹಿಪರ ಚಿಂತನೆಗಳು, ಸ್ಥಾಪಿತ ಹಿತಾಸಕ್ತಿಗಳನ್ನು ರಕ್ಷಿಸುವ ನಮ್ಮ ಶೋಷಕ ವ್ಯವಸ್ಥೆಯ ಗುಣವನ್ನು ಮೀರುವುದು ನ್ಯಾಯಾಲಯಗಳಿಗೂ ಸಾಧ್ಯವಿಲ್ಲ ಎಂಬುದನ್ನು ಈ ತೀರ್ಪು ನಿರೂಪಿಸಿದೆ.

ಬಂಧಮುಕ್ತವಾದ ಖಾಸಗಿ ಸಂಸ್ಥೆಗಳು

ಉನ್ನಿಕೃಷ್ಣನ್ ತೀರ್ಪಿನ ನಂತರ ಹಲ್ಲಿಲ್ಲದ ಹುಲಿಯಂತಾಗಿದ್ದ ಖಾಸಗಿ ಸಂಸ್ಥೆಗಳು ಈಗ ಒಮ್ಮೆಲೆ ಕೋರೆ ಹಲ್ಲುಗಳನ್ನು ಹೊಂದಿ 'ರಾಕ್ಷಸರೂಪ' ತಾಳಲು ಅಣಿಯಾಗುತ್ತಿವೆ. ಆ ತೀರ್ಪಿನಿಂದಾಗಿ ಒಂದು ಹಂತಕ್ಕಾದರೂ ತಮ್ಮ ಲಾಭದ ಮೇಲೆ ಮಿತಿ ಹಾಕಿ ಕೊಳ್ಳಬೇಕಾದ ಅನಿವಾರ್ಯತೆ ಗೊಳಗಾಗಿದ್ದ ಸಂಸ್ಥೆಗಳು ಗಳಿಸಿದ ಲಾಭಕ್ಕೂ ಸಮಾಜಕ್ಕೆ ಜವಾಬ್ದಾರರಾಗ ಬೇಕಾದ ಅಗತ್ಯವಿತ್ತು. ಆದರೆ ಈ ತೀರ್ಪಿನಿಂದ ಹುರುಪು ಗೊಂಡಿರುವ ಅವರು ಈಗ ಎಲ್ಲಾ ನಿಯಮಗಳನ್ನು ಗಾಳಿಗೆ ತೂರುವ ಮಾತುಗಳನ್ನಾಡು ತ್ತಿದ್ದಾರೆ. ಸಿ.ಇ.ಟಿಯ ಮೂಲಕ ಬಂದವರಿಗೆ ನಾವು ಸೀಟುಗಳನ್ನು ನೀಡುವುದಿಲ್ಲ. ಸರ್ಕಾರ ನಿಗದಿಗೊಳಿಸಿರುವಷ್ಟು ಶುಲ್ಕಕ್ಕೆ ನಾವು ಪ್ರವೇಶ ನೀಡುವುದಿಲ್ಲ, ಸರ್ಕಾರಕ್ಕೆ ಶೇ. 20-25 ರಷ್ಟು ಸೀಟುಗಳನ್ನು ಮಾತ್ರ ನೀಡುತ್ತೇವೆ, ಮೆಡಿಕಲ್ ಸೀಟೊಂದಕ್ಕೆ ವರ್ಷಕ್ಕೆ 3 ಲಕ್ಷ ಶುಲ್ಕ ನಿಗದಿ ಮಾಡುತ್ತೇವೆ. ಹೀಗೆ ತಮ್ಮ ಒತ್ತಾಯಗಳನ್ನು ಜನರ ಮೇಲೆ ಹೇರಲು ಪ್ರಯತ್ನಿಸುತ್ತಿದ್ದಾರೆ. ಈ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳಲ್ಲಿ ಆಳುವ ಪಕ್ಷದ ಮುಖಂಡರೇ ಅನೇಕರಿರುವುದು ಅವರ ಹಾರಾಟಕ್ಕೆ ಪುಷ್ಟಿ ಸಿಕ್ಕಂತಾಗಿದೆ.

ವೃತ್ತಿ ಶಿಕ್ಷಣದಿಂದ ವಂಚಿತರಾಗುವ ಸಾಮಾನ್ಯ ಜನತೆ

ಒಂದು ವೇಳೆ ಈ ತೀರ್ಪಿನ ಅನ್ವಯ ಸಿ.ಇ.ಟಿ ವ್ಯವಸ್ಥೆ ರದ್ದಾಗಿ, ಖಾಸಗಿ ಸಂಸ್ಥೆಗಳಿಗೆ ಮುಕ್ತ ಅವಕಾಶವೇನಾದರೂ ಲಭ್ಯವಾದಲ್ಲಿ ನಾಡಿನ ಬಹುತೇಕ ಕುಟಂಬದ ಮಕ್ಕಳು ವೃತ್ತಿಪರ ಶಿಕ್ಷಣದ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲವಾಗುತ್ತದೆ. ಸಾಮಾಜಿಕ ನ್ಯಾಯ ಮೂಲೆ ಗುಂಪಾಗುತ್ತದೆ. ಸೀಟು ಪಡೆಯುವಲ್ಲಿ ಹಣವೇ ಪ್ರಧಾನ ಪಾತ್ರ ವಹಿಸುವುದರಿಂದ ಪ್ರತಿಭೆ ಪ್ರಧಾನವಾಗುವುದು ಸಾಧ್ಯವೇ ಇಲ್ಲ. ಆದ್ದರಿಂದ ಈ ತೀರ್ಪಿನಿಂದ ಉದ್ಭವವಾಗಿರುವ ಬಿಕ್ಕಟ್ಟನ್ನು ನಿವಾರಿಸಲು ಸರ್ಕಾರ ತೀವ್ರ ಗಮನಹರಿಸ ಬೇಕಾಗಿದೆ.

ಜನತಾ ಪರಮಾಧಿಕಾರದ ಬಳಕೆ

ದೇಶದ ಸರ್ವೋಚ್ಛ ನ್ಯಾಯಾಲಯ ಸೃಷ್ಟಿಸಿರುವ ಈ ಗಂಭೀರ ಬಿಕ್ಕಟ್ಟನ್ನು ನಿವಾರಿಸಲು 'ಜನತಾ ಪರಮಾಧಿಕಾರ' ಈಗ ಬಳಕೆಯಾಗ ಬೇಕಿದೆ. ಸಮಸ್ಯೆಯ ಪರಿಹಾರಕ್ಕೆ ಸೂಕ್ತವಾದ ಕ್ರಮಕ್ಕಾಗಿ ಕೇಂದ್ರ ಸರ್ಕಾರವನ್ನು ನಾವು ನೀವೆಲ್ಲಾ ಒತ್ತಾಯಿಸಬೇಕಿದೆ. ರಾಜ್ಯ ಸರ್ಕಾರವೂ ಸಹ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕಿದೆ.

ಜವಾಬ್ದಾರಿ ನಿರ್ವಹಿಸಲು ಹಿಂದೇಟು ಹಾಕುತ್ತಿರುವ ಸರ್ಕಾರ

ಈಗಾಗಲೇ ಹೇಳಿರುವಂತೆ ಈ ಸಂಸ್ಥೆಗಳು ಆಳುವ ಪಕ್ಷದ ಮುಖಂಡರ ಹಿಡಿತದಲ್ಲಿರುವು ದರಿಂದ ಸರ್ಕಾರ ಕಟ್ಟುನಿಟ್ಟಿನ ಕ್ರಮ ವಹಿಸಲು ಹಿಂದೇಟು ಹಾಕುತ್ತಿದೆ. ಈ ತೀರ್ಪು ಹೊರಬಿದ್ದಾಗಲೇ ಮೇಲ್ಮನವಿ ಸಲ್ಲಿಸಿ ತೀರ್ಪನ್ನು ಪುನರ್ ಪರಿಶೀಲಿಸಲು ಮನವಿ ಮಾಡ ಬಹುದಾಗಿದ್ದ ಅವಕಾಶವನ್ನು ರಾಜ್ಯ ಸರ್ಕಾರ ಉದ್ದೇಶಪೂರ್ವಕವಾಗಿ ಕಳೆದುಕೊಂಡಿದೆ. ಖಾಸಗಿ ಆಡಳಿತ ಮಂಡಳಿಗಳೊಡನೆ ಮಾತುಕತೆ ನಡೆಸಿ ಅವರನ್ನು ಒಪ್ಪಿಸುವ ಮಾತುಗಳನ್ನಾಡುತ್ತಿದ್ದೆಯೇ ಹೊರತು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವ ಯಾವ ಮಾತನ್ನೂ ಹೇಳಲು ಸರ್ಕಾರಕ್ಕೆ ಸಾಧ್ಯವಾಗದೇ ಈಗಿರುವ ಶುಲ್ಕಗಳಲ್ಲಿ ಕಾಲೇಜುಗಳನ್ನು ನಡೆಸಲಾಗುವುದಿಲ್ಲ, ಶುಲ್ಕಗಳನ್ನು ಹಲವಾರು ಪಟ್ಟು ಏರಿಸಬೇಕು ಎಂಬ ಆಡಳಿತ ಮಂಡಳಿಗಳ ಅಭಿಪ್ರಾಯವನ್ನು ಸರ್ಕಾರ ತಾತ್ವಿಕವಾಗಿ ಒಪ್ಪಿಕೊಂಡಂತೆ ಕಾಣುತ್ತದೆ. ಇಂತಹ ಸ್ಥಿತಿಗೆ ಸರ್ಕಾರ ಬರಲು ಬಹಳ ಮುಖ್ಯವಾಗಿ ಉದಾರೀಕರಣ ನೀತಿಗಳ ಫಲವಾಗಿ ಸರ್ಕಾರ ಶಿಕ್ಷಣ ಕ್ಷೇತ್ರದಿಂದ ತನ್ನ ಜವಾಬ್ದಾರಿ ಕಳಚಿಕೊಳ್ಳುತ್ತಿರುವುದು, ಶಿಕ್ಷಣ ನೀಡುವುದು ತನ್ನ ಜವಾಬ್ದಾರಿಯಲ್ಲ, ಹಣವುಳ್ಳವರು ಬೇಕಾದರೆ ಶಿಕ್ಷಣವನ್ನು ಕೊಂಡುಕೊಳ್ಳಲಿ ಎಂಬ ಅದರ ಧೋರಣೆ ಕಾರಣವಾಗಿದೆ.

ಸುಪ್ರಿಂ ಕೋರ್ಟು ತನ್ನ ತೀರ್ಪನ್ನು ನೀಡುವಾಗ ಮೂರು ಮುಖ್ಯ ಅಂಶಗಳನ್ನು ಉಲ್ಲೇಖಿಸಿದೆ ಅವುಗಳಲ್ಲಿ

● ಖಾಸಗಿ ಶಿಕ್ಷಣ ಸಂಸ್ಥೆಗಳು ಲಾಭ ಮಾಡಿಕೊಳ್ಳ ಬಹುದು ಆದರೆ ಲಾಭಕೋರತನ ವನ್ನು ಹೊಂದ ಬಾರದು ಎಂಬುದು. ಲಾಭ ಕೋರತನಕ್ಕೂ-ಲಾಭಕ್ಕೂ ಹೇಗೆ ವ್ಯತ್ಯಾಸವನ್ನು ಕಂಡುಕೊಳ್ಳುವುದು ಮತ್ತು ಅವುಗಳ ನಡುವೆ ಗೆರೆ ಎಳೆಯುವುದು ಹೇಗೆ ಮತ್ತು ಯಾರು ಎಂಬ ಪ್ರಶ್ನೆ ಈಗ ಈ ತೀರ್ಪಿನಿಂದ ಉದ್ಭವಿಸಿದೆ.

● ಸಿ.ಇ.ಟಿ ಪದ್ಧತಿಯಿಂದ ಗ್ರಾಮೀಣ ಬಡವರ ಹಣದಲ್ಲಿ ನಗರದ ಶ್ರೀಮಂತರ ಮಕ್ಕಳು, 'ಅಡ್ಡ ಸಹಾಯಧನ' (cross subsidy) ಪಡೆದು, ಶಿಕ್ಷಣ ಪಡೆಯುತ್ತಿದ್ದಾರೆ ಎಂಬುದು ತೀರ್ಪಿನ ಮತ್ತೊಂದು



ಚಿತ್ರಕೃಪೆ: ಪಿ.ಮಹಮದ್, ಪ್ರಜಾವಾಣಿ

ಅಂಶ. ಈ ಅಂಶ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ನಿಯಂತ್ರಣ ತೆಗೆದು ಹಾಕುವ ಮತ್ತು ಸಿ.ಇ.ಟಿ ಪದ್ಧತಿಯನ್ನು ರದ್ದು ಮಾಡಬೇಕಾ ದಂತಹ ಪ್ರಬಲ ಅಂಶವೇನಲ್ಲ. ಏಕೆಂದರೆ ಈಗಿರುವ ಪದ್ಧತಿಯ ಪ್ರಕಾರ ಪೇಮೆಂಟ್ ಸೀಟು ಗಳಿಂದ ಪಡೆದ ಹಣವನ್ನು ಉಚಿತ ಸೀಟುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಪ್ರತಿಭಾವಂತ ಮತ್ತು ಸಾಮಾಜಿಕವಾಗಿ ವಂಚಿತರಾದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ವಿನಿಯೋಗಿಸಲಾಗುತ್ತಿದೆ. ಏಕೆಂದರೆ ಈಗ ಉಚಿತ ಸೀಟಿನಿಂದ ವಸೂಲಿ ಮಾಡುತ್ತಿರುವ ವಾರ್ಷಿಕ 9,000 ರೂ. ಶುಲ್ಕದಿಂದ ವೈದ್ಯಕೀಯ ಶಿಕ್ಷಣ ನೀಡಲು ಸಾಧ್ಯ ವಿಲ್ಲ ಎಂಬುದು ಯಾರಿಗಾದರೂ ಅರ್ಥವಾಗುವ ವಿಚಾರ.

ನ್ಯಾಯಾಲಯ ಗಮನಿಸಿರುವ ಈ ಸಮಸ್ಯೆಯನ್ನು ನಿವಾರಿಸಲು ತೆಗೆದುಕೊಳ್ಳಬೇಕಾದ ಕ್ರಮ ಏನು ಎಂಬ ಬಗೆಗೆ ಬೇಕಿದ್ದರೆ ಚರ್ಚಿಸ ಬಹುದು. ನ್ಯಾಯಾಲಯದ ಈಗಿನ ತೀರ್ಪು ನಿರ್ಮಿಸಿರುವ ಘೋರ ಪರಿಸ್ಥಿತಿಯು ಈ ಸಮಸ್ಯೆಗೆ ಪರಿಹಾರವನ್ನೇನೂ ತರುವುದಿಲ್ಲ. ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರಕ್ಕೆ ಆಡಳಿತಾತ್ಮಕ ನಿಯಂತ್ರಣವಿರ ಬಾರದು ಎಂದಾದರೆ ಅವುಗಳನ್ನು ನಿಯಂತ್ರಿಸು ವವರು ಯಾರು? ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ಸಾಮಾಜಿಕ ಬದ್ಧತೆ ಇಲ್ಲವೆ? ಖಾಸಗಿ ಶಿಕ್ಷಣ ಸಂಸ್ಥೆಗಳು ಎಷ್ಟು ಬೇಕಾದರೂ ಶುಲ್ಕ ವಂತಿಗೆ ನಿಗದಿಪಡಿಸಿ ವಸೂಲಿ ಮಾಡಿಕೊಳ್ಳಬಹುದೆ?

ಸಾಮಾಜಿಕ ನ್ಯಾಯ - ಪ್ರತಿಭೆಗೆ ಮಾನ್ಯತೆ ಎಂಬ ವಿಚಾರಗಳು ಹಾಗೂ ಅದರ ಕಲ್ಪನೆಗಳು ಖಾಸಗಿ ಸಂಸ್ಥೆಗಳಿಗೆ ಅರ್ಥವಾಗುತ್ತವೆಯೆ? ಈ ಪ್ರಶ್ನೆಗಳಿಗೆ ನಮ್ಮ ನ್ಯಾಯಾಲಯದ ಬಳಿ ಉತ್ತರವಿದೆಯೆ?

ರಕ್ತ ಹರಿಸಿದ ಪೋಲೀಸರು

ಪುಟ 3 ರಿಂದ

ಅಧಿಕಾರಿಗಳನ್ನು ಮತ್ತು ಜನಪ್ರತಿನಿಧಿಗಳನ್ನು ಕರೆಸಬೇಕೆಂದು ಒತ್ತಾಯಿಸಿದ ಮುಖಂಡರ ಮೇಲೆ ಯಾವುದೇ ಸೂಚನೆಯಿಲ್ಲದೇ ಪೋಲೀಸರು ಲಾಠಿ ಚಾರ್ಜ್ ಮಾಡಿದರು. ಗ್ರಾಮ ಪಂಚಾಯತಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರನ್ನು ಪೋಲೀಸರು ಶರ್ಟ್ ಹಿಡಿದು ಎಳೆದಾಡಿ ಲಾಠಿ ಬೀಸಿದರು. ಅದನ್ನು ತಡೆದ ಹೊಸೂರು, ಸಿದ್ದಾಪುರ ಗ್ರಾಮ ಪಂಚಾಯತಿ ನೌಕರ ಹನುಮಂತಪ್ಪ ಚಲುವಾದಿ ತಲೆಗೆ ಪೆಟ್ಟು ಬಿತ್ತು ಹತ್ತಾರು ಪೋಲೀಸರು ಲಾಠಿ ಬೀಸಿದ್ದರಿಂದ ತಲೆ ಒಡೆಯಿತು. ಮೂರ್ಛೆ ಹೋಗಿ ನೆಲಕ್ಕೆ ಬಿದ್ದರು. ಲಾಠಿ ಏಟಿನಿಂದಾಗಿ ರಕ್ತ ನೆಲಕ್ಕೆ ಹರಿಯಿತು. ಈಗಲೂ ಹನುಮಂತಪ್ಪ ಆಸ್ಪತ್ರೆ ಯಲ್ಲಿದ್ದು, ಸಾವು ಬದುಕಿನ ಹೋರಾಟದಲ್ಲಿದ್ದಾರೆ. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೆ.ಎಂ. ಚನ್ನಬಸಯ್ಯನವರನ್ನು ಎಳೆದುಕೊಂಡ ಪೋಲೀಸರು ಸಿಕ್ಕಾಪಟ್ಟೆ ಲಾಠಿಯಿಂದ ಹೊಡೆದರು ಇದರಿಂದ ನೆಲಕ್ಕೆ ಕುಸಿದು ಬಿದ್ದರು. ಪತ್ರಕರ್ತರು ರಕ್ಷಿಸಿ ಆಸ್ಪತ್ರೆಗೆ ಕಳಿಸಿಕೊಟ್ಟರು. ಲಾಠಿ ಏಟುಗಳು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಕರಿಯಪ್ಪ ಅಚ್ಚೊಳ್ಳಿ, ಡಿವೈಎಫ್ಐ ಮುಖಂಡ ಕೆ.ಜಿ.ವೀರೇಶ, ಗ್ರಾಮ ಪಂಚಾಯತಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ನಾರಾಯಣ, ಜಂಟಿ ಕಾರ್ಯದರ್ಶಿ ಮಲ್ಲಿಕಾರ್ಜುನ, ಉಪಾಧ್ಯಕ್ಷ ಮೊಹಿನುದ್ದೀನ್, ನೌಕರರುಗಳಾದ ನಾಗೇಂದ್ರ, ಮುದ್ದಪ್ಪ, ಅಂಗವಿಕಲ ಬಡೇಸಾಬ್ ಮುಂತಾದವರಿಗೂ ಮತ್ತು ಮಹಿಳಾ ನೌಕರರಿಗೂ ಲಾಠಿ ಏಟುಗಳು ಬಿದ್ದವು. ಯಾರು ಜಾಗ ಬಿಟ್ಟು ಕದಲಲಿಲ್ಲ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬೋಸ್ ರಾಜ್, ಶಾಸಕರಾದ ಬಾದರ್ಲಿ ಹಂಪನಗೌಡ ಸಿಂಧನೂರು, ಅಮರೇ ಗೌಡ ಬಯ್ಯಾಪುರ್ ಲಿಂಗಸಗೂರು, ಎಂಎಲ್‌ಸಿ ಹನುಮಂತಪ್ಪ ಅಲ್ಕೋಡು ಮತ್ತು ಜಿಲ್ಲಾ ಪಂಚಾಯತ್ಅಧ್ಯಕ್ಷ ಮತ್ತು ಮುಖ್ಯ ಕಾರ್ಯದರ್ಶಿ ಮುಂತಾದ ಅಧಿಕಾರಿಗಳು ಬಂದು ಚರ್ಚೆಗೆ ಆಹ್ವಾನಿಸಿದರು. ನಮ್ಮ ಬೇಡಿಕೆಗಳನ್ನು ತಮ್ಮ ಗಮನಕ್ಕೆ ಅನೇಕ ಸಲ ತಂದಿದ್ದೇವೆ, ಸಭೆಯಲ್ಲಿ ಯಾವುದಾದರೂ ನಿರ್ಧಾರಕ್ಕೆ ಬಂದು ತಿಳಿಸುವವರೆಗೂ ಬಿಡುವುದಿಲ್ಲ ಎಂದು ಪಟ್ಟು ಹಿಡಿಯಲಾಯಿತು.

ಧರಣಿಯಾಗಿ ಪರಿವರ್ತನೆಯಾಗಿ ಗೇಟ್ ಮುಂದೆ ಮೂರು ಗಂಟೆಗಳ ಕಾಲ ಬಿಸಲಲ್ಲಿ ಕುಳಿತುಕೊಳ್ಳಲಾಯಿತು. ಜಿಲ್ಲಾ ಪಂಚಾಯತ್ ಸಭೆ ಗ್ರಾಮ ಪಂಚಾಯತ್ ನೌಕರರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಕೂಡಲೇ ಬಗೆಹರಿಸುವಂತೆ ನಿರ್ಣಯ ತೆಗೆದುಕೊಂಡಿತು.

ಏಪ್ರಿಲ್ 4 ರಂದು ತಾಲೂಕು ಮಟ್ಟದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಮತ್ತು ತಾಲೂಕು ಪಂಚಾಯತಿ ಅಧಿಕಾರಿಗಳ ಸಭೆ ಸೇರಿಸಿ ಕ್ರಮ ಕೈಗೊಳ್ಳುವುದಾಗಿ ಲಿಖಿತ ಪತ್ರವನ್ನು ಗ್ರಾಮ ಪಂಚಾಯತ್ ನೌಕರರ ಸಂಘಕ್ಕೆ ನೀಡಿದ್ದಾರೆ. ಈ ದೌರ್ಜನ್ಯ ಪ್ರತಿಭಟಿಸಿ ರಾಜ್ಯಾದ್ಯಂತ ಜಿಲ್ಲೆಗಳಲ್ಲಿ ನೌಕರರ ಸಂಘದಿಂದ ಪ್ರತಿಭಟನೆ ನಡೆದಿದೆ.

ವರದಿ : ಚನ್ನಬಸಯ್ಯ

ವಾಜಪೇ
ವಿನಾಶದ ಐ

ಐದು ವರುಷಗಳನ್ನು ಪೂರೈಸಿರುವುದೇ ತಮ್ಮ ಮಹಾನ್ ಸಾಧನೆಯೆಂದು ಬಿಜೆಪಿ-ಕೂಟ ಬೀಗುತ್ತಿದೆ. ಈ ಅವಧಿಯಲ್ಲಿ ವಾಜಪೇಯಿ ಸರ್ಕಾರದ ವಿನಾಶಕಾರಿ ಆಡಳಿತವನ್ನು ಕೂಲಂಕುಷವಾಗಿ ಮೌಲ್ಯಮಾಪನ ಮಾಡಿರುವ ಕಾಂ. ಸುರ್ಜಿತ್‌ರವರು, ಇಂತಹ ಆಡಳಿತದ ಸ್ಥಿರತೆಯೆಂಬುದು ಜನಗಳ ಮೇಲೆ ಸಂಕಟ ಹೇರಲು ನೀಡಿದ ಲೈಸೆನ್ಸ್ ಅಲ್ಲ ಎಂದು ಎಚ್ಚರಿಸಿದ್ದಾರೆ. ಈ ಐದು ವರುಷಗಳಲ್ಲಿನ ದೇಶದ್ರೋಹಗಳು ಒಂದೇ ಎರಡೇ...?!

ಬಿಜೆಪಿಯ ಮುಖಂಡರು ಇತ್ತೀಚಿನ ದಿನಗಳಲ್ಲಿ ಬಹಳ ಖುಷಿಯಲ್ಲಿದ್ದಾರೆ. ನವದೆಹಲಿಯಲ್ಲಿ ಐದು ವರ್ಷಗಳನ್ನು ಪೂರೈಸಿದ ಏಕೈಕ ಕಾಂಗ್ರೆಸ್ಸೇತರ ಸರಕಾರ ತಮ್ಮದು ಎಂಬುದು ಅವರ ಇತ್ತೀಚಿನ ರಾಗ. ಸಂಖ್ಯೆಯು ಅವರ ಕಡೆಗಿರಬಹುದು. ಆದರೆ ವಿನಯಶೀಲತೆ ಖಂಡಿತಾ ಅವರನ್ನು ಬಿಟ್ಟೋಡಿದೆ. ಏಕೆಂದರೆ ಐದು ವರ್ಷಗಳ ಲೆಕ್ಕ ಪೂರ್ತಿಯಾಗುವುದು ವಾಜಪೇಯಿ ಸರ್ಕಾರದ ಮೊದಲ ಪ್ರಯತ್ನ (ಮಾರ್ಚ್ 1998 ರಿಂದ ಏಪ್ರಿಲ್ 1990),ನಂತರ ಏಪ್ರಿಲ್ 1999 ರಿಂದ ಅಕ್ಟೋಬರ್ 1999 ರ ವರೆಗಿನ ಉಸ್ತುವಾರಿ ಸರ್ಕಾರದ ಅವಧಿಯನ್ನು ಲೆಕ್ಕಕ್ಕೆ ತಗೊಂಡಾಗ ಮಾತ್ರ.

ಮರೆತ ನಾಯಕರು


ಅದೇನೇ ಇರಲಿ, ತಮಗೆ ಮಾತ್ರವೇ ಸ್ಥಿರ ಸರ್ಕಾರ ಕೊಡಲು ಸಾಧ್ಯ ಎಂದು ಕಾಂಗ್ರೆಸ್ ಹೇಳುತ್ತಿದ್ದ ದಿನಗಳನ್ನು ಅವರು ಮರೆತಂತೆ ಕಾಣುತ್ತದೆ. ಏಕೆಂದರೆ ಆಗ ಈ ಬಿಜೆಪಿ ಮುಖಂಡರೇ ಪ್ರತಿ ಬೊಬ್ಬೆ ಹಾಕುತ್ತಿದ್ದರು - ಒಂದು ಸರಕಾರದ ಸ್ಥಿರತೆಯಿಂದಲೇ ಅದು ಜನ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದು. ಇದು ನಿಜ, ಆದರೆ ಬಿಜೆಪಿ ಮುಖಂಡರು ಇದನ್ನು ಈಗ ಮರೆತಂತೆ ಕಾಣುತ್ತದೆ.

ಈಗ ಪರಿಸ್ಥಿತಿ ತದ್ವಿರುದ್ಧವಾಗಿದೆ. ವಾಜಪೇಯಿ ಕಂಪನಿ ತನ್ನ ಸಾಧನೆಗಳ ಬಗ್ಗೆ ಎಷ್ಟೇ ಬೊಬ್ಬೆ ಹೊಡೆಯಲಿ ಈ ಐದು ವರ್ಷಗಳು ಸ್ವಾತಂತ್ರ್ಯಾನಂತರದ ನಮ್ಮ ಜನತೆಯ ಜೀವನದಲ್ಲೇ ಅತ್ಯಂತ ಕೆಟ್ಟ ಅವಧಿ, ಸರ್ವತೋಮುಖ ವಿನಾಶಕ ಅವಧಿ ಎಂಬುದಂತೂ ಸತ್ಯ.

ಹದಗೆಟ್ಟ ಆರ್ಥಿಕ

ದೇಶದ ಆರ್ಥಿಕವನ್ನೇ ತಗೊಳ್ಳಿ. ಕಳೆದ ಮೂರು ವರ್ಷಗಳಿಂದ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ಬೆಳವಣಿಗೆ ದರ ಬಜೆಟ್‌ನಲ್ಲಿ ಅಂದಾಜು ಮಾಡಿದ್ದಕ್ಕಿಂತ ಬಹಳ ಕಮ್ಮಿಯಿದ್ದುದನ್ನು ನೋಡಿದ್ದೇವೆ. ಉದಾ: ಕಳೆದ ವರ್ಷದ ಬಜೆಟ್ 2002-03 ರಲ್ಲಿ ಬೆಳವಣಿಗೆ ದರ ಶೇ 6.5 ಇರುತ್ತದೆಂದು ಹೇಳಿತ್ತು. ಆದರೆ ಕೇಂದ್ರ ಅಂಕಿ-ಸಂಖ್ಯೆ ಸಂಘಟನೆ(ಸಿಎಸ್‌ಓ) ಅಂದಾಜಿನ ಪ್ರಕಾರ ವಾಸ್ತವವಾಗಿ ಈ ದರ ಕೇವಲ ಶೇ 4.5. ವಾಸ್ತವವಾಗಿ 2002-03 ರ ಮೂರನೇ ಕಾಲುಭಾಗದಲ್ಲಿ ಅದು ಶೇ. 2.6 ಕ್ಕೆ ಇಳಿದಿದೆ ಎಂದು ಸಿ.ಎಸ್.ಓ. ಹೇಳಿದೆ. 1990-91 ರ ಅವಧಿಯನ್ನು ಬಿಟ್ಟರೆ, ಕಳೆದ 3 ವರ್ಷಗಳಲ್ಲಿ ಬೆಳವಣಿಗೆ ದರ ಸ್ವಾತಂತ್ರ್ಯ ನಂತರದ ಒಟ್ಟು ಅವಧಿಯಲ್ಲೇ ಅತಿ ಕಡಿಮೆ!


ಈ ಹಿನ್ನೆಲೆಯಲ್ಲಿ ಆರ್ಥಿಕ 7 ಅಥವಾ 8 ಶೇ. ದರದಲ್ಲಿ ಬೆಳವಣಿಗೆಯ ಸರಕಾರದ ಹೇಳಿಕೆಯನ್ನು ಉದ್ಯಮಿಗಳ ಸಂಘಟನೆಗಳೂ ಸೇರಿದಂತೆ ಯಾರೂ ಒಪ್ಪಲು ಸಿದ್ದರಿಲ್ಲ. ಅದು ಸಾಧ್ಯವಿಲ್ಲವೆಂದೇನೂ ಇಲ್ಲ, ನಮ್ಮ ಆರ್ಥಿಕದ ಮೂಲಭೂತ ದಿಕ್ಕನ್ನು ಬದಲಾಯಿಸಿದರೆ ಸಾಧ್ಯವಿದೆ. ಆದರೆ ಜನಗಳ ಕೊಳ್ಳುವ ಶಕ್ತಿಯ ಮೇಲೆ ಧಾಳಿ ಮಾಡುವಲ್ಲಿ ತೊಡಗಿರುವ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು



ಸಾರ್ವತ್ರಿಕಗೊಳಿಸಲು ನಿರಾಕರಿಸುತ್ತಾ ಮಾನವ ಸಂಪನ್ಮೂಲಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿರುವ, ಮನೆ ಉಳಿತಾಯಗಳ ಮೇಲೆ ಬಡ್ಡಿ ದರಗಳನ್ನು ಇಳಿಸುತ್ತಿರುವ ಈ ವಾಜಪೇಯಿ ಸರ್ಕಾರದಿಂದಂತೂ ಇದನ್ನು ನಿರೀಕ್ಷಿಸುವಂತಿಲ್ಲ.

ಕೃಷಿ - ಕುಸಿತ

ಕೃಷಿಯನ್ನು ತಗೊಳ್ಳಿ. ಕೃಷಿ ಉತ್ಪಾದನೆಯ ದರ ಏರುವ ಬದಲು ಇಳಿಮುಖವಾಗಿದೆ. (-3.1 ಶೇ).ಇದು ಮತ್ತಷ್ಟು ಇಳಿಯುತ್ತಿದೆ ಎಂದು ಇತ್ತೀಚಿನ ಸಿ.ಎಸ್.ಓ. ಲೆಕ್ಕಾಚಾರ ತಿಳಿಸುತ್ತದೆ. ಈ ಅಂಕಿ-ಅಂಶಗಳೂ ಜನಗಳ ನಿಜ ಸಂಗತಿಯನ್ನು ತಿಳಿಸಲಾರದ್ದು. ಇತ್ತೀಚಿನ ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ಒಂದು ಸಾವಿರಕ್ಕಿಂತ ಹೆಚ್ಚುರೈತರ ಕುಟುಂಬಗಳನ್ನು ಕೇಳಿ ನೋಡಿ. ಸರಕಾರದ ಗೋದಾಮುಗಳಲ್ಲಿ 6 ಕೋಟಿ ಟನ್ ಧಾನ್ಯಗಳು ರಾಶಿ ಬಿದ್ದಿರುವಾಗ ಒರಿಸ್ಸಾದಲ್ಲಿ ಸುಮಾರು 50 ಜನರ ಹೊಟ್ಟೆಗಿಲ್ಲದೆ ಸತ್ತಿರುವ ವಾಸ್ತವತೆ ಈ ಬಿಜೆಪಿ ನೇತೃತ್ವದ ಎನ್‌ಡಿಎ ಆಡಳಿತದ ನಿಜ ಸ್ವರೂಪವನ್ನು ಬಯಲಿಗೆಳೆದಿದೆ.



ನಿರುದ್ಯೋಗ ಹೆಚ್ಚಳ

ವರ್ಷಕ್ಕೆ ಒಂದು ಕೋಟಿ ಉದ್ಯೋಗಗಳನ್ನು ನಿರ್ಮಿಸುವ ಈ ಸರ್ಕಾರದ ವಚನವಂತೂ ಒಂದು ಕ್ರೂರ ತಮಾಷೆಯಾಗಿದೆ. ತಾನು ಹೇಳಿದ್ದು ಕೇವಲ ಸಾರ್ವಜನಿಕ ವಲಯದಲ್ಲಿ ಮಾತ್ರವಲ್ಲ, ಖಾಸಗಿ ವಲಯದಲ್ಲಿಯೂ ಸೇರಿ ಎಂದು ಪ್ರಧಾನಮಂತ್ರಿಗಳು ಲೋಕಸಭೆಯಲ್ಲಿ ಸಮಜಾಯಿಷಿ ಕೊಟ್ಟಿದ್ದಾರೆ! ಆದಾದರೂ ನಿಜವೇ? ಸಾರ್ವಜನಿಕ ವಲಯದಲ್ಲಿ ಉದ್ಯೋಗವಕಾಶ ವಾಸ್ತವವಾಗಿ ಕುಸಿದಿದೆ, ಖಾಸಗಿ ವಲಯದಲ್ಲಿ ಅದು 0.1 ಶೇ. ದರದಲ್ಲಿ ಹೆಚ್ಚಿದೆಯಷ್ಟೆ - ಅದೂ ಕಾಂಟ್ರಾಕ್ಟ್ ಉದ್ಯೋಗಗಳು. ಕಳೆದ ಐದು ವರ್ಷಗಳಲ್ಲಿ ಕ್ಲೋಶರ್, ರಿಟ್ರೆಂಚ್‌ಮೆಂಟ್, 'ಸ್ವಯಂ' ನಿವೃತ್ತಿಗಳಿಂದಾದ ಉದ್ಯೋಗ ನಷ್ಟ ಅಸಂಖ್ಯ. ಈ ಸರಕಾರ ಹೊಸ ಪೀಳಿಗೆಗಳ ಭವಿಷ್ಯವನ್ನು ಮಂಕುಗೊಳಿಸಲು ಸರ್ವಪ್ರಯತ್ನ ನಡೆಸುತ್ತಿರುವಂತೆ ಕಾಣುತ್ತಿದೆ. ಆದರೂ ಮುಂದಿನ ಐದು ವರ್ಷಗಳಲ್ಲಿ 5 ಕೋಟಿ ಉದ್ಯೋಗಗಳನ್ನು ನಿರ್ಮಿಸುವುದಾಗಿ ಯಾವುದೇ ನಾಚಿಕೆಯಿಲ್ಲದೆ ಅದು ಈಗಲೂ ಹೇಳುತ್ತಿದೆ!


ಮೇರೆ ಮೀರಿದ ಭ್ರಷ್ಟಾಚಾರ

ಬಿಜೆಪಿ ದೇಶದಲ್ಲಿ ಅತ್ಯಂತ ಪ್ರಾಮಾಣಿಕ ಪಕ್ಷವೆಂಬ ಅದರ ಹೆಗ್ಗಳಿಕೆಯಂತೂ ಯಾವಾಗಲೋ ಮಣ್ಣು ಪಾಲಾಗಿದೆ. ರಾಜೀವ್ ಆಡಳಿತವನ್ನೇ ಉರುಳಿಸಿದ ಭೋಫೋರ್ಸ್ ಹಗರಣವನ್ನೂ ನಾಚಿಸುವಂತಹ ಒಂದಲ್ಲ ಹಲವು ಹಗರಣಗಳನ್ನು ಈ ಐದು ವರ್ಷಗಳಲ್ಲಿ ಕಂಡಿದ್ದೇವೆ.

1998 ದಿಲ್ಲಿಯಲ್ಲಿ ಬಿಜೆಪಿ ಆಡಳಿತವಿದ್ದಾಗ ಈರುಳ್ಳಿ ಬೆಲೆ ಕೆ.ಜಿ.ಗೆ 100 ರೂ. ಏರಿತ್ತು. ಬಿಜೆಪಿ ಕೃಪಾಪೋಷಿತ ಖಾದ್ಯತೈಲ ಕಲಬೆರಕೆಗಾರರು ಆರು ದಿಲ್ಲಿ ನಿವಾಸಿಗಳ ಜೀವ ಬಲಿ ಪಡೆದರು. ನಂತರ ಈ ಐದು ವರ್ಷಗಳಲ್ಲಿ ಯಮುನಾ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. ನಡುವೆ ಈ ಬಿಜೆಪಿಯ ಬಣ್ಣಗಳೂ ತೊಳೆದು ವಿಕಾರವಾಗಿದೆ. ಯುನಿಟ್ ಟ್ರಸ್ಟ್‌ನ ಹಗರಣದಲ್ಲಿ ಎರಡು ಕೋಟಿ ಸಣ್ಣ ಉಳಿತಾಯಗಾರರ ಸುಲಿಗೆಯಾಯಿತು. ಬಿಜೆಪಿ-ಪರ ವ್ಯಕ್ತಿಗಳ ಹತೋಟಿಯಲ್ಲಿದ್ದ ಕಂಪನಿಗಳಲ್ಲಿ ಯು.ಟಿ.ಐ. ಹಣ ಹೂಡಬೇಕಾಗಿ ಬಂದದ್ದು ಇದಕ್ಕೆ ಒಂದು ಕಾರಣವೆನ್ನಲಾಗಿದೆ. ಅದುಹೇಗೋ ಅಂಬಾನಿಯ ರಿಲೈಯನ್ಸ್ ನಂತಹ ದೊಡ್ಡ ಗುಂಪುಗಳಿಗೆ ಮೊದಲೇ ತಿಳಿದಿತ್ತು. ಅಂದರೆ ಈ ರಾಜಕೀಯ ಮುಖಂಡರ ದುರ್ವರ್ತನೆಗಳಿಗೆ ಬೆಲೆ ತೆರಬೇಕಾಗಿ ಬಂದದ್ದು ಸಾಮಾನ್ಯ ಹೂಡಿಕೆದಾರರು ಮಾತ್ರ.

ನಂತರ ಬಂತು ತೆಹಲ್ಕಾ ಹಗರಣ, ಸ್ವತಃ ಬಿಜೆಪಿ ಅಧ್ಯಕ್ಷರು ಮತ್ತು ದೇಶದ ರಕ್ಷಣಾ ಮಂತ್ರಿಗಳು ಹೊಲಸು ಹಣಕ್ಕೆ ಕೈ ಚಾಚಿದ್ದು ಕಂಡುಬಂತು. ಆ ಮೇಲೆ 'ಶವ ಪೆಟ್ಟಿಗೆ ಹಗರಣ'. ಬಿಜೆಪಿಯು





ಸಂಕಟಗಳನ್ನು ಪರಿಗಣಿಸಲು ಸದಾ ಧಾವಿಸುತ್ತಿದ್ದ ರಕ್ಷಣಾ ಮಂತ್ರಿಯ ಕಿರೀಟದಲ್ಲಿ ಮತ್ತೊಂದು ಗರಿ! ಬಿಜೆಪಿ ಆತನನ್ನು ರಕ್ಷಣಾ ಮಂತ್ರಿಯಾಗಿಸಿದ್ದು, ತನ್ನ ಮಾಜಿ ಅಧ್ಯಕ್ಷ ಬಂಗಾರು ಲಕ್ಷ್ಮಣ್‌ಗೆ ಮತ್ತೆ ಸ್ಥಾನ ನೀಡಿದ್ದು ಸುಮ್ಮನೇ ಅಲ್ಲ.

ಮತ್ತೊಂದು ಹಗರಣ ಬಿಜೆಪಿಯ ಪ್ರಸಕ್ತ ಅಧ್ಯಕ್ಷರದ್ದು. ವೆಂಕಯ್ಯನಾಯ್ಡು! ದಲಿತರಿಗೆ, ದುರ್ಬಲರಿಗೆ ಹಂಚಲೆಂದು ಇದ್ದ ಜಮೀನನ್ನು ಕಾನೂನುಬಾಹಿರವಾಗಿ ಒಳ ಹಾಕಿಕೊಂಡ ಹಗರಣ. ಸಾರ್ವಜನಿಕ ಬೊಬ್ಬೆ ಎದ್ದ ಮೇಲೆ ಆತ ಅದನ್ನು ಬಿಟ್ಟುಕೊಡಬೇಕಾಯಿತು.

ನಂತರ ಬಂತು ಇನ್ನೊಬ್ಬ ಬಿಜೆಪಿ ಮುಖಂಡ ಹಾಗೂ ಪೆಟ್ರೋಲಿಯಂ ಮಂತ್ರಿಯ ಪೆಟ್ರೋಲ್ ಪಂಪ್ ಹಗರಣ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ 18 ದಿನಗಳ ಕಾಲ ಈ ಹಗರಣದಲ್ಲಿ ಅಕ್ರಮ ಪ್ರಯೋಜನ ಪಡೆದವರ ಪಟ್ಟಿಗಳನ್ನು ಪ್ರಕಟಿಸಿತು. ಇದರಲ್ಲಿ ಒಂದು ಹೆಸರಿನ ವಿಳಾಸ ನಮ್ಮ ಪ್ರಧಾನಮಂತ್ರಿಗಳ ಲಕ್ನೌ ವಿಳಾಸವೇ ಆಗಿತ್ತು.


ಸಾರ್ವಜನಿಕ ವಲಯದ ಘಟಕಗಳ ಮಾರಾಟ ಪ್ರಕ್ರಿಯೆಯೂ ಸಂದೇಹಾತೀತವೇನೂ ಆಗಿಲ್ಲ. 55000 ಕೋಟಿ ರೂ. ಬೆಲೆ ಬಾಳುವ ಬಾಲ್ಕೋವನ್ನು ಕೇವಲ 550 ಕೋಟಿ ರೂ.ಗಳಿಗೆ ಸ್ಟೆರ್ಲೈಟ್‌ಗೆ ಸುಮ್ಮನೇ ಕೊಡ ಮಾಡಿರಲಿಕ್ಕಿಲ್ಲ. ನಂತರ ಈ ಸ್ಟೆರ್ಲೈಟ್ ಬಾಲ್ಕೋದಿಂದ ಒಂದು ದೊಡ್ಡ ಮೊತ್ತವನ್ನು ತನ್ನ ಬೇರೆ ಕಂಪನಿಗೆ ವರ್ಗಾಯಿಸಿತಂತೆ. ಅದೇ ರೀತಿ ಟಾಟಾ ವಹಿಸಿಕೊಂಡ ವಿಎಸ್‌ಎನ್ ಎಲ್ ನಿಂದ 1200 ಕೋಟಿ ರೂ.ಗಳನ್ನು ಕಾನೂನುಬಾಹಿರವಾಗಿ ಟಾಟಾ ಕಂಪನಿಗೆ ವರ್ಗಾಯಿಸಿದ್ದು ಬೆಳಕಿಗೆ ಬಂದದ್ದು ಪ್ರಮೋದ್ ಮಹಾಜನ್-ಅರುಣ್ ಶೌರಿ ಕಿತ್ತಾಟದಲ್ಲಿ.

ಇವೆಲ್ಲಾ ಹಿಂದೆ ಕಾಶ್ಮೀರಿ ಉಗ್ರರೊಂದಿಗೆ ನೇರ ಸಂಪರ್ಕ ಹೊಂದಿದ್ದ ಹವಾಲಾ ಹಗರಣದಲ್ಲಿ ಅಡ್ವಾಣಿ, ಖುರಾನರಂತಹ ಬಿಜೆಪಿ ಪ್ರಮುಖರ ಹೆಸರು ಕೇಳಿಬಂದದ್ದನ್ನು ನೆನಪಿಸುತ್ತದೆ. ನಿಜ, ತಾಂತ್ರಿಕ ಕಾರಣಕ್ಕಾಗಿ ನ್ಯಾಯಾಲಯದ ಈ ಹಗರಣದಲ್ಲಿ ಸಿಲುಕಿಕೊಂಡ ಎಲ್ಲರನ್ನೂ

...ರ್ಕಾರ : ... ವರ್ಷಗಳು

...ಮುಕ್ತ ಗೊಳಿಸಿತು. ಏಕೆಂದರೆ ಜೈನ್ ...ಂಗಳನ್ನು ಸಾಕ್ಷಿಯಾಗಿ ಅದು ಸ್ವೀಕರಿಸಲಿಲ್ಲ. ...ೂ ಈ ಪ್ರಮುಖರೆಲ್ಲರೂ ಅಮಾಯಕರು ...ು ಜನಸಾಮಾನ್ಯರಂತೂ ಒಪ್ಪಲು ...ಿಲ್ಲ.

...ಟ್ಟಾರೆಯಾಗಿ, ಪ್ರಾಮಾಣಿಕತೆ, ಶುದ್ಧತೆಯ ...ರಲ್ಲಿ ಬಿಜೆಪಿ ಮತ ...ಚಿಸಿತ್ತು. ಅದೀಗ



...ಬಯಲಾಗಿದೆ. ಹಿಂದಿನ ...ಿ ಸರಕಾರಗಳನ್ನು ಅದು ...ಸಿದೆಯೆಂಬುದೇ ಈಗ ಅದರ ಏಕೈಕ ...ತೆ'!

...ಶಾಂಗ ರಂಗದಲ್ಲಿ ಶರಣಾಗತಿ

...ಈ ಐದು ವರ್ಷಗಳಲ್ಲಿ ಸತತವಾಗಿ ...ಮ್ರಾಜ್ಯಶಾಹಿ-ಪರ ನಿಲುವು ತಳೆದು ಬಿಜೆಪಿ ...ತ್ವದ ಸರಕಾರ ವಿಶ್ವ ಸಮುದಾಯದಲ್ಲಿ ನಮ್ಮ ...ದ ಪ್ರತಿಷ್ಠೆಗೆ ಕುಂದು ತಂದಿದೆ. ಸಹಾರಾವಿ ...ಬ್ ಗಣರಾಜ್ಯಕ್ಕೆ ನೀಡಿದ ಮಾನ್ಯತೆಯನ್ನು ...ದ್ದು ಮಾಡಲಾಯಿತು. ನ್ಯಾಯಕ್ಕಾಗಿ ...ರಾಡುತ್ತಿರುವ ಪ್ಯಾಲೆಸ್ತೀನಿಯನ್ನರಿಗೆ ಬೆಂಬಲ ...ಪಡಿಸಲಿಲ್ಲ. ಬದಲಿಗೆ ಮಧ್ಯಪ್ರಾಚ್ಯದಲ್ಲಿ ...ಮೆರಿಕಾದ ಅತಿದೊಡ್ಡ ಸ್ನೇಹಿತ ...ಸ್ರೇಲ್‌ನೊಂದಿಗೆ ಸಂಬಂಧ ...ಪಡಿಸಿಕೊಳ್ಳಲಷ್ಟೇ ಕಾಳಜಿವಹಿಸಿತು.

...ಅಲಿಪ್ತ ಆಂದೋಲನವನ್ನು ಬಲಪಡಿಸ ...ಕೆಂಬ ವಿಶ್ವ ಸಮುದಾಯದ ನಿರೀಕ್ಷೆಗಳಿಗೆ, ...ಮ್ರಾಜ್ಯಶಾಹಿ ಲೂಟಿಯಿಂದ ಮೂರನೇ ...ತ್ತಿನ ದೇಶಗಳ ಸಾರ್ವಭೌಮತೆಯ ರಕ್ಷಣೆಗೆ ...ಂದಾಗುವ ನಿರೀಕ್ಷೆಗಳಿಗೆ ಸ್ಪಂದಿಸಲು ...ಕರಿಸಿತು. ಭಾರತ, ರಶ್ಯಾ, ಚೀಣಾಗಳ ...ುವೆ ಪರಸ್ಪರ ಸಹಕಾರ ವಿಶ್ವವನ್ನು ...ಮ್ರಾಜ್ಯಶಾಹಿ ಬ್ಲಾಕ್‌ಮೇಲ್, ಬೆದರಿಕೆಗಳಿಂದ ...ಸುವ ಸಾಧ್ಯತೆಯಿದ್ದರೂ, ಆ ಬಗ್ಗೆ ಬಂದ ...ಸ್ತಾನವನ್ನು ಸ್ವೀಕರಿಸಲೂ ಬಿಜೆಪಿ ನೇತೃತ್ವದ ...ಕಾರ ನಿರಾಕರಿಸಿತು. ಸಂಪೂರ್ಣ ...ಸ್ತ್ರೀಕರಣಕ್ಕೆ ಪ್ರಯತ್ನಿಸುವ ಬದಲು ಬಿಜೆಪಿಯ ...ಕಿಯಲ್ಲಿ ಭಾರತವೇ ಒಂದು ಪರಮಾಣು ...ಷ್ಟ್ರವಾಯಿತು. ಭಾರತಕ್ಕೂ ಬೆದರಿಕೆಯೊಡ್ಡಿರುವ ...ಮೆರಿಕಾದ ಡಿಯಾಗೋ ಗಾರ್ಸಿಯಾ ...ಮಾಣು ನೆಲೆಯನ್ನು ಕಳಚಿಹಾಕಬೇಕೆಂದು ...ಬೇಡಿಕೆಯನ್ನು ಒತ್ತಾಯಿಸುತ್ತಿಲ್ಲ.

...ಮ್ರಾಜ್ಯಶಾಹಿಗೆ ಅಡಿಯಾಳುಗಳು

...ವಿಶ್ವದಲ್ಲಿ ಭಾರತದ ಪ್ರತಿಷ್ಠೆಗೆ ಈಗ ...ದಿರುವ ಅತಿದೊಡ್ಡ ಹಿಂಜರಿತವೆಂದರೆ ...ರಾಕ್ ಮೇಲೆ ಅಮೆರಿಕಾದ ದಾಳಿಯ

ಸಂದರ್ಭದಲ್ಲಿ ಇರಾಕ್ ನಮ್ಮ ವಿಶ್ವಾಸಾರ್ಹ ಮಿತ್ರದೇಶ. ಅಮೆರಿಕಾದ ದಾಳಿ ವಿಶ್ವಸಂಸ್ಥೆಯನ್ನು ಅಸಂಬಂದ್ಧಗೊಳಿಸಿ ಇರಾಕೀ ಜೀವಗಳ ಬಲಿತೆಗೆದುಕೊಳ್ಳುತ್ತಿದೆ. ಆದರೂ ದಾಳಿಕೋರರನ್ನು ಖಂಡಿಸಲು ಕೂಡಾ ಭಿಜೆಪಿ ಆಳ್ವಿಕೆ ನಿರಾಕರಿಸುತ್ತಿದೆ. ಅದೂ ಕೂಡಾ ಭಾರತವೂ ಸೇರಿದಂತೆ ವಿಶ್ವಾದ್ಯಂತ ಬೃಹತ್ ಪ್ರತಿಭಟನೆಗಳು ನಡೆಯುತ್ತಿರುವ ಸಂದರ್ಭದಲ್ಲಿ.


ಇದೇ ಅಮೆರಿಕಾ ನಮ್ಮನ್ನು ಬೆದರಿಸಲು, ಬಾಂಗ್ಲಾ ವಿಮೋಚನಾ ಸಮರವನ್ನು ಸಾಯಿಸಲು ತನ್ನ ಏಳನೇ ನಾವಿಕ ಪಡೆಯನ್ನು ಕಳಿಸಿತ್ತು. ಆಗ ಸೋವಿಯತ್ ಒಕ್ಕೂಟದೊಂದಿಗೆ ನಮ್ಮ ಮಿತ್ರತ್ವದ ಸಂಧಿ ನಮ್ಮನ್ನು ಉಳಿಸಿತ್ತು. ಆಗ ತಾನು ಕೂಡಾ ಈ ಸಂಧಿಯನ್ನು ಸ್ವಾಗತಿಸಿದ್ದೆ ಎಂಬುದನ್ನು ವಾಜಪೇಯಿಯವರು ಈಗ ನೆನಪಿಸಿಕೊಳ್ಳುತ್ತಾರೆಯೇ?

ಅರಿವೆಲ್ಲಿ?

ಅಮೆರಿಕಾದ ಬಗ್ಗೆ ಇಂತಹ ದಾಸ್ಯ ವರ್ತನೆಯಿಂದ ಬಿಜೆಪಿ ಆಳ್ವಿಕೆ ಸಾಧಿಸಬೇಕೆಂದಿರುವುದಾದರೂ ಏನನ್ನು? ಪಾಕಿಸ್ತಾನದೊಂದಿಗೆ ತನ್ನ ಘರ್ಷಣೆಯಲ್ಲಿ ಅಮೆರಿಕಾ ತನ್ನ ಪರ ನಿಲ್ಲುತ್ತದೆಯೆಂದೇ? ಇದು ಕೇವಲ ಹಗಲುಗನಸಲ್ಲವೇ? ಕುಪ್ರಸಿದ್ಧ ಡಿಕ್ಸನ್ ಯೋಜನೆಯು ನೆನಪಿದೆಯೇ? ಕಾಶ್ಮೀರವನ್ನು ತಮ್ಮ ಹಿಡಿತದಡಿ ತರಬೇಕೆಂಬುದು ಅಮೆರಿಕಾದ ಬಯಕೆ ಎಂಬುದು ನಿಸ್ಸಂದೇಹ. ಇತ್ತೀಚಿನ ನದೀಮಾರ್ಗ ಹತ್ಯಾಕಾಂಡದ ನಂತರವೂ ಅಮೆರಿಕಾ ತನ್ನ ನಂಬಿಕಸ್ತ ಗೆಳೆಯ ಪಾಕಿಸ್ತಾನಕ್ಕೆ ಲಗಾಮು ಹಾಕುವ ಪ್ರಯತ್ನ ಮಾಡಿಲ್ಲ.

> **ವಾಜಪೇಯಿ ಕಂಪನಿ ತನ್ನ ಸಾಧನೆಗಳ ಬಗ್ಗೆ ಎಷ್ಟೇ ಬೊಬ್ಬೆ ಹೊಡೆಯಲಿ ಈ ಐದು ವರ್ಷಗಳು ಸ್ವಾತಂತ್ರ್ಯಾನಂತರದ ನಮ್ಮ ಜನತೆಯ ಜೀವನದಲ್ಲೇ ಅತ್ಯಂತ ಕೆಟ್ಟ ಅವಧಿ, ಸರ್ವತೋಮುಖ ವಿನಾಶಕ ಅವಧಿ ಎಂಬುದಂತೂ ಸತ್ಯ.**

ಇರಾಕ್‌ನ ಅಥವಾ ಬೇರೆ ಯಾವುದೇ ದೇಶದ ಸಾರ್ವಭೌಮತೆಯ ರಕ್ಷಣೆಯೆಂದರೆ ನಮ್ಮದೇ ಸಾರ್ವಭೌಮತೆಯ ರಕ್ಷಣೆಯೂ ಹೌದು ಎಂದು ವಾಜಪೇಯಿ ಕಂಪನಿಗೆ ಅರಿವಾಗಬಹುದೇ? ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ



ಮೋದೀಕರಣ : ಬಿಜೆಪಿ ಕಟ್ಟಬಯಸುವ ನಾಗರೀಕತೆ

ಪಾತ್ರ ವಹಿಸಿದ ಒಂದು ಪಕ್ಷದಿಂದ ಇದನ್ನು ನಿರೀಕ್ಷಿಸಬಹುದೇ?

ರಾಷ್ಟ್ರೀಯ ಐಕ್ಯತೆಗೆ ಬೆದರಿಕೆ

ಬಿಜೆಪಿ ಆಡಳಿತದಿಂದ ಬಂದಿರುವ ಅತಿದೊಡ್ಡ ಬೆದರಿಕೆಯೆಂದರೆ ನಮ್ಮ ರಾಷ್ಟ್ರೀಯ ಐಕ್ಯತೆ ಮತ್ತು ಸೌಹಾರ್ದಕ್ಕೆ ಬಂದಿರುವ ಬೆದರಿಕೆ. ತಮ್ಮ ವಿವಿಧತೆಯಲ್ಲಿ ಏಕತೆಯ ಬಗ್ಗೆ ಸದಾ ಹೆಮ್ಮೆ ಪಡುವವರು ಭಾರತೀಯರು. ನಾವು ಬೆಳೆಸಿಕೊಂಡ ಸಮ್ಮಿಶ್ರ ಸಂಸ್ಕೃತಿ ಹಲವು ದಾಳಿಗಳನ್ನು ಎದುರಿಸಿ ನಿಲ್ಲಲು ಶಕ್ತಿ ನೀಡಿದೆ. ಭಾರತದ ವಿಭಜನೆಯಾದಾಗ ನಮ್ಮ ಸಂವಿಧಾನ ಕರ್ತೃಗಳು ನಮ್ಮ ಐಕ್ಯತೆ ಮತ್ತು ಸಮಗ್ರತೆಯಲ್ಲಿ ಈ ಸಮ್ಮಿಶ್ರ ಸಂಸ್ಕೃತಿಯ ಮೌಲ್ಯವನ್ನು ಮನಗಂಡು ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ತತ್ವವನ್ನು ನಮ್ಮ ರಾಜಕೀಯ ಚೌಕಟ್ಟಿನ ಮೂಲಭೂತ ಅಂಶಗಳಾಗಿ ಮಾಡಿದರು. ಇದನ್ನು ಇತ್ತೀಚೆಗೆ ಲೋಕಸಭೆಯಲ್ಲಿ ಸ್ವತಃ ಅಡ್ವಾಣಿ ಒಪ್ಪಿಕೊಂಡಿದ್ದಾರೆ. ಆದರೆ ಆರ್‌ಎಸ್‌ಎಸ್ ಗೆ ಒಪ್ಪಿಗೆಯಿಲ್ಲದ ಸಂಗತಿ ಇದು. ಆದ್ದರಿಂದ ಅಧಿಕಾರಕ್ಕೆ ಬಂದ ಕೂಡಲೇ ಒಕ್ಕೂಟ ತತ್ವದ ಮೇಲೆ ಬಿಜೆಪಿ ದಾಳಿ ನಡೆಸಿತು. ಧರ್ಮನಿರಪೇಕ್ಷತೆಯ ಮೇಲೆ ಅದರ ದಾಳಿಯ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅತಿಸಣ್ಣ ಸಮುದಾಯವಾದ ಕ್ರಿಶ್ಚಿಯನ್ನರ ಮೇಲೆ ಗುಜರಾತ್ ಮತ್ತಿತರ ರಾಜ್ಯಗಳಲ್ಲಿ ದಾಳಿ, ಸ್ಟೈನ್ಸ್ ಮತ್ತು ಆತನ ಮಕ್ಕಳ ಜೀವಂತ ದಹನ, ನಂತರ ಬಂತು ಗುಜರಾತಿನ ಭೀಕರ ಹತ್ಯಾಕಾಂಡ. ಈಗ ಮಧ್ಯಪ್ರದೇಶದ ಧರ್‌ನಲ್ಲಿ ಸಂಘ ಪರಿವಾರದ ಅಪಪ್ರಚಾರ.

ಶಿಕ್ಷಣರಂಗದಲ್ಲಿ ಕೇಸರೀಕರಣ

ಇಷ್ಟೇ ಅಲ್ಲ, ಶಿಕ್ಷಣವನ್ನು ಕೇಸರೀಕರಿಸಿ ಯುವ ಮನ್ನಸುಗಳಲ್ಲಿ ವಿಷ ತುಂಬಿಸಲು ಅದು ಪ್ರಯತ್ನ ನಡೆಸಿದೆ. ಎಲ್ಲಾ ಸಂಸ್ಥೆಗಳಲ್ಲಿ, ಮಾಧ್ಯಮಗಳಲ್ಲಿ ಆರ್‌ಎಸ್‌ಎಸ್ ಮಂದಿಗಳನ್ನು ತುಂಬಿಸಿ ದೇಶದ ವರ್ತಮಾನಕ್ಕೆ ಮಾತ್ರವಲ್ಲ, ಭವಿಷ್ಯತ್ತಿಗೂ ಅದು ಬೆದರಿಕೆಯೊಡ್ಡುತ್ತಿದೆ.

ಪ್ರಜಾಪ್ರಭುತ್ವಕ್ಕೆ ಕುತ್ತು

ಅದೇ ವೇಳೆಗೆ ಬಿಜೆಪಿ ಆಡಳಿತ ನಮ್ಮ ಜನತೆ ಹೋರಾಟಗಳಿಂದ ಗಳಿಸಿದ ಪ್ರಜಾಪ್ರಭುತ್ವ ಹಕ್ಕುಗಳನ್ನು, ನಾಗರಿಕ ಸ್ವಾತಂತ್ರ್ಯಗಳನ್ನು ವಂಚಿಸಲು ಪ್ರಯತ್ನ ನಡೆಸಿದೆ. ಮಾಲಕರೆದುರು ಕಾರ್ಮಿಕ ವರ್ಗವನ್ನು ನಿಸ್ಸಹಾಯಕಗೊಳಿಸಲು ಕಾರ್ಮಿಕ ಕಾನೂನುಗಳಿಗೆ ಪ್ರಜಾಪ್ರಭುತ್ವ - ವಿರೋಧಿ ತಿದ್ದುಪಡಿಗಳನ್ನು ತರಲಾಗುತ್ತಿದೆ. ಪೋಟಾದಂತಹ ಕರಾಳ ಶಾಸನಗಳನ್ನು ತರಲಾಗಿದೆ. ಅದರ ದುರುಪಯೋಗಕ್ಕೆ ಅವಕಾಶವಿಲ್ಲವೆಂದು ಹೇಳುತ್ತಿದ್ದ ಬಿಜೆಪಿ ಈಗ ತಮಿಳುನಾಡು, ಉತ್ತರ ಪ್ರದೇಶದ ಅನುಭವಗಳ ನಂತರ ಅದರ ದುರುಪಯೋಗಕ್ಕೆ ಅವಕಾಶವಿದೆ ಎಂದು ಒಪ್ಪಿಕೊಳ್ಳುವಂತಾಗಿದೆ. ಆದರೆ ಅದನ್ನು ರದ್ದು ಮಾಡಲು ಸಿದ್ಧವಿಲ್ಲ. ಅತ್ತ ನಾಗಲ್ಯಾಂಡಿನಲ್ಲಿ ಕೆಲವು ಸ್ಥಾನಗಳನ್ನು ಪಡೆಯಲು ಇದೇ ಪಕ್ಷ ಒಂದು ಭಯೋತ್ಪಾದಕ ಸಂಘಟನೆಯ ನೆರವು ಪಡೆಯಿತು ಎಂಬುದು ಬೇರೆ ಮಾತು.

ಅದರ ಈ ಸಮಯಸಾಧಕತನ ಉತ್ತರ ಪ್ರದೇಶದಲ್ಲಿ 1997 ರಲ್ಲಿ ಮತ್ತು 2002 ರಲ್ಲಿ ಜನಾದೇಶವನ್ನು ಹುಸಿಗೊಳಿಸಿದೆ. ಬಿಹಾರದ ಸರಕಾರವನ್ನು ಉರುಳಿಸಲು ಎಂಟು ಬಾರಿ ವಿಫಲ ಪ್ರಯತ್ನ ನಡೆಸಿತು. ಇದರಲ್ಲೂ ಆಶ್ಚರ್ಯವಿಲ್ಲ.



ಏಕೆಂದರೆ ಎನ್‌ಡಿಎ ಯ ರಚನೆಯೇ 'ಅತ್ಯುತ್ತಮ' ಸಮಯಸಾಧಕತನದ ಫಲ. 1998 ರಲ್ಲಿ ಬಿಜೆಪಿ ತನ್ನ ಮೂರು ವಿವಾದಗ್ರಸ್ತ ಪ್ರಶ್ನೆಗಳನ್ನು ಎತ್ತುವುದಿಲ್ಲ ಎಂದು ಒಪ್ಪಿತ್ತು. ಈ ನಡುವೆ ಆರ್‌ಎಸ್‌ಎಸ್ ಹತೋಟಿಯ ಸಂಘಟನೆಗಳು ಮತ್ತೆ-ಮತ್ತೆ ಈ ಪ್ರಶ್ನೆಗಳನ್ನು ಎತ್ತಿವೆ. ಇದೊಂದು ಯೋಜಿತ ಆಟ. ಆದರೆ ಈಗ ಬಿಜೆಪಿ ಈ ನಟನೆಯನ್ನು ಬಿಟ್ಟಿದೆ. ಆದ್ದರಿಂದಲೇ ಆರ್‌ಎಸ್‌ಎಸ್ ಮುಖಂಡರ ಆಶೀರ್ವಾದವನ್ನು ವಾಜಪೇಯಿಯವರು ಗಳಿಸಿದ್ದಾರೆ. ಇದಕ್ಕೆ ತನ್ನ ಮಿತ್ರರಿಂದ ಏನೂ ಪ್ರತಿರೋಧ ಬರುವುದಿಲ್ಲ ಎಂದು ಬಿಜೆಪಿಗೆ ಗೊತ್ತು. ಏಕೆಂದರೆ ಆ ಸ್ವಾರ್ಥಸಾಧಕರಿಗೆ, ಒಬ್ಬ ಹಿಂದೀ ಲೇಖಕ ಹೇಳಿದಂತೆ ಬೇಕಾಗಿರುವುದು ವಿಟಮಿನ್ 'ಪಿ' ಎಂದರೆ ಪವರ್ ಅರ್ಥಾತ್ ಅಧಿಕಾರ ಹಾಗೂ ವಿಟಮಿನ್ 'ಎಂ' ಅಂದರೆ ಮನಿ ಅರ್ಥಾತ್ ಹಣ.

ಇದೀಗ ದೇಶ ಎದುರಿಸುತ್ತಿರುವ ನಿಜವಾದ ಅಪಾಯ. ಹೌದು, ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದರೆ ಹತಾಶೆಗಾಗಲೀ, ಸಂತೃಪ್ತಿಗಾಗಲೀ ಅವಕಾಶವಿಲ್ಲ. ರಾಜಕೀಯವೆಂಬುದು ಕೇವಲ ಸಂಸತ್ತು, ವಿಧಾನಸಭೆಗಳ ನಾಲ್ಕು ಗೋಡೆಗಳಿಗೆ ಸೀಮಿತವಾದುದಲ್ಲ. ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ, ಕೊಳೆಗೇರಿಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ ನಿಜವಾದ ಶಕ್ತಿಗಳಿವೆ. ಶಾಂತಿ, ಪ್ರಗತಿ, ಧರ್ಮನಿರಪೇಕ್ಷತೆಯ ಶಕ್ತಿಗಳು ಇನ್ನೂ ಜೀವಂತವಾಗಿವೆ. ಅಮೆರಿಕಾದ ವಿರುದ್ಧ ಬಲಿಷ್ಠ ಪ್ರತಿಭಟನೆಗಳು ಇದಕ್ಕೆ ಸಾಕ್ಷಿ. ಕಾರ್ಮಿಕ ವರ್ಗ ಸದ್ಯವೇ ರಣಕಹಳೆ ಊದಲಿದೆ, ಕಿವುಡರಿಗೂ ಕೇಳಿಸುವಂತೆ. ಇತರ ಜನ ವಿಭಾಗಗಳೂ ಕೆಲವೊಮ್ಮೆ ಮೆಲ್ಲನೆ, ಕೆಲವೊಮ್ಮೆ ದಾಪುಗಾಲು ಹಾಕಿ ಮುನ್ನಡೆಯುತ್ತದೆ. ಸರಕಾರದ ಅಪಪ್ರಚಾರಗಳಿಗೆ ಅವರು ಮಾರುಹೋಗುವುದಿಲ್ಲ.

ಸಂಕಟ ಹೇರಲು ಲೈಸೆನ್ಸ್ ಅಲ್ಲ

ಇಂತಹ ಸಂದರ್ಭದಲ್ಲಿ ಈ ಎಲ್ಲಾ ಶಕ್ತಿಗಳನ್ನು ಅಣಿನೆರೆಸಿ ಕಾರ್ಯಾಚರಣೆಗಿಳಿಸುವುದು ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಮಾಡಬೇಕಿರುವ ಕೆಲಸ, ಇಲ್ಲ ಅದು ಅವರ ಪ್ರಥಮ ಕರ್ತವ್ಯ. ಗುಜರಾತಿನ ನಂತರ ಹಿಮಾಚಲ ಪ್ರದೇಶದ ಜನ ಬಿಜೆಪಿ ಬಲೂನನ್ನು ಈಗಾಗಲೇ ಒಡೆದಿದ್ದಾರೆ. ಮುಂಬರುವ ದಿನಗಳಲ್ಲಿ ಈ ಅನುಭವ ಮರುಕಳಿಸಲಿ. ಒಂದು ಆಡಳಿತದ ಸ್ಥಿರತೆ ಜನಗಳ ಮೇಲೆ ಸಂಕಟಗಳನ್ನು ಹೇರಲು ಲೈಸೆನ್ಸ್ ನೀಡಲಾರದು ಎಂಬುದನ್ನು ಆಗ ಮಾತ್ರವೇ ಬಿಜೆಪಿ ಮುಖಂಡರು ಅರಿಯುತ್ತಾರೆ.

ಎಐಕೆಎಸ್ ರಾಷ್ಟ್ರ ಸಮ್ಮೇಳನ

ಆಯೋಗಗಳಲ್ಲಿ ಹೊಮ್ಮಿದ ಅನುಭವ

ಅಖಿಲ ಭಾರತ ಕಿಸಾನ್ ಸಭಾದ 30ನೇ ಅ.ಭಾ. ಸಮ್ಮೇಳನದ ಪ್ರಧಾನ ವರದಿಗಳನ್ನು ಕಳೆದವಾರದಲ್ಲಿ ಓದಿರುವಿರಿ. ಈ ಸಮ್ಮೇಳನದ ಬಹುಮುಖ್ಯ ಕಲಾಪವೆಂದರೆ ವಿವಿಧ ಆಯೋಗಗಳ ವರದಿಗಳು. ಅದರ ಸಾರ ಇಲ್ಲಿದೆ.

30ನೇ ಅಖಿಲ ಭಾರತ ಸಮ್ಮೇಳನ ಈ ಬಾರಿ 4 ಆಯೋಗಗಳನ್ನು ರಚಿಸಿ, ಮುಖ್ಯವಾಗಿ ದಲಿತರು ಹಾಗೂ ಆದಿವಾಸಿಗಳ ಮೇಲೆ ಸಾಮಾಜಿಕ ದಬ್ಬಾಳಿಕೆ, ನೀರಾವರಿ, ಸಾಲ ಮತ್ತು ಜಾಗತೀಕರಣದ ಪರಿಣಾಮಗಳ ಕುರಿತು ಸುಮಾರು 8 ತಾಸುಗಳ ಕಾಲ ಪ್ರತ್ಯೇಕ, ಪ್ರತ್ಯೇಕವಾಗಿ ಸಭೆ ನಡೆಸಿ ಅನುಭವಗಳನ್ನು ಹಂಚಿಕೊಂಡು ಮುಂದಿನ ಅವಧಿಯಲ್ಲಿ ಭೂಮಿ ಹಾಗೂ ಬೆಳೆ ಪ್ರಶ್ನೆಗಳ ಜೊತೆ ಈ ಪ್ರಶ್ನೆಗಳನ್ನೆತ್ತಿಕೊಳ್ಳಲು ನಿರ್ಣಯಿಸಿತು.

ಒಂದೊಂದು ಆಯೋಗದಲ್ಲೂ ಸುಮಾರು 16 ರಿಂದ 20 ರಾಜ್ಯಗಳ 150ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡು ತಮ್ಮ- ತಮ್ಮ ರಾಜ್ಯದ ಅನುಭವ ಹಾಗೂ ಒಟ್ಟು ದೇಶದ ಪರಿಸ್ಥಿತಿಯ ಆಧಾರದಲ್ಲಿ ನೀತಿಗಳನ್ನು ರೂಪಿಸಲು ಮುಂದಾಗಿದ್ದಾರೆ. ಈ ಎಲ್ಲವೂ ಸಮ್ಮೇಳನದ ಮುಂದೆ ಬಂದು ಒಪ್ಪಿಗೆ ಪಡೆದಿವೆ. ಮುಂದೆ ಸಿ.ಕೆ.ಸಿ.ಯು ಈ ಅನುಭವವನ್ನು ವಿವರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಿದೆ.

ನೀರಾವರಿ ಆಯೋಗವು ಒಟ್ಟು ದೇಶದ ನೀರಾವರಿ ಪರಿಸ್ಥಿತಿಯನ್ನು ಅವಲೋಕಿಸಿದೆ. ನೀರಾವರಿಗಾಗಿ ನಮ್ಮ ನೀತಿಯನ್ನು ರೂಪಿಸಲು ಯತ್ನಿಸಿದೆ. ಇದು ಮತ್ತಷ್ಟು ಚರ್ಚೆಗೊಳಪಟ್ಟು ಅಂತಿಮಗೊಳ್ಳಲಿದೆ.

ಸಾಮಾಜಿಕ ದಬ್ಬಾಳಿಕೆ ವಿರೋಧಿ ಆಯೋಗವು ಅಸ್ಪೃಶ್ಯಚಾರಣೆ- ಜಾತಿಪದ್ಧತಿ- ಜಾತಿವಾದವನ್ನು ವಿರೋಧಿಸಿ ದೇಶವ್ಯಾಪಿಯಾಗಿ ಹೋರಾಟಗಳನ್ನು ಸಂಘಟಿಸಲು ಹಾಗೂ ವಾರಾಚಾರಣೆ ಕಾರ್ಯಕ್ರಮ ನಡೆಸಲು ಸೂಚಿಸಿದೆ.

★ ★ ★

ಎಲ್.ಪಿ.ಜಿ. ಆಯೋಗ

ಜಾಗತೀಕರಣವೆಂದರೇನು? ಕ್ಯೂಬಾದ ಅಧ್ಯಕ್ಷ ಫೀಡಲ್ ಕ್ಯಾಸ್ಟ್ರೋ ಹೇಳುತ್ತಾರೆ. ನಮ್ಮ ದೇಶಗಳನ್ನು ಸಾಮ್ರಾಜ್ಯಶಾಹಿಗಳ ಖಾಸಗೀ ಆಸ್ತಿಗಳನ್ನಾಗಿ ಮಾಡಿಕೊಳ್ಳುವ ಕುತಂತ್ರವೇ ಆಗಿದೆ.

ಸಾಮಾನ್ಯವಾಗಿ ಜಗತ್ತಿನ ಮೇಲೆ ತನ್ನ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಮಿಲಿಟರಿ ಆದಿಪತ್ಯ ಸ್ಥಾಪಿಸುವುದಾದರೂ ನಿರ್ಧಿಷ್ಟವಾಗಿ ಬೆಳೆಯುತ್ತಿರುವ ದೇಶಗಳನ್ನು ಎಲ್ಲೆ ಮೀರಿದ ಲೂಟಿಗೊಳಪಡಿಸುವುದು ಮತ್ತು ತೀವ್ರ ಶೋಷಣೆಗೊಳಪಡಿಸುವುದಾಗಿದೆ.

ಈ ಬಾರಿ ಪ್ರಧಾನ ಕಾರ್ಯದರ್ಶಿಗಳ ವರದಿಯು ಕರ್ನಾಟಕ ರಾಜ್ಯದಲ್ಲಿ ಜಾಗತೀಕರಣದ ವಿರುದ್ಧ ಮಧ್ಯ ಪ್ರವೇಶಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಕೆಲಸವನ್ನೂ ಅದರ ಪರಿಣಾಮವಾಗಿ ಚಳುವಳಿ ವಿಸ್ತಾರಗೊಳ್ಳುತ್ತಿರುವುದನ್ನೂ ಒತ್ತಿ ಹೇಳಿದೆ.

ಮುಖ್ಯವಾಗಿ ವಿದ್ಯುತ್ ಹೋರಾಟದಲ್ಲಿ ಕರ್ನಾಟಕದಲ್ಲಿ ರಚಿಸಲಾದ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳು ಅವುಗಳನ್ನು ರಚಿಸಿಕೊಳ್ಳುವಾಗ ಅಳವಡಿಸಲಾದ ತಂತ್ರ ಮತ್ತು ಅವುಗಳ ಮೂಲಕ ವಿಶಾಲ ಚಳುವಳಿ ರೂಪಿಸಲು ಸಾಧ್ಯವಾದ ಅನುಭವವನ್ನು ಪ್ರಧಾನ ಕಾರ್ಯದರ್ಶಿ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದರು.

★ ★ ★

ಚರ್ಚೆಯಿಂದ

ಪಶ್ಚಿಮ ಬಂಗಾಳದ ಪ್ರತಿನಿಧಿ ಬಂಗಾಳದಲ್ಲಿ ನಿಧಿ ಸಂಗ್ರಹದ ಕುರಿತು ವಿವರಿಸಿದರು.....

ಇತ್ತೀಚೆಗೆ ನಡೆದ ರಾಜ್ಯ ಸಮ್ಮೆಳನಕ್ಕಾಗಿ 40,000 (ನಲವತ್ತು ಸಾವಿರ) ಕುಟುಂಬಗಳಿಂದ ತಲಾ 5 ಕೆ.ಜಿ ಅಕ್ಕಿಯಂತೆ 2000 ಕ್ವಿಂಟಾಲ್ ಅಕ್ಕಿಯನ್ನು ಸಮ್ಮೇಳನದ ನಿಧಿಗಾಗಿ ಸಂಗ್ರಹಿಸಿದ ಅನುಭವ ಬಿಚ್ಚಿಟ್ಟರು. ದುರ್ಬಲ ರಾಜ್ಯಗಳೇಕೆ ಇದನ್ನು ಹಂಚಿಕೊಳ್ಳಬಾರದೆಂಬುದೇ ಅವರ ಅಭಿಪ್ರಾಯವಾಗಿತ್ತು.

★ ★ ★

ಆರ್.ಎಸ್.ಎಸ್ ಕುತಂತ್ರ

ಯಾರನ್ನು ಆದಿವಾಸಿಗಳೆಂದು ಕರೆಯಲಾಗುತ್ತದೋ ಅವರು ವನವಾಸಿಗಳು. ಶ್ರೀರಾಮನೂ ವನವಾಸಿಯೇ. ಆದ್ದರಿಂದ ವನವಾಸಿಗಳೆಲ್ಲಾ ಹಿಂದುಗಳು. ಹೀಗೆಂದು ಆದಿವಾಸಿಗಳ ನಡುವೆ ಆರ್.ಎಸ್.ಎಸ್ ಪ್ರಚಾರ ನಡೆಸುತ್ತಿದೆ. ಇದನ್ನು ಸೈದ್ಧಾಂತಿಕವಾಗಿ ಸೆಣಸಬೇಕೆಂದವರು ಮಹಾರಾಷ್ಟ್ರದ ಆದಿವಾಸಿ ಸಂಗಾತಿ.

★ ★ ★

ಭ್ರಮನಿರಸನ

ಮುಚ್ಚಿದ ಮಾರುಕಟ್ಟೆಯಿಂದಾಗಿ ರೈತರು ಲೂಟಿಗೊಳಗಾಗಿದ್ದಾರೆ. ಇದರಿಂದಾಗಿ ಎಂದೂ ಲಾಭದಾಯಕ ಬೆಲೆ ಪಡೆಯಲಿಲ್ಲ. ಈಗ ನೋಡಿ ಮಾರುಕಟ್ಟೆ ತೆರೆದಿದೆ. (ಮುಕ್ತ ಮಾರುಕಟ್ಟೆ) ರೈತರು ಈ ಹೊಸ ಯುಗದಲ್ಲಿ, ಭಾರತದ ರೈತರ ಕೃಷಿ ಉತ್ಪನ್ನ ನೇರವಾಗಿ ಅಮೇರಿಕಾದ ನ್ಯೂಯಾರ್ಕ್ ಲಂಡನ್, ಪ್ಯಾರಿಸ್‌ನ ಮಾರುಕಟ್ಟೆಗೆ ಹೋಗ ಬಹುದಾಗಿದೆ. ಅಲ್ಲಿ ರೈತರು ತಮ್ಮ ಕನಸಿನಲ್ಲೂ ಕಾಣಲಾರದಷ್ಟು ಬೆಲೆಗಳನ್ನು ಪಡೆಯಲಿದ್ದಾರೆ ಈ ಹಿಂದಿನ ಲೂಟಿಯನ್ನು ಮುಕ್ತ ಮಾರುಕಟ್ಟೆ ಶಾಶ್ವತವಾಗಿ ತಡೆಯುತ್ತದೆ.

ಹೀಗೆಂದು ಬಿಜೆಪಿ ಕಾಂಗ್ರೆಸ್ಸಿಗರು ಜಾಗತೀಕರಣ, ಉದಾರೀಕರಣ ಜಾರಿಯ ಆರಂಭವರ್ಷಗಳಲ್ಲಿ ಭಾರಿ ಪ್ರಚಾರ ನಡೆಸುತ್ತಿದ್ದರು.

ಈಗದು ದೇಶದಾದ್ಯಂತ ಸ್ಪಷ್ಟವಾಗಿದೆ ಎಲ್.ಪಿ.ಜಿ.ಯ ಗಂಭೀರ ಸ್ವರೂಪದ ಪರಿಣಾಮ ಕೃಷಿರಂಗದಲ್ಲಿ, ನಿಚ್ಚಳವಾಗಿ ತೋರಿಸಲ್ಪಟ್ಟಿದೆ ಒಂದೆಡೆ ಸಬ್ಸಿಡಿ ಕಡಿತವು, ರಸಗೊಬ್ಬರ, ಬೀಜ ಕ್ರಿಮಿನಾಶಕ, ನೀರು, ವಿದ್ಯುತ್ ಬೆಲೆಗಳನ್ನು ಏರಿ ಪ್ರತಿ ಎಕರೆಯ ಉತ್ಪಾದನಾ ವೆಚ್ಚವನ್ನು ಹೆಚ್ಚಿಸಿದ್ದರೆ......

ಇನ್ನೊಂದೆಡೆ ಇಲ್ಲಿಯ ರೈತರು ವಿದೇ ಮಾರುಕಟ್ಟೆ ಕಡೆ ನೋಡುವುದಿರಲಿ ವಿದೇಶಿದಾಸ್ತನೇ ಸಾವಿರಾರು ಮೈಲಿಗಳಿಂದ ಅಗ್ಗದರದಲ್ಲಿ ಮಾರಾಟವಾಗಲು ನಮ್ಮ ಮಾರುಕಟ್ಟೆ ತುಂಬಿ, ಇಲ್ಲಿನ ಬೆಳೆಗಳಿಗೆ ಬೆಲೆಸಿಗದಂತೆ ಮಾಡಿ ರೈತರು ತತ್ತರಿಸಿಹೋಗುವಂತೆ ಮಾಡಿದೆ ಪರಿಣಾಮವಾಗಿ ಆಂಧ್ರಪ್ರದೇಶ ಕರ್ನಾಟಕ ಮಹಾರಾಷ್ಟ್ರ, ಓರಿಸ್ಸಾಗಳಲ್ಲಿ ರೈತ ಆತ್ಮಹತ್ಯೆಗಳಾಗುತ್ತಿವೆ.

★ ★ ★

ಬಡವರಿಗೆ ಭೂಮಿ ನೀಡುತ್ತಿಲ್ಲ

ಮನೆಯಿಲ್ಲದವರಿಗೆ ನಿವೇಶನಕ್ಕೆ ಜಾಗ ನೀಡುತ್ತಿಲ್ಲ. ಭೂಸುಧಾರಣೆಯನ್ನು ಕೈಬಿಟ್ಟಿಲ್ಲ ವ್ಯತಿರೇಕವಾಗಿ ಹಲವು ರಾಜ್ಯ ಸರ್ಕಾರಗಳು ವಿಶಾಲ ಭೂ ಒಡೆತನದ ಭೂಮಾಲಿಕತ್ವವನ್ನು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಸುತ್ತಿವೆ ಉದಾಹರಣೆಗೆ: ಅತ್ಯಂತ ಅಗ್ಗ ದರದ ಕಾರ್ಪೋರೇಟ್ ಕಂಪನಿಗಳಿಗೆ 50 ಲಕ್ಷ ಎಕರೆ ಭೂಮಿಯನ್ನು ತಮಿಳ್ನಾಡು ಎ.ಐ.ಎ.ಡಿ.ಎಮ್.ಕೆ ಸರ್ಕಾರ ಗುತ್ತಿಗೆ ನೀಡಲು ಮುಂದಾಗುತ್ತಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮೇ 200 ರ ಸುತ್ತೋಲೆ ಹೇಳುತ್ತದೆ. ಹಲವು ದಶಕಗಳ ಹಿಂದಿನಿಂದ ಸಾಗುವಳಿ ಮಾಡುತ್ತಿರುವ ಲಕ್ಷಾಂತರ ಆದಿವಾಸಿಗಳನ್ನು ಒಕ್ಕಲೆಬ್ಬಿಸಲು ಸೂಚಿಸಿದೆ.

1990 ರಲ್ಲಿ ವರ್ಷಕ್ಕೆ 100 ದಿನಗಳಷ್ಟು ಕೂಲಿ ಕೆಲಸ ಪಡೆಯುತ್ತಿದ್ದ ಕೂಲಿಕಾರ ಈಗ ಕೇವಲ 78 ದಿನ ಪಡೆಯುತ್ತಿದ್ದಾನೆ.

ನಗರಗಳಲ್ಲಿ ಕಾರ್ಖಾನೆಗಳ ಮುಚ್ಚುವಿಕೆಯಿಂದ ಕಾರ್ಮಿಕರು ಕೆಲಸಕ್ಕಾಗಿ ಹಳ್ಳಿಗೆ ವಾಪಾಸಾಗುತ್ತಿದ್ದಾರೆ ಗ್ರಾಮೀಣ ನಿರುದ್ಯೋಗ 15 ಕೋಟಿಗೆ ಬೆಳೆದಿದೆ

★ ★ ★

ಸಬ್ಸಿಡಿ

ಎಲ್.ಪಿ.ಜಿ ವಿರೋಧಿ ಆಯೋಗ

ನಮ್ಮ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಡಬ್ಲ್ಯು.ಟಿ.ಓ ಒಪ್ಪಂದಗಳನ್ನು ಗೌರವಿಸಲು ನಾವು ಅನಿವಾರ್ಯವಾಗಿ ಸಬ್ಸಿಡಿ ಕಡಿತ ಮಾಡಬೇಕಾಗಿದೆ ಎಂದು ಹೇಳುತ್ತಿವೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳು 1986-89 ರ ಕೃಷಿ ರಂಗಕ್ಕೆ 12,35,000 ಕೋಟಿ ರೂ ನೀಡಿದ್ದರೆ(2,47,000 ಮಿಲಿಯನ್ ಡಾಲರ್) ಡಬ್ಲ್ಯು.ಟಿ.ಓ 1999 ರೊಳಗೆ ಇದಕ್ಕೆ

ಪ್ರಧಾನ ಕಾರ್ಯದರ್ಶಿಗಳ ವರದಿಯ ಮುಖ್ಯಾಂಶಗಳು



ಸಮಾರೋಪದಲ್ಲಿ ಅಧ್ಯಕ್ಷರಾದ ಕಾಂ. ಎಸ್. ರಾಮಚಂದ್ರ ಪಿಳ್ಳೆ

ಕೋಜಿಕೋಡ್‌ನಲ್ಲಿ ಸೇರಿದ್ದ ನಂತರದ ಇಲ್ಲಿಯವರೆಗಿನ 4 ವರ್ಷಗಳ ಅವಧಿಯು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯದಲ್ಲಿ ಬಹಳ ವೇಗವಾದ ಬೆಳವಣಿಗೆ ಕಂಡ ಅವಧಿಯಾಗಿದೆ.

ಸಾಮ್ರಾಜ್ಯಶಾಹಿಗಳ ಹೊಸದಾಳಿಗಳು ಹಾಗೂ ಅದರ ವಿರುದ್ಧ ಬೆಳೆಯುತ್ತಿರುವ ಪ್ರತಿರೋಧಗಳು ಅವರು ಅನುಸರಿಸಿದ ಆರ್ಥಿಕ-ರಾಜಕೀಯ ರಂಗದ ಮೇಲಿನ ದಾಳಿಗಳ ಪರಿಣಾಮವಾಗಿ ಜಾಗತಿಕವಾಗಿ ಬೆಳೆಯುತ್ತಿವೆ.

ಈ ಅವಧಿಯಲ್ಲಿ ಕಿಸಾನ್ ಸಭಾ ಭೂಮಾಲಿಕರು ಅವರು ಗೂಂಡಾಗಳ ದಾಳಿಗಳನ್ನು ಮತ್ತು ಪೋಲೀಸರು, ಮಿಲಿಟರಿ ಬಣಗಳ ದಾಳಿಗಳನ್ನು ಅದೇ ರೀತಿ ಕೋಮುವಾದಿ ಮತ್ತಿತರೆ ವಿಭಜನಕಾರಿ ಶಕ್ತಿಗಳನ್ನು ಎದುರಿಸಿದೆ.

ಇದೆಲ್ಲವನ್ನು ಎದುರಿಸಿ ನಾವು ಸ್ವತಂತ್ರವಾಗಿ ಹಾಗೂ ಜಂಟಿಯಾಗಿ ಹೋರಾಟಗಳನ್ನು ನಡೆಸಿದ್ದೇವೆ.

ದೇಶವನ್ನು 26 ಕಣಿವೆ ಪ್ರದೇಶಗಳಾಗಿ ವಿಭಜಿಸಲಾಗಿದೆ. (River Basin)

ಒಟ್ಟು ಜಲಸಂಪನ್ಮೂಲ 1953 Bum
$=1953 \times 10^9$ cum

ದೇಶದೊಳಗಡೆ ಈ ಜಲಸಂಪನ್ಮೂಲ ಅಸಮಾನ ರೀತಿಯಲ್ಲಿ ಸಿಗುತ್ತದೆ. ಎಲ್ಲೆಡೆ ಒಂದೇ ರೀತಿ ಇಲ್ಲ.

ಗಂಗಾ-ಯಮುನಾ- ಬ್ರಹ್ಮಪುತ್ರಾದಲ್ಲಿ 1200 ಬಿಸಿಎಮ್ ಲಭ್ಯವಿದೆ ಮತ್ತು ದೇಶದ ಒಟ್ಟು ಜಲ ಲಭ್ಯದ ಶೇ.60 ಆಗುತ್ತದೆ. ಅದರೆ ಈ ನದಿಗಳ ಕಣಿವೆ ಪ್ರದೇಶ, ಭೌಗೋಳಿಕ ಪ್ರಾದೇಶಿಕ ಶೆ.33 ರಷ್ಟನ್ನು ಒಳಗೊಳ್ಳುತ್ತದೆ.

ಪಶ್ಚಿಮಕ್ಕೆ ಹರಿಯುವ ನದಿಗಳಿಂದ, ದಕ್ಷಿಣಕ್ಕೆ ಟಾಪಿ ನದಿಯಿಂದ ಇವು 200 ಬಿಸಿಎಂ ನೀರು ಲಭ್ಯ ಹೊಂದಿವೆ. ಒಟ್ಟು ಜಲದ ಶೇ.11 ಇದ್ದು ಕಣಿವೆ ಪ್ರದೇಶ ಶೇ.3 ಹೊಂದಿದೆ. ಉಳಿದ ಶೇ 64 ಭೂಪ್ರದೇಶಕ್ಕೆ ಕೇವಲ 553 ಬಿಸಿಎಂ ನೀರು ಲಭ್ಯವಿದೆ.

ಒಂದು ಅಂದಾಜಿನಂತೆ 2010 ನೇ ವರ್ಷಕ್ಕೆ ಭಾರತಕ್ಕೆ ಒಟ್ಟು ಆಹಾರ ದಾನ್ಯ 245-247 ಮಿಲಿಯನ್ ಬೇಕಾಗುತ್ತದೆ. ಅದೇ ರೀತಿ 2025ಕ್ಕೆ 308 ರಿಂದ 320 ಮಿಲಿಯನ್ ಟನ್ ಬೇಕಾಗುತ್ತದೆ. 2050ಕ್ಕೆ 420-494 ಮಿಲಿಯನ್ ಟನ್ ಬೇಕಾಗುತ್ತದೆ. ಇದಕ್ಕಾಗಿ 561-611 ಬಿಸಿಎಂ ನೀರನ್ನು ನೀರಾವರಿಗಾಗಿ 2025ಕ್ಕೆ ಬಳಸಿಕೊಳ್ಳಬೇಕಾಗಿದೆ. 628-807 ಬಿಸಿಎಂ ನೀರು 2050 ಕ್ಕೆ ಬಳಸಬೇಕಾಗುತ್ತದೆ.

ಕೆಲ ನೀರಾವರಿ ಯೋಜನೆಗಳನ್ನು 1950ರಿಂದ ಆರಂಭಿಸಲಾಗಿದ್ದು ಇನ್ನೂ ಪೂರ್ಣಗೊಳಿಸಬೇಕಾಗಿದೆ. 292 ಬೃಹತ್‌ನೀರಾವರಿ ಹಾಗೂ ಬಹು ಉದ್ದೇಶಿತ ಯೋಜನೆಗಳಲ್ಲಿ 8ನೇ ಯೋಜನೆವರೆಗೆ 130ನ್ನು ಪೂರ್ಣಗೊಳಿಸಲಾಗಿದೆ.

ಪೂರ್ಣಗೊಳ್ಳದ ಈ ಯೋಜನೆಗಳನ್ನು ಮುಗಿಸಲು ಸರ್ಕಾರಕ್ಕೆ (1995-97 ರ ದರದಲ್ಲಿ) 9ನೇ ಯೋಜನೆಯಲ್ಲಿ ಆರಂಭಿಕವಾಗಿ 1,26,133 ಕೋಟಿ ಬೇಕಾದರೆ 10ನೇ ಯೋಜನೆಯಲ್ಲಿ ಅಂದಾಜು 70 ಸಾವಿರ ಕೋಟಿ, ಮತ್ತು 11ನೇ ಯೋಜನೆಯಲ್ಲಿ ಸುಮಾರು 1,10,000 ಕೋಟಿ ಬೇಕಾಗುತ್ತದೆ.

ಈ ದಿನದ ಉದಾರವಾದಿ ಆರ್ಥಿಕ ನೀತಿಗಳಲ್ಲಿ ಸರ್ಕಾರ ಈಗ ನೀರಾವರಿಗಾಗಿ ಮೀಸಲಿಟ್ಟ ಬಜೆಟ್ ಹಣದಂತೆ ಮುಂದುವರಿದರೆ 2050ಕ್ಕೂ ಪೂರ್ಣಗೊಳ್ಳದು. ಈ ಹಿನ್ನೆಲೆಯಲ್ಲಿ ಸರ್ಕಾರ ನೀರಾವರಿ ಯೋಜನೆಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡುತ್ತಿರುವುದನ್ನು ಗಮನಿಸಬೇಕಿದೆ.

ನೀರು ರಾಷ್ಟ್ರೀಯ ಸಂಪನ್ಮೂಲವಾಗಿದ್ದು ಅದನ್ನು ಖಾಸಗೀ ಬಂಡವಾಳ ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿ ತೀವ್ರ ಶೋಷಣೆಗೊಳಪಡಿಸಲು ಬಿಡಬಾರದು

ಅಂತರ್ಜಲ ಕಾನೂನುಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಂಘಟಿತ ರೈತರ ಸಹಕಾರ ಪಡೆದು Unregulated ಶೋಷಣೆಯನ್ನು ತಡೆಯಬೇಕು.

ಕಡಿಮೆಯಾಗುವ ಬದಲು 16,36,000 ಕೋಟಿ ರೂ.ಗಳಿಗೆ ಹೆಚ್ಚಳ ಮಾಡಿವೆ. 2001 ರಲ್ಲಿ ಡಬ್ಲ್ಯು.ಟಿ.ಒ ನಿರ್ದೇಶಕನ ಹೇಳಿಕೆಯಂತೆ ಪ್ರತಿದಿನ 100 ಕೋಟಿ ರೂ ಸಬ್ಸಿಡಿ ನೀಡಲಾಗುತ್ತಿದೆ. ಒಟ್ಟಾರೆ 18,25,000 ಕೋಟಿ ರೂಪಾಯಿಗಳಷ್ಟು ಹೆಚ್ಚಿದೆ.

★ ★ ★

ಸಾಲವಿಲ್ಲ

ಸರ್ಕಾರದ ಸಾಲದ ಆದ್ಯತೆ ಬದಲಾಗಿದೆ. ಅದು ರೈತರ ವಿರುದ್ಧವಾಗಿ ಬಹುರಾಷ್ಟ್ರೀಯ ಸಂಸ್ಥೆಗಳು- ದೊಡ್ಡ ವ್ಯಾಪಾರಿಗಳ ಕಡೆ ತಿರುಗಿದೆ. 1998-99 ರಲ್ಲಿ ಒಟ್ಟು ಆಂತರಿಕ ಸಾಲ ಹರಿದುದು 8 ಲಕ್ಷ ಕೋಟಿ ಕೃಷಿರಂಗ ಪಡೆದುದು 38 ಸಾವಿರ ಕೋಟಿ ಕೇವಲ ಶೆ.4.5 ಮಾತ್ರ.

ಸಾಮಾಜಿಕ ದಬ್ಬಾಳಿಕೆ ಆಯೋಗ

- ದೇಶದಲ್ಲಿ ಶೇ.17 ಜನ ದಲಿತರಿದ್ದಾರೆ.
- ಶ್ರೇಣೀಕೃತ ಜಾತಿ ಪದ್ಧತಿಯ ಅತ್ಯಂತ ಕಟ್ಟ ಕಡೆಯ ಕೆಳಗಿನ ಸ್ಥರಕ್ಕೆ ಸೇರಲ್ಪಟ್ಟಿದ್ದಾರೆ.
- ಸ್ವಾತಂತ್ರ್ಯ ನಂತರ 56 ವರ್ಷಗಳಾದರೂ ಮೂಲಭೂತ ಮಾನವೀಯ ಹಕ್ಕುಗಳು ಸಿಗಲಿಲ್ಲ.
- ಸಂವಿಧಾನದ ಕಲಮು 17 ಅಸ್ಪೃಶ್ಯಾಚರಣೆ ನಿಷೇಧಿಸಿದ್ದರೂ' ಪಿ.ಸಿ.ಆರ್. ಕಾಯ್ದೆ 1955 ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ 1989.... ಹೀಗೆ ಅನೇಕ- ಕಾಯ್ದೆಗಳಿದ್ದರೂ ದೇಶದೆಲ್ಲೆಡೆ ಅಸ್ಪೃಶ್ಯಾಚರಣೆ- ದೌರ್ಜನ್ಯ ದಬ್ಬಾಳಿಕೆ, ನಿವೇಶನಕ್ಕೆ ಬೆಂಕಿ ಹಚ್ಚುವುದು ಅಬಾಧಿತವಾಗಿ ನಡೆದಿವೆ.
- ಇತ್ತೀಚೆಗೆ ತಮಿಳ್ನಾಡಿನ ತಿರುಚಿಯಲ್ಲಿ ದಲಿತನೊಬ್ಬನಿಗೆ ಮಲ ತಿನ್ನಿಸಿದ ಬರ್ಬರ ಅಮಾನವೀಯ ಘಟನೆ ನಡೆದಿದೆ. ಅದೇ ರೀತಿ ದಿಂಡುಗಲ್‌ನಲ್ಲಿ ಮೂತ್ರ ಕುಡಿಸಿದ ಘಟನೆ ನಡೆದಿರುವುದು.
- ಹರ್ಯಾಣದಲ್ಲಿ ಪೋಲೀಸರ ಎದುರಗಡೆಯೇ 5 ಜನರನ್ನು ಕೋಮುವಾದಿಗಳು ಕೊಂದು ಹಾಕಿದರು.
- ದಲಿತ ಮಹಿಳೆಯರು ಮೇಲ್ಜಾತಿಯ ಭೂಮಾಲಿಕರಿಂದ ಗುಂಡಾಗಳಿಂದ ನಿರಂತರ ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ.
- 2000 ದಲ್ಲಿ 1,16,13 ಕೇಸುಗಳಲ್ಲಿ (ದಲಿತರು ನೋಂದಾಯಿಸಿದ್ದು) ಕೇವಲ 12,956 ಬಗೆಹರಿಸಲಾಗಿದೆ. ಅದರಲ್ಲಿ ಕೇವಲ 982ರಲ್ಲಿ ಶಿಕ್ಷೆ ನೀಡಲಾಗಿದೆ. ಉತ್ತರ ಪ್ರದೇಶದಲ್ಲಿ ಮಾತ್ರವೇ 74,307 ಕೇಸುಗಳು ಕೋರ್ಟ್‌ನಲ್ಲಿ ಪೆಂಡಿಂಗ್ ಉಳಿದಿವೆ.

ಎಷ್ಟೋ ಕೇಸುಗಳನ್ನು ದಾಖಲಿಸಿಕೊಳ್ಳುವುದಿಲ್ಲ

- ದಲಿತರು ಶೇ. 80 ರಷ್ಟು ಜನರು ಕೂಲಿಕಾರರಾಗಿದ್ದಾರೆ. ಭೂಹೀನರಾಗಿದ್ದಾರೆ. ಅತ್ಯಂತ ಕಡಿಮೆ ಕೂಲಿಗೆ ಬದುಕುವವರು ಹಾಗೂ ಭೂಮಾಲಿಕರ ಕರುಣೆಯಲ್ಲಿ ಬದುಕುವವರಾಗಿದ್ದಾರೆ.
- ಬಿಹಾರದ ಭೂಮಾಲಿಕರು 'ರಣವೀರಸೇನೆ' ಎಂಬ ಖಾಸಗೀ ಗೂಂಡಾಪಡೆ ಹೊಂದಿದ್ದಾರೆ. ಭೂಮಿಗಾಗಿ ಹಕ್ಕಿಗಾಗಿ ದಲಿತರು ಮುಂದೆ ಬಂದರೆ ಕೊಲೆಗಳನ್ನು ಮಾಡಿಸುತ್ತಾರೆ.

ರಾಜ್ಯ- ಕೇಂದ್ರ/ ಸರ್ಕಾರಗಳು


- ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಮೀಸಲಾತಿ ಉದ್ಯೋಗವೆಂದು 78,450 ಇಟ್ಟಿದ್ದರೆ ಅದರಲ್ಲಿ ಕೇವಲ 3450 ತುಂಬಿರುತ್ತಾರೆ.
- ದೇಶವ್ಯಾಪಿ ಪ್ರಚಾರಾಂದೋಲನಕ್ಕೆ ಹಾಗೂ ನೇರ ಕಾರ್ಯಾಚರಣೆಗಿಳಿಯಲು ಕಿಸಾನ್ ಸಭಾ ಘಟಕಗಳಿಗೆ ಕರೆ ನೀಡಲಾಗಿದೆ.

- ಯು.ಬಸವರಾಜು

ಅಂಬೇಡ್ಕರ್ ಜಯಂತಿ ಬಂತು !

ನಾಡಿನ ದಲಿತರಲ್ಲಿ ಜಾಗೃತಿ, ಹೋರಾಟದ ಮನೋಭಾವ, ಸ್ವಾಭಿಮಾನದ ಕಿಚ್ಚು ಹೊತ್ತಿಸಿದ ದಲಿತ ಚಳುವಳಿ ಇಂದು ಹಲವು ತುಂಡುಗಳಾಗಿ ಒಡೆದು ದುರ್ಬಲವಾಗಿದೆ. ಸೈದ್ಧಾಂತಿಕ, ರಾಜಕೀಯ ಭಿನ್ನಾಭಿಪ್ರಾಯಗಳು ಒಂದೆಡೆಯಾದರೆ, ಪಟ್ಟಭದ್ರ ಹಿತಾಸಕ್ತಿಗಳ ಹುನ್ನಾರವೂ ಇನ್ನೊಂದೆಡೆ ಇದೆ. ದಲಿತರ ಮೇಲೆ ದಬ್ಬಾಳಿಕೆಗಳೂ ಹೆಚ್ಚುತ್ತಿವೆ. ಜೀವನ ದುರ್ಭರವಾಗುತ್ತಿದೆ. ದಲಿತರು ಎದುರಿಸುತ್ತಿರುವ ಗಂಭೀರ ಪರಿಸ್ಥಿತಿ, ಮುಂದೆ ಮಾಡಬೇಕಾದುದೇನು ಎಂದು ಡಾ. ಬಿ.ಆರ್.ಅಂಬೇಡ್ಕರ್‌ರವರ ಜನ್ಮದಿನದ ಹೊತ್ತಿನಲ್ಲಿ ತಮ್ಮ ಸ್ವಂತ ಅನುಭವದ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ ವಿದ್ಯಾರ್ಥಿ ಮುಖಂಡ

ಬಿ.ರಾಜಶೇಖರ ಮೂರ್ತಿಯವರು



ಏಪ್ರಿಲ್ ಬಂತು ! ಅಂಬೇಡ್ಕರ್ ಜಯಂತಿ ಬಂತು. ತಿಂಗಳೆಲ್ಲಾ ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಎಂದು ಬಾಯಿ ತುಂಬಾ ಜಪಗಳು. ಅಷ್ಟೇ ಏಕೆ ದಲಿತರ ಮೇಲಿರುವ ತಮ್ಮ ಅಪಾರ ಪ್ರೀತಿಯನ್ನು ತೋರ್ಪಡಿಸುವ ಸಮಯ ಹಲವರಿಗೆ. ಸರ್ಕಾರಗಳ ನೂರೆಂಟು ಆಶ್ವಾಸನೆಗಳು. ಅಂಬೇಡ್ಕರ್, ಪ್ರತಿಮೆಗಳಿಗೆ, ಫೋಟೋಗಳಿಗೆ ಹೂವಿನ ಹಾರಗಳು, ಉಪನ್ಯಾಸಗಳು, ವಿಚಾರಸಂಕಿರಣಗಳು, ಬಿಡುವಿಲ್ಲದ ಕಾರ್ಯಕ್ರಮಗಳು ಇವೆಲ್ಲಾ ಯಾರ ಹಿತಕ್ಕಾಗಿ, ಯಾರ ಬೆಳವಣಿಗೆಗಾಗಿ ನಡೆಯುತ್ತಿವೆ? ಒಂದು ಕಾಲದಲ್ಲಿ ದಲಿತ ಚಳುವಳಿ ಎಂದರೆ, ದಲಿತರ ಪ್ರತಿಭಟನೆ ಎಂದರೆ ನಡುಗುತ್ತಿದ್ದ ಪಟ್ಟಭದ್ರ ಶಕ್ತಿಗಳು ಇಂದು ಯಾಕೆ ನಡುಗುತ್ತಿಲ್ಲ? ಬದಲಾಗಿ ಗುಡುಗುತ್ತಿವೆ. ಇವತ್ತಿಗೂ ದಲಿತರು ಎರಡೊತ್ತು ಕೂಳಿಗಾಗಿ ಪರಿತಪಿಸುತ್ತಿದ್ದಾರೆ. ಇಂದಿನ ಜಾಗತಿಕ ಯುಗದಲ್ಲಿ ಜೀತ ಪದ್ಧತಿ, ಅಸ್ಪೃಶ್ಯತೆ, ಜಾತೀಯತೆ, ಅಸಮಾನತೆ ತುಂಬಿ ತುಳುಕುತ್ತಿದೆ. ದೇವದಾಸಿ ಪದ್ಧತಿ ವಿಜೃಂಭಿಸುತ್ತಿದೆ. ದಲಿತ ಮಹಿಳೆಯರ ಮೇಲೆ ಅತ್ಯಾಚಾರ, ಬತ್ತಲೆ ಮೆರವಣಿಗೆ, ದಲಿತರಿಗೆ ಬಹಿರಂಗ ಹಿಂಸೆ, ಕೊಲೆ, ದರೋಡೆ, ಬಹಿರಂಗ ಅಸ್ಪೃಷ್ಯತೆ ಆಚರಣೆ ನಿರಂತರವಾಗಿ ನಡೆಯುತ್ತಿದೆ. ವಿದ್ಯಾವಂತ ಮಹಾ ಪಂಡಿತರಾದ ಬುದ್ಧಿ ಜೀವಿಗಳು ಯಾಕೆ ಈ ಅಸಮಾನತೆ ವಿರುದ್ಧ ಸೊಲ್ಲೆತ್ತುವುದಿಲ್ಲ. ಕಾನೂನು, ಪೊಲೀಸ್, ಕೆಲ ದಲಿತ ನಾಯಕರು ಕಣ್ಣೆದುರೇ ಅನ್ಯಾಯ ನಡೆಯುತ್ತಿದ್ದರೂ ನಿಷ್ಕ್ರೀಯರಾಗಿದ್ದಾರೆ. ವಿದ್ಯಾವಂತ ದಲಿತರು ನರವಿಲ್ಲದವರಂತಾಗಿದ್ದಾರೆ. ವಿದ್ಯಾವಂತರೆಲ್ಲರ ನರನಾಡಿಗಳಲ್ಲಿ ಯಾಕೆ ಜಾತಿಯೆಂಬ ರಕ್ತ ಹರಿಯುತ್ತಿದೆ. ಮಾನವೀಯತೆ ಎಂಬುದೇ ಮರಣವಾಗಿದೆ.

ಸಾಮ್ರಾಜ್ಯಶಾಹಿ - ಬಂಡವಾಳಶಾಹಿ - ಭೂಮಾಲೀಕ - ಆಳುವ ವರ್ಗಗಳ ಆದಿಪತ್ಯ ಉಳಿಸಿಕೊಳ್ಳಲು ಹರಿಯಬಿಟ್ಟಿರುವ ಉದಾರೀಕರಣ - ಖಾಸಗೀಕರಣ - ವ್ಯಾಪಾರೀಕರಣ, ಕೋಮುವಾದಗಳಿಂದ ದುಡಿಯುವ ಅಮಾಯಕ ಮುಗ್ದ ಜೀವಿಗಳು ಬಲಿಯಾಗುತ್ತಿವೆ. ಈ ಬಲಿಯಾಗುವ ಜೀವಗಳಲ್ಲಿ ದಲಿತರ ಪಾಲೇ ಮೇಲುಗೈಯಾಗಿದೆ. ಶಿಕ್ಷಣ ಎಂಬುದು ಮೊದಲಿಗೆ ಗುರುಕುಲಗಳಲ್ಲಿ ಮೇಲ್ಜಾತಿಗಳಿಗೆ ಮಾತ್ರ ಮೀಸಲಿದ್ದಂತೆ ಇಂದು ಹಣವಿದ್ದ ಶ್ರೀಮತರಿಗೆ ಶಿಕ್ಷಣ ಮತ್ತು ಜೀವನ ನಡೆಸಲು ಅವಕಾಶ, ಹಣವಿಲ್ಲದವರು ಸಾವಿನ ಸರದಿಯ ಸಾಲಿನಲ್ಲಿ ನಿಲ್ಲಬೇಕು. ಇಂಥ ಘೋರ ಜನವಿರೋಧಿ ನೀತಿಗಳ ವಿರುದ್ಧ ಹೋರಾಡುವ ಶಕ್ತಿಗಳ ಜೊತೆ ದಲಿತ ಸಂಘಟನೆಗಳು ಏಕೆ ಇಂದು ಸೇರುತ್ತಿಲ್ಲ?

ಸ್ವತಂತ್ರ್ಯ ಪೂರ್ವದಲ್ಲಿ ಮೇಲ್ಜಾತಿಗಳ ಸ್ವತ್ತಾಗಿದ್ದ ಶಿಕ್ಷಣವನ್ನು ತಮ್ಮ ತೆಕ್ಕೆಯಲ್ಲಿ ಹಿಡಿದುಕೊಂಡು ತಮ್ಮ ಹಿತಕ್ಕೆ ದಕ್ಕೆ ಬರದಹಾಗೆ ವ್ಯವಸ್ಥಿತ ಅಸ್ತಿತ್ವ ಸ್ಥಾಪಿಸಿ ಮೆರೆಯುತ್ತಿದ್ದ ಸಂದರ್ಭದಲ್ಲಿ ಬ್ರಿಟಿಷರ ಆಗಮನವಾಯಿತು. ದೇಶದ ಸಂಪತ್ತನ್ನೆಲ್ಲಾ ದೋಚಲು ಬೇಕಾದ ಎಲ್ಲಾ ಅಗತ್ಯಗಳನ್ನೆಲ್ಲಾ ತಮ್ಮ ದೇಶಗಳಿಂದಲೇ ತರಲು ದುಬಾರಿ ಹಾಗೂ ಕಷ್ಟವಾದ್ದರಿಂದ ನಮ್ಮ ದೇಶದಲ್ಲೇ ಕೆಲವು ಯೋಜನೆಗಳನ್ನು ಬ್ರಿಟೀಷರು ರೂಪಿಸಿದರು. ಇದರ ಫಲವಾಗಿ ನಮ್ಮ ದೇಶದಲ್ಲಿನ ಜನರನ್ನು ಗುಮಾಸ್ತರನ್ನಾಗಿ ಪಡೆಯಲು ಶಿಕ್ಷಣವನ್ನು ಜಾರಿಗೆ ತಂದರು. ಇಂಥ ಸಂದರ್ಭದಲ್ಲಿ ಶಿಕ್ಷಣ ಪಡೆದ ಅನೇಕರಿಗೆ ವಾಸ್ತವ ಸ್ಥಿತಿ ಅರಿವಾಗತೊಡಗಿತ್ತು. ಶಿಕ್ಷಣದ ಅರಿವಿನ ಜ್ಞಾನದಿಂದಲೇ ತಮ್ಮ ಅಜ್ಞಾನದ ಅರಿವಾಗತೊಡಗಿತ್ತು. ಬ್ರಿಟೀಷರ ಶೋಷಣೆಯ ವಿರುದ್ಧ ಸಮರಶೀಲ ಹೋರಾಟ ರೂಪಿಸಿ ದೇಶ ಸ್ವಾತಂತ್ರ್ಯಗಳಿಸಲು ಸಾಧ್ಯವಾಯಿತ್ತಲ್ಲದೆ, ಈ ದೇಶದಲ್ಲಿನ ಅಸಮಾನತೆಯ ವಿರುದ್ಧದ ಹೋರಾಟ ದೇಶದ ಉದ್ದಗಲ ಹರಿಯ ತೊಡಗಿತ್ತು. ಇದೇ ವಿರುದ್ಧದ ಹೋರಾಟ ದೇಶದ ಉದ್ದಗಲ ಹರಿಯತೊಡಗಿತ್ತು. ಇದೇ ಸಮಯದಲ್ಲಿ ಕಾರ್ಮಿಕ ವರ್ಗದ ರಷ್ಯಾ ಕ್ರಾಂತಿಯ ಫಲವಾಗಿ, ಅಲ್ಲಿನ ಬದಲಾವಣೆಯ ಬೆಳವಣಿಗೆಯು ಇಡೀ ಪ್ರಪಂಚಕ್ಕೆ ವಿದ್ಯುತ್ ಸಂಚಾರವುಂಟು ಮಾಡಿತ್ತು

ದಲಿತರ ಸೂರ್ಯ

ಅಂಬೇಡ್ಕರ್ ಕನಸು ಭಗ್ನ

ತುತ್ತು ಕೂಳಿಗೂ ವಂಚಿತರಾಗಿ, ದೀನ ದರಿದ್ರರಾಗಿ,ಅಸ್ಪೃಶ್ಯತೆ, ಅಪಮಾನದ ನರಕಯಾತನೆ ಅನುಭವಿಸುತ್ತಿದ್ದ ದಲಿತರ ಪರವಾಗಿ, ಅಸಮಾನತೆಯ ವ್ಯವಸ್ಥೆ ವಿರುದ್ಧ ದಲಿತರ ಪಾಲಿಗೆ ಅಂಬೇಡ್ಕರ್ ದನಿಯಾಗಿ, ದಲಿತರ ಜೀವನದ ಕತ್ತಲೆಯ ಬೆಳಕಾಗಿ ಬಂದರು. ಸ್ವಾಭಿಮಾನದ ಅಲೆಯನ್ನು ದಲಿತರ ನರನಾಡಿಗಳಲ್ಲಿ ತುಂಬಿದರು. ದಲಿತರು ಎದೆ ಎತ್ತಿ ಉಸಿರಾಡಲು, ಕೈಕಾಲು ಆಡಿಸಲು ಆಸರೆಯಾದರು. ಉದಾಹರಣೆ ಯೆಂದರೆ ಇವತ್ತಿಗೂ ಸಂಕಷ್ಟ ದಲ್ಲಿರುವ ದಲಿತರಿಗೆ ಅಂಬೇಡ್ಕರ್ ಎಂದರೆ ಎದೆ ಸೆಟೆದು ನಿಲ್ಲುತ್ತದೆ. ಮುಂದೊಂದು ದಿನ ನಮಗೆ ನೆಮ್ಮದಿ ಇದೆಯೆಂದು ಕನಸುಕಾಣುತ್ತಾರೆ.

ಇಂಥ ಮಹಾ ಪ್ರವಾಹವನ್ನೇ ಹರಿಸಿದ ಅಂಬೇಡ್ಕರ್‌ರವರ ಕನಸು ನುಚ್ಚುನೂರಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಒಂದು ಮಾತನ್ನೂ ಸಾರಿ ಸಾರಿ ಹೇಳಿದ್ದರು. "ನಾನು ರಥವನ್ನು ಕಟ್ಟಿ ನಿಲ್ಲಿಸಿದ್ದೇನೆ ಯಾರಾದರೂ ಮುಂದಕ್ಕೆ ಎಳೆಯಬಹುದು, ಆದರೆ ಯಾವ ಕಾರಣಕ್ಕೂ ಹಿಂದಕ್ಕೆ, ಎಳೆಯಬೇಡಿ"ರೆಂದು. ಆದರೆ ಇಂದಿನ ನಮ್ಮ ಕೆಲವು ದಲಿತ ನಾಯಕರು (ಅವಕಾಶವಾದಿಗಳು) ಅದೇ ಪಟ್ಟಾಭದ್ರಶಕ್ತಿಗಳ ಜೊತೆಗೂಡಿ ಅಂಬೇಡ್ಕರ್ ಕಟ್ಟಿದ್ದ ರಥವನ್ನು ಹಿಂದಕ್ಕೆ ಎಳೆಯುತ್ತಿದ್ದಾರಲ್ಲದೆ ರಥವನ್ನೂ ನಾಶಗೊಳಿಸುತ್ತಿದ್ದಾರೆ.

ಪ್ರಾರಂಭದಲ್ಲಿ ಅಂಬೇಡ್ಕರ್ ಹಾಕಿಕೊಟ್ಟಿದ್ದ ದಾರಿಯನ್ನು ತುಳಿಯುತ್ತಿದ್ದ ದಲಿತ ನಾಯಕತ್ವ ಶೋಷಿತರ ಮನೆಮಾತಾಗಿತ್ತು. ಅಂತಹ ನಾಯಕತ್ವದ ಒಂದು ಭಾಗ ಇಂದು ಆಳುವವರ್ಗಗಳ ಕೈಗೊಂಬೆಯಾಗಿದೆ. ತನ್ನ ತನವನ್ನೇ ಮಾರಿಕೊಂಡಿದೆ. ಯಾವ ಪಾಳೇಗಾರಿ, ಪುರೋಹಿತಶಾಹಿ ಶಕ್ತಿಯು, ಅಂಬೇಡ್ಕರ್‌ರವರು ಮನುಷ್ಯರನ್ನು ಮನುಷ್ಯರಾಗಿ ಬದುಕಲು ಬಿಡಿ ಎಂದು ಹೋರಾಡುತಿದ್ದಾಗ ವಿರೋಧಿಸಿದ್ದರೋ ಅದೇ ಶಕ್ತಿಗಳ ಜೊತೆ ಇಂದು ನಮ್ಮ ಕೆಲವು ದಲಿತ ನಾಯಕರೆನಿಸಿಕೊಂಡವರು ಕೈಜೋಡಿಸಿಕೊಂಡಿದ್ದಾರೆ. ಅಧಿಕಾರದಾಹದಿಂದ ಆಳುವ ಶಕ್ತಿಗಳ ಜೊತೆ ಸೇರಿ ಬಡದಲಿತರನ್ನು ವಂಚಿಸುತ್ತಿದ್ದಾರೆ. ದಲಿತ ಚಳುವಳಿಯನ್ನೆ ಯಾಕೆ, ಪ್ರಜಾಸತ್ತಾತ್ಮಕ ಹೋರಾಟದ ಚಳುವಳಿಯನ್ನೇ ಬೆಳೆಯದಂತೆ ಮಾಡಿದ್ದಾರೆ. ಹಿಂದೂ ಮೂಲಭೂತ, ಮುಸ್ಲಿಂ ಮೂಲಭೂತವಾದಿ ಗಳ ರೀತಿ ಮತಾಂಧ ದಲಿತ ಮೂಲಭೂತ ವಾದಿಗಳು ಬೆಳೆಯತೊಡಗಿದ್ದಾರೆ ಎನಿಸುತ್ತಿದೆ.

ಇಲ್ಲದ ದೇವರುಗಳನ್ನು ಸೃಷ್ಟಿಸಿ ಪ್ರಪಂಚದ ನಿಯಮಗಳಿಗೆ ಆ ದೇವರೇ ಮೂಲವೆಂದಿದ್ದ ಬಾಯಿಗಳು ಬೀಗ ಹಾಕಿಕೊಳ್ಳುತ್ತಿವೆ. ಆದರೆಹೊಸ ಕುತಂತ್ರಗಳನ್ನು ಸೃಷ್ಟಿಸುತ್ತಿವೆ. ಇಂಥ ಹೇಯ ಕೃತ್ಯಗಳಿಂದಲೇ ಸಾವಿರಾರು ವರ್ಷಗಳಿಂದ ಮೇಲೆಳಲು ಸಾಧ್ಯವಾಗದಿದ್ದ ದಲಿತ ಸಮುದಾಯಕ್ಕೆ ವೈಚಾರಿಕ, ವೈಜ್ಞಾನಿಕ, ಪ್ರಗತಿಪರ ವಾಸ್ತವತೆಯನ್ನು ಹೇಳಿ ಸಂಘಟಿಸದೇ, ಅಂಬೇಡ್ಕರ್‌ರವರನ್ನು ದೈವವಾಗಿಸುತ್ತಿದ್ದಾರೆ. ಮೂರ್ತಿ ಪೂಜೆಗೆ ಉತ್ತೇಜನ ನೀಡುತ್ತಿದ್ದಾರೆ. ಚಡ್ಡಿಗಳು ಜೈ ಶ್ರೀರಾಮ್ ಎನ್ನಿರೆಂದರೆ, ದಲಿತ ಮೂಲಭೂತ ವಾದಿಗಳು ಜೈ ಭೀಮ್ ಎನ್ನಿರೆಂದು ಘೋಷಿಸುತ್ತಿವೆ. ಸಮಸ್ತ ಜನತೆಯ ಸಹಬಾಳ್ವೆಗಾಗಿ ಭೂ ಹಂಚಿಕೆಯಾಗಬೇಕು ಆಗ ಮಾತ್ರ ಜನರೆಲ್ಲಾ ಬದುಕಲು ಸಾಧ್ಯವೆಂದು ಈಗಾಗಲೇ ಸಾಬೀತು ಆಗಿರುವ ಇತಿಹಾಸವನ್ನು ಮರೆತ್ತಿದ್ದಾರೆ. ದೇಶದ ಆರ್ಥಿಕತೆ ಯಾರ ಹಿಡಿತದಲ್ಲಿದೆ, ಯಾರ ವಿರುದ್ಧ ಯಾರು ಜೊತೆಗೂಡಿ ಹೋರಾಡಬೇಕೆಂದು ನಾಯಕತ್ವ ನೀಡಬೇಕಿದ್ದ ನಾಯಕರು ತಮ್ಮ ಅಧಿಕಾರಕ್ಕಾಗಿ ದಲಿತರ ಸಮುದಾಯವನ್ನು ವಂಚಿಸುತ್ತಿದ್ದಾರೆ. ಆಳುವ ಶಕ್ತಿಗಳು ಇಂದು ದಲಿತ ಸಮುದಾಯವನ್ನು ದಾಳಗಳಂತೆ ಬಳಸುಕೊಳ್ಳುತ್ತಿದೆ. ಇತ್ತೀಚಿನ ದಿನಗಳಲಂತೂ ದಲಿತ ಸಂಘಟನೆಗಳು ಛಿದ್ರವಾಗುತ್ತಿವೆ. ಸ್ವಾರ್ಥಿಗಳ ಕೈಮೇಲಾಗುತ್ತಿದೆ. ಹೊರ ದೇಶಗಳಿಂದ ಹಣ ಪಡೆಯುತ್ತಿರುವ ಸರ್ಕಾರೇತರ ಸಂಸ್ಥೆಗಳಿಂದ(NGO) ಕೆಲವು ದಲಿತ ಸಂಘಟನೆಗಳಿಗೆ ಹಣ ಹರಿದು ಬರುತ್ತಿದೆ. ದಲಿತ ಸಾಹಿತಿಗಳು ದಲಿತ ಮಠಗಳಾಗಬೇಕೆಂದು ಬಯಸುತ್ತಾ ರಲ್ಲದೆ, ಜಾತಿ ಸಂಘಟನೆಗಳು ಬೆಳೆಯಬೇಕೆಂದು ಅವರ ಹೆಬ್ಬಯಕೆಯಾಗಿದೆ.

ಜಾತಿ ಅಭಿಮಾನ ಕುಸಿಯುತ್ತದೆ - ವರ್ಗಸಂಘರ್ಷ ಉದಯಿಸುತ್ತದೆ

ಒಂದು ಸತ್ಯ ಘಟನೆಯೊಂದನ್ನು ವಿವರಿಸುತ್ತೇನೆ. ನಾನೇ ನೇರವಾಗಿ ನೋಡಿದ್ದು. ಸುಮಾರು 50 ಮನೆಗಳಿರುವ ದಲಿತರ ಊರು. ಎಲ್ಲರಿಗೂ ತಲಾ ಎರಡು ಎಕರೆ ಒಣ ಭೂಮಿ ಇದ್ದು, ಮಳೆಯಾದರಿಸಿ ಬೇಸಾಯ ಮಾಡುತ್ತಿದ್ದಾರೆ. ಇವರಲ್ಲಿ ಕೆಲವರು ಜೀತಮಾಡಿಕೊಂಡು ತಮ್ಮ ಮಕ್ಕಳನ್ನು ಮೆಟ್ರಿಕ್‌ನವರೆಗೆ ವಿದ್ಯಾಭ್ಯಾಸ ಮಾಡಿಸಿದ್ದರು. ಇದರ ಫಲವಾಗಿ ಒಂದಿಬ್ಬರಿಗೆ ಸರ್ಕಾರಿ ಕೆಲಸ ಲಭಿಸಿತ್ತು. ಸರ್ಕಾರಿ ಕೆಲಸ ಪಡೆದ ದಲಿತರು ತಮಗೆ ಬರುವ ಹಣದಿಂದ ಇನ್ನಷ್ಟು ಸಂಪಾದನೆ ಮಾಡಲು ಮೇಲ್ಜಾತಿಯ ಭೂಮಾಲಿಕರ ಜೊತೆಗೂಡಿ ತನ್ನ ಅಣ್ಣ ತಮ್ಮಂದಿರ ಹತ್ತಿರ ಸಾಲ ಪಡೆದು ಹಿಂದಿರುಗಿಸಲಾಗದಿದ್ದ ದಲಿತರ ಜಮೀನನ್ನು ಈ ಸರ್ಕಾರ ನೌಕರರು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡು ಭೂಮಾಲಿಕರ ಕೈ ಜೋಡಿಸಿದ್ದಾರೆ. ಈ ರೀತಿ ಪ್ರತಿ ಹಂತದಲ್ಲೂ ಬಡ ದಲಿತರನ್ನು ಮೇಲ್ಜಾತಿಯ ಶ್ರೀಮಂತರು, ದಲಿತರು ಶೋಷಣೆ ಮಾಡುತ್ತಿದ್ದಾರೆ. ತಮ್ಮ ತಮ್ಮ ಲಾಭಕ್ಕಾಗಿ ಜಾತಿ ಸಂಬಂಧ ಅಡ್ಡಬರುತ್ತಿಲ್ಲ. ಶೋಷಣೆ ಅನುಭವಿಸುತ್ತಿರುವ ದಲಿತರಿಗೆ ತನ್ನ ಜಾತಿಯಾದವರಾದರೇನು ಬೇರೆ ಜಾತಿಯಾದವರಾದರೇನು? ದೊಡ್ಡ ಮೀನುಗಳು ತಿಮಿಂಗಲಗಳು ಸಣ್ಣ ಸಣ್ಣ ಮೀನುಗಳನ್ನು ನುಂಗುವಂಥಹ ಸಿದ್ಧಾಂತವನ್ನೇ ಸತ್ಯವೆಂಬಂತೆ ಇಂದು ಎಲ್ಲಾ ಜಾತೀಯ

ಪುಟ 12 ಕ್ಕೆ

ತೈಲಕ್ಕಾಗಿ ರಕ್ತಪಾತ !! - ಎರಡನೇ ವಾರ !

ತೈಲಕ್ಕಾಗಿ ಏಕಚಕ್ರಾಧಿಪತ್ಯಕ್ಕಾಗಿ ಇರಾಕ್ ಮೇಲೆ ಅಮೆರಿಕದ ದುರಾಕ್ರಮಣ ಎರಡನೇ ವಾರ ಕಳೆದು ಮೂರನೇ ವಾರಕ್ಕೆ ಕಾಲಿಟ್ಟಿದೆ. 'ಶಾಕ್ ಮತ್ತು ದಿಗ್ಭ್ರಮೆ' ಹುಟ್ಟಿಸಿ ಇರಾಕ್ ಸೈನ್ಯದ ಶರಣಾಗತಿ, ಸರ್ಕಾರದ ಪತನ ಮತ್ತು ಜನತೆಯಿಂದ ಹೂಹಾರದ ಜತೆ ಸ್ವಾಗತದ ಅಮೆರಿಕನ್ ಕನಸು ಭಗ್ನವಾಗಿದೆ. ಯುದ್ಧ ತಿಂಗಳುಗಟ್ಟಲೆ ನಡೆಯಬಹುದು ಎಂದು ಬುಶ್-ಬ್ಲೇರ್‌ರೇ ಹೇಳಲಾರಂಭಿಸಿದ್ದಾರೆ. ಇರಾಕ್ ಮೇಲೆ ದುರಾಕ್ರಮಣದ ಹಲವು ಮಗ್ಗಲುಗಳ ಬಗ್ಗೆ 'ರಣರಂಗ'ದಲ್ಲಿ, 'ಯುದ್ಧ-ವಿರೋಧಿ ಚಳುವಳಿ', 'ಮಾಧ್ಯಮ ಯುದ್ಧ', 'ರಾಜಕೀಯ ಬೆಳವಣಿಗೆ' - ಒಂದು ವರದಿ.

— ಶರತ್‌ಚಂದ್ರ

ರಣರಂಗದಲ್ಲಿ ಅನಿರೀಕ್ಷಿತ ಇರಾಕ್ ಪ್ರತಿರೋಧ

◆ ಎರಡನೇ ವಾರದ ನಂತರ ಮತ್ತು ನೂರಾರು ವಿಮಾನ-ಕ್ಷಿಪಣಿ ದಾಳಿ ನಂತರ ಅಮೆರಿಕನ್-ಬ್ರಿಟಿಷ್ ಸೈನ್ಯ ಬಾಗ್ದಾದ್‌ನ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಬಂದಿದ್ದು, ಬಾಗ್ದಾದ್‌ನ್ನು ಸುತ್ತುವರೆದಿದೆ ಎಂದು ಹೇಳಿಕೊಂಡಿದೆ.

◆ ರಣರಂಗದಲ್ಲಿ ನಿಜವಾದ ಸ್ಥಿತಿ, ಗೆಲುವು-ಸೋಲುಗಳ ಬಗ್ಗೆ ಅಮೆರಿಕನ್-ಬ್ರಿಟನ್ ಪಡೆಗಳು ಮತ್ತು ಇರಾಕಿ ಸೈನ್ಯ ತದ್ವಿರುದ್ಧ ಹೇಳಿಕೆ ನೀಡುತ್ತಿದ್ದು ನಂಬಲರ್ಹವಾದ ವರದಿಗಳೂ ಇರದೆ ಏನನ್ನೂ ಖಚಿತವಾಗಿ ಹೇಳಬರುವುದಿಲ್ಲ.

◆ ಅಮೆರಿಕನ್ ಪಡೆಗಳು ಬಾಗ್ದಾದ್ ಮತ್ತು ಬಸ್ರಾ ಮೇಲೆ ತೀವ್ರ ವಿಮಾನ ಕ್ಷಿಪಣಿ ದಾಳಿಯನ್ನು ಮುಂದುವರೆಸಿವೆ. ಇದರಲ್ಲಿ ರಕ್ಷಣಾ ಸಾಮಗ್ರಿ, ಸೈನ್ಯ, ಮಿಲಿಟರಿ ಸ್ಥಾವರಗಳು, ದೂರಸಂಪರ್ಕ ವ್ಯವಸ್ಥೆ ಅಲ್ಲದೆ ನಾಗರೀಕ ವ್ಯವಸ್ಥೆ-ಸ್ಥಾವರಗಳನ್ನು ನಾಶಪಡಿಸಿದೆ. ಹಲವಾರು ನಾಗರಿಕ ಕಾಲೋನಿಗಳಿಗೆ (ಯಾವುದೇ ಮಿಲಿಟರಿ ಸ್ಥಾವರದ ಬಳಿ ಇರದಿದ್ದರೂ) ತೀವ್ರ ಹಾನಿಯಾಗಿದೆ. ನೂರಾರು ನಾಗರಿಕರು ಸತ್ತಿದ್ದು, ಸಾವಿರಾರು ನಾಗರಿಕರು ಗಾಯಗೊಂಡಿದ್ದಾರೆ. ಬಾಗ್ದಾದ್ ಮತ್ತು ಬಸ್ರಾಗಳ ಹಲವು ಭಾಗಗಳಲ್ಲಿ ನೀರು-ವಿದ್ಯುತ್ ಪೂರೈಕೆ ವ್ಯವಸ್ಥೆ ಮುರಿದುಬಿದ್ದಿದೆ.

◆ ಬಸ್ರಾ, ನಜಾಫ್, ನಸ್ರಿಯಾ, ಕಬರಲಾ, ಉಮ್‌ಖಸ್ರ್ ಬಳಿ ಇರಾಕಿ ಪಡೆಗಳಿಗೂ ಅಮೆರಿಕನ್-ಬ್ರಿಟಿಷ್ ಪಡೆಗಳಿಗೂ ತೀವ್ರ ಕಾಳಗ ನಡೆದಿದೆ. ಬ್ರಿಟಿಷ್ ಕಮಾಂಡರ್ ಒಬ್ಬ ಹೇಳಿದಂತೆ ಪ್ರತಿ ಒಂದು, ಮೈಲು ಮಂದುವರಿಕೆಯಲ್ಲಿ ತೀವ್ರ ಇರಾಕಿ ಪ್ರತಿರೋಧ ಕಂಡುಬಂದಿದೆ.

◆ ಉಮ್‌ಖಸ್ರ್ ಬಂದರು ಪಟ್ಟಣ ಇರಾಕಿ ಪ್ರತಿರೋಧವಿಲ್ಲದೆ ತೆರವಾಗಿದೆ ಎಂದು ಬ್ರಿಟಿಷ್-ಅಮೆರಿಕನ್ ಪಡೆಗಳು ಹೇಳಿಕೊಂಡಿವೆ. ಆದರೂ ಈ ಬಂದರು ಪಟ್ಟಣದ ಮೂಲಕ ಹಾದುಬರುವ (ಮತ್ತು ಮುಂದಿನ ಯುದ್ಧದಲ್ಲಿ ನಿರ್ಣಾಯಕವಾಗಲಿರುವ) ಆಹಾರ-ನೀರು-ಶಸ್ತ್ರಾಸ್ತ್ರ ಪೂರೈಕೆ ಹಾದಿ ಸುಗಮವಾಗಿದೆ ಎಂದು ಇನ್ನೂ ಹೇಳುವಂತಿಲ್ಲ.

◆ ಬಸ್ರಾದಲ್ಲಿ ಶಿಯಾ ಮುಸ್ಲಿಮರು ಮತ್ತು ನಾಗರಿಕರು ದಂಗೆ ಎದ್ದಿದ್ದಾರೆ. ಬ್ರಿಟಿಷ್ ಪಡೆಗಳನ್ನು ಸ್ವಾಗತಿಸಿದ್ದಾರೆ ಎಂದು ಬ್ರಿಟಿಷ್ ಸುದ್ದಿ ಸುಳ್ಳು ಎಂದು ಆಮೇಲೆ ಗೊತ್ತಾಗಿದೆ. ಬಸ್ರಾವನ್ನು



ಅಮೆರಿಕನ್-ಬ್ರಿಟಿಷ್ ಪಡೆಗಳು ಸುತ್ತುವರೆದಿದ್ದರೂ ಅವರ ಮೇಲೆ ಗೆರಿಲ್ಲಾ ದಾಳಿ ಮುಂದುವರೆದಿದೆ.

◆ ಎರಡು ಅಮೆರಿಕನ್ ವಿಮಾನಗಳನ್ನು (ಎಫ್-18 ಯುದ್ಧ ವಿಮಾನ ಮತ್ತು ಬ್ಲಾಕ್ ಹಾಕ್ ಹೆಲಿಕಾಪ್ಟರ್) ಇರಾಕ್ ಉರುಳಿಸಿದೆ ಎಂದು ಅಮೆರಿಕನ್ ಸಹ ಒಪ್ಪಿಕೊಂಡಿದೆ. ಇರಾಕ್ ರಿಪಬ್ಲಿಕನ್ ಗಾರ್ಡ್‌ನ ಶೇಕಡಾ 50 ರಷ್ಟು ತುಕಡಿಗಳು ನಾಶಗೊಂಡಿವೆ ಎಂದು ಅಮೆರಿಕ ಹೇಳಿಕೊಂಡಿದೆ.

◆ ಹಲವು ಅಮೆರಿಕನ್ ಸೈನಿಕರು ಯುದ್ಧ ಕೈದಿಗಳಾಗಿ ಇರಾಕಿ ವಶವಾಗಿದ್ದು, ಅವರಲ್ಲಿ ಒಬ್ಬ ಮಹಿಳಾ ಸೈನಿಕಳನ್ನು ಅಮೆರಿಕನ್ ಪಡೆ ಮರುವಶ ಪಡೆದುಕೊಂಡಿದೆ. ಆಕೆಯನ್ನು ಟಿವಿಯಲ್ಲಿ ಪ್ರದರ್ಶಿಸುವ ಮೂಲಕ ಖಚಿತಪಡಿಸಿದೆ.

◆ ಎರಡೂ ಕಡೆಯ ರಣನೀತಿ-ತಂತ್ರಗಳು ಈಗ ಸ್ಪಷ್ಟವಾಗುತ್ತಿವೆ. ಇರಾಕ್ ಭಾರಿ ಸೈನ್ಯ ಜಮಾವಣೆ ಮಾಡದೆ - ಮುಕ್ತ ಪ್ರದೇಶ-ಮರುಭೂಮಿಯಲ್ಲಿ ಅಮೆರಿಕ ಸೈನ್ಯಕ್ಕೆ ದೊಡ್ಡ ಪ್ರತಿರೋಧ ಒಡ್ಡಿ ಸಾಂಪ್ರದಾಯಿಕ ಯುದ್ಧದಲ್ಲಿ ತೊಡಗದಿರುವ ತಂತ್ರ ಅಂಗೀಕರಿಸಿದೆ. ತನ್ನ ಸೈನ್ಯ ಹಾಗೂ ರಿಪಬ್ಲಿಕನ್ ಗಾರ್ಡ್‌ಗಳನ್ನು ಸಣ್ಣ ಸಣ್ಣ ತುಕಡಿಗಳಾಗಿ ಒಡೆದು ಗೆರಿಲ್ಲಾ ತಂತ್ರ ಬಳಸಿದೆ. ಅದರಲ್ಲೂ ಈ ತುಕಡಿಗಳನ್ನು ಮುಖ್ಯ ನಗರಗಳಾದ ಬಾಗ್ದಾದ್, ಬಸ್ರಾಗಳಂತಹ ಪ್ರಮುಖ ನಗರಗಳ ರಕ್ಷಣೆಗೆ ಸಜ್ಜಾಗಿಸಿದೆ. ಇದರಿಂದಾಗಿ ಅಮೆರಿಕದ ಪಡೆಗಳು ರಭಸವಾಗಿ ಮುನ್ನುಗ್ಗುವಂತೆ ಭಾಸವಾಗಿದೆ.

◆ ಭಾರಿ ಬಾಂಬ್ ದಾಳಿ ಮೂಲಕ 'ಶಾಕ್ ಮತ್ತು ದಿಗ್ಭ್ರಮೆ' ಹುಟ್ಟಿಸಿ ಮಾನಸಿಕ ಒತ್ತಡ ಹೇರಿ ಸೈನ್ಯದ ಶರಣಾಗತಿ, ಸರ್ಕಾರದ ಪತನ ಮತ್ತು ನಾಗರಿಕರ ಹೂಹಾರದ ಸ್ವಾಗತ ಸಿಗುವುದು, ಯುದ್ಧ ಕೆಲವೇ ದಿನಗಳಲ್ಲಿ ಮುಗಿದುಹೋಗುವುದು ಎಂಬ ಅಮೆರಿಕನ್ ರಣನೀತಿ ವಿಫಲವಾಗಿದೆ ಎಂದೂ ಸ್ಪಷ್ಟವಾಗಿದೆ. ಅಮೆರಿಕದ ಹಲವು ಮಾಜಿ ಜನರಲ್‌ಗಳು ಈ ರಣನೀತಿ ಬಾಲಿಶ, ಅಮೆರಿಕ ಯುದ್ಧ ಮಧ್ಯದಲ್ಲಿ ರಣನೀತಿಯನ್ನು ಪೂರ್ತಿ ಬದಲಾಯಿಸಬೇಕಾದ ವಿಚಿತ್ರ ಪರಿಸ್ಥಿತಿ ಬಂದಿದೆ ಎಂದು ಟೀಕಿಸಿದ್ದಾರೆ.

◆ ಅಮೆರಿಕನ್ ಸೈನಿಕ ಚೆಕ್‌ಪೋಸ್ಟ್ ಒಂದರಲ್ಲಿ 'ಆತ್ಮಹತ್ಯೆ ಬಾಂಬರ್' ಒಬ್ಬ ದಾಳಿ ಮಾಡಿ 5 ಜನ ಸೈನಿಕರನ್ನು ಬಲಿತೆಗೆದುಕೊಂಡಿದ್ದು, ಯುದ್ಧಕ್ಕೆ ಹೊಸ ತಿರುವು ನೀಡಿದೆ. ಇದರಿಂದ ಭಯಭೀತರಾಗಿರುವ ಅಮೆರಿಕನ್ ಸೈನಿಕರು ಎಲ್ಲರನ್ನೂ 'ಆತ್ಮಹತ್ಯಾ ಬಾಂಬರು'ಗಳು ಎಂದು ಪರಿಗಣಿಸುತ್ತಿದ್ದು ಹಲವಾರು ಅಮಾಯಕ ನಾಗರಿಕರನ್ನು ಕಗ್ಗೊಲೆಗೀಡು ಮಾಡಿದ್ದಾರೆ.

◆ ಇರಾಕ್ ಹಲವು ಇಂತಹ 'ಆತ್ಮಹತ್ಯಾ ಬಾಂಬರುಗಳ' ದಳ ಫೆದಾಯಿನ್‌ಗಳನ್ನು ಸಜ್ಜು ಮಾಡಲಾಗಿದೆ ಎಂದು ಇರಾಕಿ ವಕ್ತಾರರ ಹೇಳಿಕೆ ಅಮೆರಿಕದ ಮಿಲಿಟರಿ ನಾಯಕತ್ವದಲ್ಲೂ ಸೈನಿಕರಲ್ಲೂ ನಡುಕ ತಂದಿದೆ. ನಾಲ್ಕು ಸಾವಿರದಷ್ಟು ಈ ರೀತಿಯ 'ಆತ್ಮಹತ್ಯಾ ಬಾಂಬರು' ಯುವಕರು ಬಾಗ್ದಾದ್‌ನಲ್ಲಿ ಸೇರಿದ್ದಾರೆ ಎಂದೂ ವರದಿಯಾಗಿದೆ.

ಮಾಧ್ಯಮ - ಯುದ್ಧ

■ ರಣರಂಗದಲ್ಲಿ ಮಾತ್ರವಲ್ಲ ಸುದ್ದಿ ಮಾಧ್ಯಮಗಳಲ್ಲೂ ಇರಾಕ್ - ಅಮೆರಿಕಾ - ಬ್ರಿಟನ್‌ಗಳು ಯುದ್ಧ ತೀವ್ರವಾಗಿ ಮುನ್ನಡೆಸಿವೆ.

■ ಅಮೆರಿಕ-ಬ್ರಿಟನ್ ಪಡೆಗಳ ಭಾಗವಾಗಿ ಸುದ್ದಿ-ಮಾಧ್ಯಮಗಳ ಪತ್ರಕರ್ತರು ಯುದ್ಧ-ವರದಿಗಳನ್ನು ಕಳಿಸುತ್ತಿದ್ದಾರೆ. ಸ್ವಾಭಾವಿಕವಾಗಿಯೇ ಈ ಪತ್ರಕರ್ತರು ಅಮೆರಿಕ-ಬ್ರಿಟನ್ ಗಳ ಸರ್ಕಾರಗಳಿಗೆ, ಸೈನ್ಯಕ್ಕೆ 'ಪ್ರಿಯವಾಗುವ' ಸತ್ಯ ಮಾತ್ರ ಹೇಳುತ್ತಿದ್ದಾರೆ. ಅವರಿಗೆ ಪ್ರಿಯವಾಗುವ ಹಲವು ಸುಳ್ಳುಗಳನ್ನು ಹೇಳುತ್ತಿದ್ದಾರೆ. ಈ ರೀತಿ ಮಾಡದವರಿಗೆ ಪಡೆಗಳ 'ರಕ್ಷಣೆ' ಇರುವುದಿಲ್ಲವಂತೆ.

ಯುದ್ಧ ವಿರೋಧಿ ಚಳುವಳಿ

● ಅಮೆರಿಕ-ಬ್ರಿಟನ್‌ಗಳಲ್ಲಿ ಯುದ್ಧ ವಿರೋಧಿ ಚಳುವಳಿಗಳು, ರ್‍ಯಾಲಿಗಳು ಮುಂದುವರೆದಿವೆ. ವಿಶ್ವವಿದ್ಯಾಲಯ ಕ್ಯಾಂಪಸ್ಸುಗಳಲ್ಲಿ ವೇಗವಾಗಿ ಚಳುವಳಿ ಹರಡಿದೆ. ಕೆಲವು ಕಡೆ ಯುದ್ಧ ಪ್ರಯತ್ನಗಳನ್ನು ನೇರವಾಗಿ ತಡೆಯುವ ಕಾರ್ಯಾಚರಣೆ ಆರಂಭವಾಗಿದೆ. ಸೇನಾ ನೆಲೆಗಳಲ್ಲಿ, ಶಸ್ತ್ರಾಸ್ತ್ರ ಕಂಪನಿಗಳು, ಅವುಗಳಿಗೆ ಹಣಕಾಸು ಒದಗಿಸುವ ಸಂಸ್ಥೆಗಳಲ್ಲಿ- ಪಿಕೆಟಿಂಗ್, ಬಹಿಷ್ಕಾರ ಮುಂತಾದ ನೇರ ಕಾರ್ಯಾಚರಣೆ ಆರಂಭವಾಗಿದೆ. ಬ್ರಿಟನ್‌ನ ತುಂಬಾ ಸೇನಾ ನೆಲೆಗಳ ಮುಂದೆ ಪಿಕೆಟಿಂಗ್ ಭರದಿಂದ ಸಾಗಿದೆ - ವ್ಯಾಪಕವಾಗಿ.


● ಇತರೆಡೆ ಸಹ ಪ್ರತಿಭಟನಾ ರ್‍ಯಾಲಿ, ಚಳುವಳಿ ಮುಂದುವರೆದಿದೆ. ಮುಖ್ಯವಾಗಿ ಅರಬ್ ದೇಶಗಳಲ್ಲಿ, ಏಶ್ಯಾ, ಆಫ್ರಿಕಾಗಳಲ್ಲಿ ಚಳುವಳಿ ವ್ಯಾಪಕವಾಗುತ್ತಿದೆ. ದಕ್ಷಿಣ ಅಮೆರಿಕಾ, ಯುರೋಪ್‌ಗಳಲ್ಲಿ ಅದೇ ಪ್ರಖರತೆಯಲ್ಲಿ ಮುಂದುವರೆದಿದೆ. ಬ್ರಿಟಿಷ್-ಅಮೆರಿಕಾದ ಸರಕುಗಳ ಬಹಿಷ್ಕಾರ (ಪೆಪ್ಸಿ - ಕೊಕಾಕೋಲಾ, ಮ್ಯಾಕ್‌ಡೊವಲ್ಡ್ಸ್) ಧ್ವಜಗಳ ಸುಡುವಿಕೆ, ರಾಯಭಾರ ಕಛೇರಿಗಳಿಗೆ ಮುತ್ತಿಗೆ -ಚಳುವಳಿ ಅನುಸರಿಸಿರುವ ಮುಖ್ಯ ರೂಪಗಳು.

● ಅರಬ್ ದೇಶಗಳಲ್ಲಿ ಚಳುವಳಿ ತೀವ್ರ ರೂಪ ತಾಳಿದೆ. ಸಿರಿಯಾ ಮತ್ತು ಯೆಮನ್‌ಗಳಲ್ಲಿ ಭಾರಿ ರ್‍ಯಾಲಿಗಳು ಜರುಗಿವೆ. ಸಿರಿಯಾದಲ್ಲಿ ಕೆಲವು ಗಂಟೆಗಳ ಸಾರ್ವತ್ರಿಕ ಮುಷ್ಕರ ಸಹ ನಡೆಯಿತು.

● ಬಾಂಗ್ಲಾದೇಶದಲ್ಲಿ 32ನೇ ಸ್ವಾತಂತ್ರ್ಯದಿನದ ಆಚರಣೆ ಯುದ್ಧ-ವಿರೋಧಿ ಉತ್ಸವವಾಗಿ ಪರಿವರ್ತಿತವಾಯಿತು. ಢಾಕಾದಲ್ಲಿ ಭಾರಿ ರ್‍ಯಾಲಿ ಅಲ್ಲದೆ, ನೂರಾರು ಕಡೆ ಪ್ರದರ್ಶನಗಳು ನಡೆದವು. ಬುಶ್-ಬ್ಲೇರ್‌ರ ಪ್ರತಿಕೃತಿಗಳು ಎಲ್ಲಾ ಕಂಬಗಳಿಂದ ನೇತು ಹಾಕಲಾಗಿತ್ತು. ನೂರಾರು ಕಡೆ ಬುಶ್-ಬ್ಲೇರ್ ಪ್ರತಿಕೃತಿಗಳು ಚಪ್ಪಲಿ ಏಟು ತಿಂದವು. ಸುಡಲ್ಪಟ್ಟವು. ಹೆಚ್ಚುಕಡಿಮೆ ಎಲ್ಲಾ ರಾಜಕೀಯ ಪಕ್ಷಗಳು ಈ ಚಳುವಳಿಯಲ್ಲಿ ಭಾಗವಹಿಸಿದವು. ಅಧ್ಯಕ್ಷ ಸ್ವಾತಂತ್ರ್ಯ ದಿನದಂದು ಸಾಂಪ್ರದಾಯಿಕವಾಗಿ ಕೊಡುವ ಔತಣವನ್ನು ರದ್ದು ಮಾಡಬೇಕಾಗಿ ಬರುವಷ್ಟು ಚಳುವಳಿ ತೀವ್ರವಾಗಿತ್ತು. ಅಫಘಾನಿಸ್ತಾನ ಯುದ್ಧದ ಸಮಯದಲ್ಲಿ ಅಮೆರಿಕ ಜತೆ ಮಿಲಿಟರಿ - ಸಹಕಾರಕ್ಕೆ ಸರ್ಕಾರ ಮಾಡಿದ ಒಪ್ಪಂದವನ್ನು ಹಿಂತೆಗೆಯಬೇಕು ಎಂದು ಎಲ್ಲೆಡೆ ಚಳುವಳಿಗಾರರು ಒತ್ತಾಯಿಸಿದರು. ಇರಾಕ್ ಮೇಲೆ ಯುದ್ಧದಲ್ಲಿ ಬಾಂಗ್ಲಾದೇಶ ಸಹಕರಿಸುವುದಿಲ್ಲ ಎಂದು ಸರ್ಕಾರ ಈಗಾಗಲೇ ಪ್ರಕಟಿಸಿದೆ.

● ಅರ್ಜೆಂಟಿನಾದಲ್ಲಿ ಫಾಕ್‌ಲ್ಯಾಂಡ್ ದ್ವೀಪದ ಮೇಲೆ ಬ್ರಿಟನ್ 80 ರ ದಶಕದಲ್ಲಿ ನಡೆಸಿದ ಯುದ್ಧದ ವಾರ್ಷಿಕ ಅದೇ ರೀತಿ ಭಾರಿ ಯುದ್ಧ-ವಿರೋಧಿ ಪ್ರದರ್ಶನವಾಗಿ ಮಾರ್ಪಟ್ಟಿತು. ಇಂಡೋನೇಶ್ಯಾದಲ್ಲಿ ಕ್ರಿಶ್ಚಿಯನ್-ಮುಸ್ಲಿಂ ಸಂಘಟನೆಗಳು ಜತೆಗೆ ಭಾಗವಹಿಸಿದ ಯುದ್ಧ-ವಿರೋಧಿ ಪ್ರದರ್ಶನಗಳು ಮೊದಲ ಭಾರಿ ನಡೆದವು. ಅಮೆರಿಕನ್ ರಾಯಭಾರ ಕಛೇರಿಗೆ 'ಟೊಮೊಟೋ ಧಾಳಿ' ಸತತವಾಗಿ ಹಲವು ದಿನಗಳಿಂದ ನಡೆದಿದೆ!

● ಚೀನಾದ ಬೀಜಿಂಗ್‌ನಲ್ಲೂ, ಕಲ್ಕತ್ತಾ ಸೇರಿದಂತೆ ಹಲವು ಭಾರತದ ಕಡೆ ಭಾರಿ ಯುದ್ಧ-ವಿರೋಧಿ ಪ್ರದರ್ಶನಗಳು ನಡೆದವು.



ಅಸಹಕಾರ ಚಳುವಳಿಯಲ್ಲಿ ಅಮೆರಿಕನ್ ನಾಗರಿಕರು

ಅಮೆರಿಕ-ಬ್ರಿಟನ್‌ಗಳ ಾಧ್ಯಮಗಳು ಈ ರೀತಿ ಡಿದ(ಆಳುವವರಿಗೆ ಪ್ರಿಯವಾದ) ಸುಳ್ಳು ಎಂದು ಗೊತ್ತಾಗಿ ವರ ನಂಬಲರ್ಹತೆ ತೀವ್ರವಾಗಿ ಮೆಯಾಗಿದೆ. ಅಂತಹ ಸುಳ್ಳುಗಳ ಲವು ಸ್ಯಾಂಪಲ್ಲುಗಳು (ಇವು ಮೆರಿಕ-ಬ್ರಿಟನ್ ಮಾಧ್ಯಮಗಳು ಧಿಕೃತವಾಗಿ ನಿಜವಲ್ಲ ಎಂದು ಪ್ಪಿಕೊಂಡವು)

ಎರಡನೇ ದಿನವೇ ಉಮ್‌ಖಸ್ರ್ ಂದರು ಪಡೆಗಳ ವಶಕ್ಕೆ ಬಂದಿದೆ.

ಮೊದಲ ದಿನವೇ ಇರಾಕಿ 5 ನೇ ಡಿವಿಜನ್ ರಣಾಗತ ಆಯಿತು.

ಮೊದಲ ದಿನವೇ ಅಧ್ಯಕ್ಷ ಸದ್ದಾಂ ಹುಸೇನ್ ರಿದಂತೆ ಆವನ ಕುಟುಂಬ ಬಾಂಬ್ ದಾಳಿಯಲ್ಲಿ ರ್ನಾಮವಾಗಿದೆ.

ಸದ್ದಾಂನ ಹಲವು ಜನರಲ್‌ಗಳು ರಣಾಗತರಾಗಿದ್ದಾರೆ.

ಬಸ್ರಾದಲ್ಲಿ ಶಿಯಾ ಮುಸ್ಲಿಮರು ದಂಗೆ ದ್ದಿದ್ದಾರೆ. ಬ್ರಿಟಿಷ್ ಪಡೆಗಳನ್ನು ಸ್ವಾಗತಿಸಿದ್ದಾರೆ.

ಇಬ್ಬರು ಬ್ರಿಟಿಷ್ ಸೈನಿಕರನ್ನು ಇರಾಕಿ ಪಡೆಗಳು ಂಧಿಸಿ ಚಿತ್ರಹಿಂಸೆ ಕೊಟ್ಟು ಕೊಂದರು. ಅವರು ುದ್ಧದಲ್ಲಿ ವಿಮಾನ ಉರುಳಿ ಸತ್ತರು ಎಂದು ಜುವಾತಾಯಿತು.

ಇಬ್ಬರು ಅಮೆರಿಕನ್ ಸುದ್ದಿ-ಮಾಧ್ಯಮಗಳ ತ್ರಕರ್ತರನ್ನು ವಜಾ ಮಾಡಲಾಗಿದೆ. (ಪ್ರತಿಷ್ಠಿತ ಲಿಟ್‌ಝರ್ ಪ್ರಶಸ್ತಿ ವಿಜೇತ) ಪೀಟರ್ ರ್ನೆಟ್ ಆತ ಇರಾಕಿ ಟಿ.ವಿ.ಗೆ ಕೊಟ್ಟ ಂದರ್ಶನವೊಂದರಲ್ಲಿ ಅಮೆರಿಕದ ರಣನೀತಿ ಸ ಮಾಡುತ್ತಿಲ್ಲ ಬದಲಿಸುವ ಅಗತ್ಯವಿದೆ ಂದು ಅಭಿಪ್ರಾಯ ಕೊಟ್ಟಿದ್ದು - ಆತ ಕೆಲಸ ಾಡುವ ಎನ್‌ಬಿಸಿ ಟಿವಿಯ ಮ್ಯಾನೇಜ್‌ಮೆಂಟ್ ುತ್ತು ಅಮೆರಿಕನ್ ಸರ್ಕಾರದ ಕಣ್ಣು ಂಪಗಾಗುವಂತೆ ಮಾಡಿದೆ. ಎನ್‌ಬಿಸಿ ಟಿವಿ ತನನ್ನು ತಕ್ಷಣ ವಜಾ ಮಾಡಿದೆ. ಅರ್ನೆಟ್ ಯಟ್ನಾಂ, ಕೊಸೊವೊ, ಅಫಘಾನಿಸ್ತಾನದ ುದ್ಧ ವರದಿ ಮಾಡಿದ ಹಿರಿಯ ಪತ್ರಕರ್ತ.



ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಯುದ್ಧ ವಿರೋಧಿಸಿ ಪ್ರತಿಭಟನೆ ನಡೆಸಿದ ಶ್ರೇಷ್ಠ ನಾಯಕ ಪ್ರಶಸ್ತಿ ಪಡೆದ ಅಡ್ರಿಯನ್ ಬ್ರಾಡಿ ಮತ್ತು ಆತನ ಪತ್ನಿ

ಆದರೆ ಆತನನ್ನು ಬ್ರಿಟನ್‌ನ 'ಡೈಲಿ ಮಿರರ್' ದೈನಿಕ ಕೂಡಲೇ ತನ್ನ ವರದಿಗಾರನಾಗಿ ನೇಮಿಸಿದೆ. 'ಫಾಕ್ಸ್' ಟಿವಿಯ ವರದಿಗಾರ ರಿವೇರಾ ಅಮೆರಿಕನ್ ಪಡೆಗಳ ಗೌಪ್ಯವಾಗಿರಬೇಕಾದ ಚಲನವಲನಗಳ ಬಗ್ಗೆ ವರದಿ ಮಾಡಿದ ಎಂಬ ಅಪಾದನೆ ಹಾಕಲಾಗಿದೆ.'

■ ಅಮೆರಿಕದ ಮತ್ತು ಬ್ರಿಟನ್‌ನ ಆಳುವವರು ಮಾಧ್ಯಮ ಯುದ್ಧಕ್ಕೆ ಬಹಳ ಮಹತ್ವ ನೀಡಿದ್ದರು. ಅಮೆರಿಕ-ಬ್ರಿಟನ್‌ನ ನಾಗರಿಕರು ಯುದ್ಧಕ್ಕೆ ಬೆಂಬಲ ನೀಡುವ ರೀತಿಯಲ್ಲಿ, ಯುದ್ಧವನ್ನು ತೋರಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಇರಾಕಿ-ನಾಗರೀಕರು, ಅಮೆರಿಕ-ಬ್ರಿಟನ್ ಸೈನಿಕರ ಕಷ್ಟ-ನಷ್ಟಗಳನ್ನು ಆದಷ್ಟು ಕಡಿಮೆ ತೋರಿಸಿ, ಇರಾಕಿ ಸೈನ್ಯದ, ಸರ್ಕಾರದ ಪತನಕ್ಕೆ ಅನುವಾಗುವ ಮಾನಸಿಕ ಯುದ್ಧ - ಅವರ ತಂತ್ರವಾಗಿತ್ತು. ಆದರೆ ಈ ಯುದ್ಧದಲ್ಲೂ ಅವರಿಗೆ ಅನಿರೀಕ್ಷಿತ ತೊಡಕುಗಳಾಗಿವೆ. ಇರಾಕಿ ಟಿವಿಯನ್ನು ಎಷ್ಟು ಪ್ರಯತ್ನಿಸಿದರೂ ಅವರಿಗೆ ಪೂರ್ತಿ ಹತ್ತಿಕ್ಕಲು ಸಾಧ್ಯವಾಗಿಲ್ಲ. ಇರಾಕಿ ಟಿವಿ ಇರಾಕಿ ನಾಗರಿಕರ ಸಂಕಟ, ಬಂಧಿತ ಬ್ರಿಟಿಷ್-ಅಮೆರಿಕನ್ ಸೈನಿಕರನ್ನು ತೋರಿಸಿ ಅವರ ಯೋಜನೆಗಳನ್ನು ತಲೆಕೆಳಗು ಮಾಡಿದೆ. ಇರಾಕ್ ಸಹ ಸುದ್ದಿ ಮಾಧ್ಯಮಗಳನ್ನು ಬಳಸಿ ಮಾನಸಿಕ ಯುದ್ಧದಲ್ಲಿ ತೊಡಗಿದೆ.

■ ಸಾಲದೆಂಬಂತೆ ಅಲ್-ಜಜೀರಾ ಎಂಬ ಅರಬ್ ಟಿವಿ ಯುದ್ಧದ ಬಗ್ಗೆ ಮಾಡಿದ ವರದಿಗಳು ವಿಶ್ವಾಸಾರ್ಹತೆ ಗಳಿಸಿದೆ. ಅರಬ್ ದೇಶಗಳಲ್ಲಿ ಹೆಚ್ಚು ಕಡಿಮೆ 4 ಕೋಟಿ ದರ್ಶಕರನ್ನು ಹೊಂದಿರುವ ಈ ಟಿವಿಗೆ ಭಾರಿ ಬೇಡಿಕೆ ಇತ್ತು. ಅದರ ವರದಿಗಳು ಅಮೆರಿಕ-ಬ್ರಿಟನ್ ಮಾಧ್ಯಮಗಳ ಹಲವು ಸುಳ್ಳುಗಳನ್ನು ಬಯಲಿಗೆಳೆಯಿತು. ಅಲ್-ಜಜೀರಾದ ಸುದ್ದಿ, ಅರಬ್ ಸರ್ಕಾರಗಳನ್ನು ನಡುಗಿಸಿದೆ. ಬ್ರೆಹ್ರೈನ್ ಸರ್ಕಾರ ಅದರ ಪ್ರಸಾರ ನಿಷೇಧಿಸಿದೆ. ಅಲ್-ಜಜೀರಾ ಇಂಗ್ಲೀಷ ವೆಬ್‌ಸೈಟ್ ಮೇಲೆ ಇಸ್ರೇಲಿ-ಅಮೆರಿಕನ್ನರು ದಾಳಿ ಮಾಡಿ ಹಲವು ಕಡೆಗಳಿಂದ ಅದನ್ನು ನೋಡದ ಹಾಗೆ ಮಾಡಿದ್ದಾರೆ. ಇವೆಲ್ಲದರ ಜತೆಗೂ ಕಾರ್ಯನಿರ್ವಹಿಸುತ್ತಿದ್ದ ಅಲ್ ಜಜೀರಾಗೆ ಅನಿರೀಕ್ಷಿತ ದಿಕ್ಕಿನಿಂದ ತೊಡಕಾಗಿದೆ. ಇತ್ತೀಚೆಗೆ ಇರಾಕಿ ಸರ್ಕಾರ ಅದರ ಹಲವು ವರದಿಗಾರರನ್ನು ದೇಶ ಬಿಟ್ಟು ಹೋಗುವಂತೆ ಆದೇಶಿಸಿದೆ. ಇದಕ್ಕೆ ಕಾರಣಗಳು ಏನು ಎಂದು ತಿಳಿದುಬಂದಿಲ್ಲ. ಸತ್ಯ ಎಲ್ಲಾ ಪಕ್ಷಗಳಿಗೂ ದುಬಾರಿ.

■ ಅಮೆರಿಕ-ಬ್ರಿಟನ್ ಮತ್ತು ಇತರೆಡೆ ಮುಖ್ಯ ಸುದ್ದಿ ಮಾಧ್ಯಮಗಳಾದ ಸಿಎನ್‌ಎನ್, ಬಿಬಿಸಿ, ಎನ್‌ಬಿಸಿ ಇತ್ಯಾದಿಗಳ ವಿಶ್ವಾಸಾರ್ಹತೆ ತೀರಾ ಕಡಿಮೆಯಾಗಿದ್ದು, ಜನ ಇಂಟರ್ ನೆಟ್ ಗೆ ಮೊರೆ ಹೋಗುತ್ತಿದ್ದಾರೆ. ಇಂಟರ್‌ನೆಟ್‌ನಲ್ಲಿ ಇರಾಕ್ ಬಗ್ಗೆ ಸುದ್ದಿ ನೀಡುವ ಹಲವು ಹೊಸ ವೆಬ್‌ಸೈಟುಗಳು ಹುಟ್ಟಿಕೊಂಡಿವೆ. ಹಲವು ಸ್ವತಂತ್ರ ಪತ್ರಕರ್ತರು, ಇರಾಕಿ ನಾಗರಿಕರು, ರಶ್ಯನ್ ಮತ್ತಿತರ ಪರಿಣತರು - ಮುಂತಾದ ಬದಲಿ ಮಗ್ಗಲು ಕೊಡುವ ಮೂಲಗಳು ಸಿಗುತ್ತಿವೆ.

■ ಅಮೆರಿಕಾ - ಬ್ರಿಟನ್ ಮಾಧ್ಯಮಗಳು ನಡೆದುಕೊಳ್ಳುತ್ತಿರುವ ರೀತಿ, ಬಳಸುತ್ತಿರುವ ತಂತ್ರಗಾರಿಕೆ ಬಗ್ಗೆ ತೀವ್ರ ಟೀಕೆ-ವಿಮರ್ಶೆಗಳು ಬಂದಿವೆ.

ರಾಜಕೀಯ ಬೆಳವಣಿಗೆ

● ಯುದ್ಧ ಸೃಷ್ಟಿಸಿರುವ ಮಾನವೀಯ ಸಮಸ್ಯೆ ಬಗ್ಗೆ ಕೋಫಿ ಅನ್ನಾನ್ ಪದೇ ಪದೇ ಹೇಳುತ್ತಿದ್ದು ಇದಕ್ಕೆ ಅಮೆರಿಕ-ಬ್ರಿಟನ್ ಹೊಣೆ ಎಂದಿದ್ದಾರೆ. ಈ ಯುದ್ಧದಲ್ಲಿ ವಿಶ್ವಸಂಸ್ಥೆ ಮಧ್ಯಪ್ರವೇಶ ಮಾಡಬೇಕೆಂಬ ಒತ್ತಾಯ ಕೇಳಿಬಂದಿದ್ದು, ಆ ಬಗ್ಗೆ ಹಲವು ದೇಶಗಳ ನಡುವೆ ಚರ್ಚೆ ನಡೆದಿದೆ.

● ಬ್ರಿಟನ್ ಪ್ರಧಾನಿ ಬ್ಲೇರ್‌ರವರು ಕೊಫಿ ಅನ್ನಾನ್‌ರನ್ನು ಭೇಟಿ ಮಾಡಿ ಯುದ್ಧಾನಂತರದ ಇರಾಕ್ ಪುನರ್ರಚನೆಯಲ್ಲಿ ವಿಶ್ವಸಂಸ್ಥೆಯನ್ನು ಒಳಗೊಳ್ಳುವ ಬಗ್ಗೆ ಚರ್ಚಿಸಿದ್ದಾರೆ. ಇದು ವಿಶ್ವಸಂಸ್ಥೆಯಿಂದ ಈ ಆಕ್ರಮಣಕ್ಕೆ 'ಆಶೀರ್ವಾದ' ತೆಗೆದುಕೊಂಡು 'ಕಾನೂನು ಸಮ್ಮತ' ಮಾಡುವ ಪ್ರಯತ್ನ ಎಂದು ವ್ಯಾಪಕ ಟೀಕೆ ಕೇಳಿ ಬಂದಿದೆ.

● ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಕಾಲಿನ್ ಪೊವೆಲ್ ಯುರೋಪು ಪ್ರವಾಸದಲ್ಲಿದ್ದು ನಾಟೋ, ಯುರೋಪಿಯನ್ ಒಕ್ಕೂಟವನ್ನು ಯುದ್ಧಾನಂತರದ ಇರಾಕ್ ಪುನರ್ರಚನೆಯಲ್ಲಿ ಒಳಗೊಳ್ಳುವ ಮೂಲಕ 'ಪಾಶ್ಚಿಮಾತ್ಯ ಕೂಟ'ದಲ್ಲಿ ಒಡಕು ನಿವಾರಿಸಲು ಪ್ರಯತ್ನಿಸುತ್ತಿದ್ದಾರೆ. ಟರ್ಕಿ ಅಮೆರಿಕನ್ ಸೈನ್ಯ ಹಾದು ಹೋಗಲು ಬಿಡುವಂತೆ ಮನವೊಲಿಸಲು ಪ್ರಯತ್ನಿಸುತ್ತಿದ್ದಾರೆ.

● ಆದರೆ ಫ್ರಾನ್ಸ್, ಜರ್ಮನಿ, ರಶ್ಯಾಗಳು ಅಮೆರಿಕನ್ ಆಕ್ರಮಣವನ್ನು ಖಂಡಿಸುವುದರಲ್ಲಿ ದೃಢವಾಗಿವೆ. ಯುದ್ಧಾನಂತರದ ಇರಾಕ್ ಪುನರ್ರಚನೆಯಲ್ಲಿ ಭಾಗವಹಿಸುವ ಮೂಲಕ ಯಾವುದೇ ಅಪರೋಕ್ಷ 'ಒಪ್ಪಿಗೆ' ನೀಡುವ ಪ್ರಶ್ನೆ ಇಲ್ಲ. ಇರಾಕ್ ಮೇಲೆ ಅಮೆರಿಕ ನೇರ ನಿಯಂತ್ರಣ ಅಥವಾ ಅದರ ಕೈಗೊಂಬೆ ಸರ್ಕಾರಕ್ಕೆ ಮಾನ್ಯತೆ ಕೊಡುವುದಿಲ್ಲ ಎಂದು ದೃಢ ನಿಲುವು ತಳೆದಿವೆ.

. ವಿಶ್ವಸಂಸ್ಥೆ ಯುದ್ಧಾನಂತರದ ಇರಾಕ್ ಸರ್ಕಾರದ ಸ್ವರೂಪ ನಿರ್ಧರಿಸಲು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ವಿಶ್ವಸಂಸ್ಥೆ ಅಪ್ರಸ್ತುತವಾಗಿದೆ ಎಂಬ ಟೀಕೆ ನಿರಾಕರಿಸುವ ಹಲವರು ಹೇಳಿದ್ದಾರೆ.

VRL ತಾಳಕ್ಕೆ ಕುಣಿಯುತ್ತಿರುವ ಪೋಲೀಸರು...

ುಟ 3 ರಿಂದ

ಗಿರುವ ಒಪ್ಪಂದಗಳ ಬಗ್ಗೆ ಮಾತನಾಡಿದರೆ ಮ್ಮ ಒಪ್ಪಂದಗಳು ನಮಗೆ ಸಂಬಂಧಿಸಿದ್ದಲ್ಲ, ಾವು ಹೇಳಿದ ಹಾಗೆ ಕೇಳಬೇಕು, ಇಲ್ಲವಾದರೆ ಾತಿ ವಿಟಿನ ರುಚಿ ತೋರಿಸಬೇಕಾಗುತ್ತದೆ' ಎಂದು ಾಲೀಕರಿಗೆ ಬೆಂಗಾವಲಾಗಿ ನಿಂತಿದ್ದಾರೆ.

ವಿಆರ್‌ಎಲ್ ಸಂಸ್ಥೆಯ ಈ ಕಾರ್ಮಿಕ ರೋಧಿ ನೀತಿಯನ್ನು ಖಂಡಿಸಿ ಸಂಸ್ಥೆಯ ಾಹನಗಳ ತಡೆಯನ್ನು ಶಾಂತಯುತವಾಗಿ ಾಡಲು ನಿರ್ಧರಿಸಿ ಮಾರ್ಚ್ 5 ರಂದು ಕೊಪ್ಪಳ ುತ್ತು ರಾಯಚೂರು ಜಿಲ್ಲೆಗಳಲ್ಲಿ ಹೋರಾಟ ಡೆಸುತ್ತಿದ್ದ ಸಂದರ್ಭದಲ್ಲಿ ಗಂಗಾವತಿಯ ಆರ್‌ಎಲ್ ಏಜೆಂಟ್ ಚಿನ್ನಪ್ಪ ಹಾಗೂ ಇನ್ನಿತರೇ ಾಲೀಕರ ಉದ್ರೇಕಕಾರಿ ಮಾತಿನಿಂದ ಾರ್ಮಿಕರಲ್ಲಿ ಗೊಂದಲವುಂಟಾಯಿತು. ಈ ಂದರ್ಭವನ್ನು ಉಪಯೋಗಿಸಿಕೊಂಡ ಗಂಗಾವತಿ ಾಲೀಕರು ಅವರ ಮುಖಂಡನೆಂದು ರೆದುಕೊಳ್ಳುವ ಅಶೋಕಸ್ವಾಮಿ ಮಾಲೀಕರನ್ನು ಛೂಬಿಟ್ಟು ಹೆದರಿಸಿ ಚಿನ್ನಪ್ಪನನ್ನು ಹಮಾಲರು ಹೊಡೆದಿದ್ದಾರೆ ಎಂದು ಹೇಳಿ, ವಾಲ್ಮೀಕಿ ನಜರೇ ಯವನೆಂದು ಅದಕ್ಕೆ ಜಾತಿಯ ಬಣ್ಣ ಬಳಿದು ಜಾತಿ ವೈಷಮ್ಯ ಬೀಜ ಬಿತ್ತಿದ್ದಾನೆ. ಇದೇ ನೆಪ ಮಾಡಿ ಮಾಲೀಕರು ಹಠಾತ್ ಬಂದ್ ಮಾಡಿ ಪೋಲೀಸರಿಗೆ ತಮ್ಮ ಮೇಲೆ ಕಾರ್ಮಿಕರು ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ದೂರಿತ್ತಿದ್ದಾರೆ. ವಿಆರ್‌ಎಲ್ ಮಾಲೀಕರ ಜೊತೆ ಸೇರಿ ಇತರ ಕೆಲ ವ್ಯಾಪಾರಸ್ಥರು ಕಾರ್ಮಿಕರನ್ನು ಮಟ್ಟಹಾಕಲು ನಿರ್ಧರಿಸಿದ್ದಾರೆ. ಇವರ ಕ್ರಮವನ್ನು ಒಪ್ಪದ ಹಲವ ವ್ಯಾಪಾರಸ್ಥರನ್ನು ಬಲವಂತವಾಗಿ ಗಲಾಟೆ ಮಾಡಿ, ಕಲ್ಲು ತೂರಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿದ್ದಾರೆ.

ಹಮಾಲರ ಗಟ್ಟಿ ನಿರ್ಧಾರ: ಇವೆಲ್ಲದರ ನಡುವೆಯೂ ಹಮಾಲಿ ಕಾರ್ಮಿಕರು ಗಟ್ಟಿಮನಸ್ಸಿನಿಂದ ಕೂಡಿ ಏನೇ ಆದರೂ ಹೋರಾಟ ಮಾಡಿ ಇವರ ದೌರ್ಜನ್ಯದ ವಿರುದ್ಧ ಸೆಟೆದು ನಿಲ್ಲಲು ನಿರ್ಧರಿಸಿದ್ದಾರೆ. ಇವರ ಕುತಂತ್ರಗಳಿಗೆ ಬಲಿಯಾಗಬಾರದೆಂದು ನಿರ್ಧರಿಸಿದ ಹಮಾಲರೆಲ್ಲರೂ ಒಟ್ಟುಗೂಡಿ ಬೃಹತ್ ಹೋರಾಟವನ್ನು ಹಮ್ಮಿಕೊಂಡಿದ್ದಾರೆ.

ಕಾರ್ಮಿಕರ ಹಿತ ಬಯಸದ ಕಾಂಗ್ರೆಸ್ - ಬಿಜೆಪಿಗಳು

ವಿಆರ್‌ಎಲ್ ಮಾಲೀಕ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಎಂ.ಪಿ. ವಿಜಯಸಂಕೇಶ್ವರ ಇನ್ನೊಂದೆಡೆ ಕಾಂಗ್ರೆಸ್‌ನ ಮಂತ್ರಿ ಮಲ್ಲಿಕಾರ್ಜುನ ನಾಗಪ್ಪ ಎಂಬುವರು ತಮ್ಮ ಕಾರ್ಮಿಕ ವಿರೋಧಿ ನೀತಿಯನ್ನು ನೇರವಾಗಿ ತೋರಿಸಿದ್ದಾರೆ. ಕಾರ್ಮಿಕರಿಗೆ ಅದರಲ್ಲೂ ಅಸಂಘಟಿತರಿಗೆ ಸಮಗ್ರ ಮಸೂದೆ ಜಾರಿಗೆ ತರುತ್ತೇವೆ ಎಂದು ಹೇಳುವ ಕಾಂಗ್ರೆಸ್ ನ ಮಂತ್ರಿಯೇ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತಿರುವುದು ಮತ್ತು ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಪೋಲೀಸರನ್ನು ಕಾರ್ಮಿಕರ ಮೇಲೆ ಬಿಟ್ಟಿರುವುದು ಒಂದೆಡೆಯಾದರೆ ಒಂದು ಕೋಟಿ ಉದ್ಯೋಗ ನೀಡುವ ಭರವಸೆ ನೀಡಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಪಕ್ಷದ ಎಂ.ಪಿ. ಒಬ್ಬರು ನಡೆಸುವ ಸಂಸ್ಥೆಯಲ್ಲಿ ಕಾರ್ಮಿಕರಿಗೆ ಯಾವುದೇ ಭದ್ರತೆ ಇಲ್ಲ. ದೇಶದ ಭದ್ರತೆ, ಹಿಂದೂಗಳ ಉದ್ಧಾರದ ಮಾತುಗಳಿಗೆ ಬರವಿಲ್ಲ. ಮಾಲೀಕರು ಯಾರನ್ನು ಬೇಕಾದರೂ ತೆಗೆದುಕೊಳ್ಳಬಹುದು ಅಥವಾ ತೆಗೆದುಹಾಕಬಹುದು ಎನ್ನುವ ಮನೋಭಾವನೆಯಿಂದ ಕೊಪ್ಪಳ, ಗಂಗಾವತಿ ಮುಂತಾದೆಡೆಯಲ್ಲಿ ಯಾವುದೇ ನೋಟಿಸ್ ನೀಡದೆ ಹೊರಹಾಕಿದ್ದಾರೆ. ಇವರ ವರ್ತನೆಯನ್ನು ನೋಡಿದರೆ ಈ ಎರಡೂಪಕ್ಷಗಳ ಧೋರಣೆ ಒಂದೇ ಎಂದು ಸ್ಪಷ್ಟವಾಗುತ್ತದೆ.

ಮಾಲೀಕರು - ಪೋಲೀಸರ ಕುತಂತ್ರದ ವಿರುದ್ಧ ಬೃಹತ್ ರ್‍ಯಾಲಿ - ಬಂಧಿತರು ಜಾಮೀನಿನಲ್ಲ ಬಿಡುಗಡೆ

ನ್ಯಾಯಸಮ್ಮತ ಕೇಳಿಕೆಗಾಗಿ ಪ್ರತಿಭಟನೆ ನಡೆಸಿದ ಕಾರ್ಮಿಕರ ಹೋರಾಟವನ್ನು ದಮನಿಸಲು ಮಾಲೀಕರು ಮುಂದಾಗಿದ್ದಾರೆ. 15.3.2003 ರಂದು ನಾಲ್ಕು ಜನ ಹಮಾಲರ ಸಂಘದ ಪ್ರಮುಖರಮೇಲೆ ಸುಳ್ಳು ಕೇಸನ್ನು ಮಾಲೀಕರ ಪರವಾಗಿ ಚಿನ್ನಪ್ಪ ನೀಡಿದ್ದಾನೆ. ಅದರಲ್ಲಿ ಕೊಲೆಗೆ ಯತ್ನ, ದೊಂಬಿ, ಕ್ರಿಮಿನಲ್ ಕೃತ್ಯಕ್ಕೆ ಪ್ರಚೋದನೆ ಮುಂತಾದ ಹಸೀ ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಅದನ್ನೇ ಪೋಲೀಸರು ಅನುಸರಿಸಿ ನಾಲ್ಕು ಜನರನ್ನು ಜೈಲಿಗೆ ತಳ್ಳಿದರು. ಈಗ ಅವರಿಗೆ ಜಾಮೀನು ಸಿಕ್ಕಿದ್ದು ಬಿಡುಗಡೆಯಾಗಿದ್ದಾರೆ.

ಇಂತಹ ಕುತಂತ್ರ ಮತ್ತು ದೌರ್ಜನ್ಯಗಳನ್ನು ಪ್ರತಿಭಟಿಸಿ, 25.03.2003 ರಂದು ಗಂಗಾವತಿಯಲ್ಲಿ ಹಲಮಾರ ಸಂಘ, ಕೂಲಿಕಾರರ ಸಂಘ ಮುಂತಾದವರು ಸೇರಿ ಬೃಹತ್ ಪ್ರತಿಭಟನಾ ಸೌಹಾರ್ದ ಮೆರವಣಿಗೆ ನಡೆಸಿದರು. ಸುಮಾರು 3000 ಕ್ಕೂ ಹೆಚ್ಚಿದ್ದ ಕಾರ್ಮಿಕರು ಭಾಗವಹಿಸಿ ಮಾಲೀಕರು, ಪೋಲೀಸರ ಕುತಂತ್ರಗಳನ್ನು ಖಂಡಿಸಿದರು. ಹೋರಾಟ ಮುಂದುವರಿಸುವ ಪ್ರತಿಜ್ಞೆ ಕೈಗೊಂಡರು.


- ವರದಿ : ಎಂ.ಬಿ.ನಾಡಗೌಡ

ಅಯೋಧ್ಯೆ ವಿವಾದಿತ ಭೂಮಿ ಸುಪ್ರೀಂ ಕೋರ್ಟ್‌ನ ಮಹತ್ವ ತೀರ್ಪು

ಅಯೋಧ್ಯೆಯಲ್ಲಿನ ವಿವಾದಿತ ಭೂಮಿಯ ಸುತ್ತಲಿನ 67 ಎಕರೆ ಭೂಮಿಯಲ್ಲಿ ಧಾರ್ಮಿಕ ವಿಧಿಯನ್ನು ನಡೆಸಲು ಅವಕಾಶ ನೀಡಬೇಕೆಂಬ ಕೇಂದ್ರ ವಾಜಪೇಯಿ ಸರ್ಕಾರದ ಕೋರಿಕೆಯನ್ನು ಸುಪ್ರೀಂಕೋರ್ಟ್ ಪೀಠ ಸ್ಪಷ್ಟವಾಗಿ ತಿರಸ್ಕರಿಸಿದೆ. ಇದು ಸಂಘಪರಿವಾರದ ಕುತಂತ್ರಗಳಿಗೆ ಒಂದು ಹಂತದ ಸೋಲೂ ಕೂಡಾ.

ಅಯೋಧ್ಯೆಯಲ್ಲಿನ ವಿವಾದಿತ ಭೂಮಿಯ ಸುತ್ತಲಿನ 67 ಎಕರೆ ಭೂಮಿಯಲ್ಲಿ ಧಾರ್ಮಿಕ ವಿಧಿಯನ್ನು ನಡೆಸಲು ಅವಕಾಶ ನೀಡಬೇಕೆಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಲ್ಲಿಸಿದ ಮನವಿಯನ್ನು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಾಧೀಶರ ನ್ಯಾಯಪೀಠವು ತಳ್ಳಿಹಾಕಿದೆ. ಇದು ವಿಶ್ವ ಹಿಂದೂ ಪರಿಷತ್‌ನ ಕುತಂತ್ರಗಳಿಗೆ ದೊಡ್ಡ ತಡೆ ಮಾತ್ರವಲ್ಲದೆ, ಎನ್‌ಡಿಎ 'ಜೆಂಡಾ' (ಬಾವುಟ)ದ ಅಡಿಯಲ್ಲಿ ತನ್ನ 'ಅಜೆಂಡಾ' (ಕಾರ್ಯಸೂಚಿ)ವನ್ನು ತುರುಕಿಸುವ ಬಿಜೆಪಿಯ ಪ್ರಯತ್ನಕ್ಕೆ ತೀವ್ರ ಸೋಲುಂಟಾಗಿದೆ.

"ದೇಶದಲ್ಲಿ ಕೋಮುಸೌಹಾರ್ದತೆಯನ್ನು ಕಾಪಾಡುವುದಕ್ಕಾಗಿ ಹಾಗೂ 67 ಎಕರೆ ವಿವಾದರಹಿತ ಭೂಮಿಯನ್ನು ವಶಪಡಿಸಿಕೊಳ್ಳಲು 1993 ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದ ಕಾಯಿದೆಯ ಉದ್ದೇಶಕ್ಕೆ ಅನುಗುಣವಾಗಿ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದು ಅತ್ಯವಶ್ಯಕ" ಎಂದು ಸುಪ್ರೀಂಕೋರ್ಟ್‌ನ ನ್ಯಾಯಪೀಠ ಹೇಳಿದೆ. ನ್ಯಾಯಪೀಠವು ಮುಂದುವರಿದು '2002 ರ ಮಾರ್ಚ್ 13, 14 ರಂದು ಸುಪ್ರೀಂ ಕೋರ್ಟ್ ನೀಡಿದ ಆಜ್ಞೆಯು ಇಂದಿಗೂ ಪ್ರಸ್ತುತವಾಗಿದ್ದು, ವಿವಾದಿತ ಭೂಮಿ (2.77ಎಕರೆ) ಯಾರಿಗೆ ಸೇರಿದ್ದು ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡುವವರೆಗೂ ಯಥಾ ಸ್ಥಿತಿ ಮುಂದುವರಿಯಬೇಕು. ನ್ಯಾಯಾಲಯದ ಮುಂದಿರುವ ವಿವಾದಗಳನ್ನು ಬಗೆಹರಿಸದೆ, ವಿವಾದವಿಲ್ಲದ ಭೂಮಿಯಲ್ಲಿ (67 ಎಕರೆ) ಯಾವುದೇ ಚಟುವಟಿಕೆಗಳನ್ನು ನಡೆಸಲು ಎಡೆ ಮಾಡಿಕೊಟ್ಟರೆ ಅದು ಕೋಮುಸೌಹಾರ್ದತೆಗೆ ಭಂಗ ಉಂಟಾಗುವ ಸಾಧ್ಯತೆ ಇದೆ" ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಹೇಳಿದೆ.



ವಿವಾದಿತ ಭೂಮಿ ಹಾಗೂ ವಿವಾದ ಇಲ್ಲದ ಭೂಮಿ ಎರಡೂ ಕೂಡಾ ಒಂದಕ್ಕೊಂದು ಸಂಬಂಧ ಹೊಂದಿದ್ದು ಈ ಹಂತದಲ್ಲಿ ಯಾವುದೇ ಬದಲಾವಣೆ ತರಕೂಡದು ಎಂದು ನ್ಯಾಯಪೀಠ ಹೇಳಿದ್ದು ಮಾತ್ರವಲ್ಲದೆ, ಒಂದು ದಶಕದಿಂದ ಬಾಕಿಉಳಿದಿರುವ ವಿವಾದವನ್ನು ಅಂತಿಮ ಹಂತಕ್ಕೆ ಬರುವ ಸಂದರ್ಭದಲ್ಲಿ ಯಾವುದೇ ಬದಲಾವಣೆ ತರುವುದು ಸರಿಯಲ್ಲ" ಎಂಬ ಅಭಿಪ್ರಾಯಕ್ಕೆ ಬಂದಿದೆ.

ಬಿಜೆಪಿ ಅಜೆಂಡಾಕ್ಕೆ ಸೋಲು: ಗುಜರಾತ್ ಚುನಾವಣೆಯ ಗೆಲುವಿನ ನಂತರ ದೇಶದೆಲ್ಲೆಡೆ ಹಿಂದುತ್ವದ ಅಜೆಂಡಾವನ್ನು ಮುಂದಿಟ್ಟು ಚುನಾವಣೆಗಳಲ್ಲಿ ಗೆಲ್ಲುವ ಹುನ್ನಾರವನ್ನು ಬಿಜೆಪಿ ಬಯಸಿತ್ತು. ಅಂತೆಯೇ ಸಂಘಪರಿವಾರದ ಕೊಂಡಿಯಾದ ವಿಶ್ವ ಹಿಂದೂ ಪರಿಷತ್, ರಾಮ ಜನ್ಮಭೂಮಿ ಚಳುವಳಿಯನ್ನು ತೀವ್ರಗೊಳಿಸುವ 'ಬೆದರಿಕೆ' ಹಾಕುತ್ತಾ ವಿವಾದವಲ್ಲದ ಪ್ರದೇಶದಲ್ಲಿ ಚಟುವಟಿಕೆಗಳನ್ನು ನಡೆಸಲು ಅನುಮತಿ ನೀಡಬೇಕೆಂದು ಒತ್ತಾಯಿಸಿತ್ತು. ಆ ಹಿನ್ನೆಲೆಯಲ್ಲಿ ಮಾರ್ಚ್ 2002 ರ ಸುಪ್ರೀಂಕೋರ್ಟ್‌ನ ಆಜ್ಞೆಯನ್ನು ತೆರವುಗೊಳಿಸಲು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿತ್ತು.

ಹಿಮಾಚಲ ಪ್ರದೇಶದ ಚುನಾವಣಾ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುವುದು 'ರಾಷ್ಟ್ರೀಯತೆಯ ಸಂಕೇತ' ವೆಂದು ಪ್ರಧಾನಿ ಘೋಷಿಸಿದ್ದರು. ಅಂದರೆ ಅಲ್ಪಸಂಖ್ಯಾತರನ್ನು 'ರಾಷ್ಟ್ರೀಯತೆ'ಯ ಚೌಕಟ್ಟಿನಿಂದ ಹೊರಗಿಡುವ ಪ್ರಧಾನಿಯವರ ಕೋಮುವಾದಿ, ಮೂಲಭೂತವಾದಿ ಹೇಳಿಕೆ ದೇಶದ ಐಕ್ಯತೆಗೆ ಮಾರಕ. ಭಾರತದಲ್ಲಿ ಕೇವಲ ಹಿಂದೂಗಳು ಮಾತ್ರ ರಾಷ್ಟ್ರೀಯತೆಯ ಭಾಗವಲ್ಲ ಎಂಬುದು ವಾಜಪೇಯಿಯವರಿಗೆ ತಿಳಿದಿಲ್ಲವೇನು? ಬಿಜೆಪಿ ಮುಖಂಡರ ಪೈಕಿ 'ಮಂದಗಾಮಿ' ಎಂದು ಕರೆಸಿಕೊಳ್ಳುತ್ತಿರುವ ವಾಜಪೇಯಿಯವರ ಮುಖವಾಡದ ಹಿಂದಿರುವ ವ್ಯಾಘ್ರತನವನ್ನು ಎಲ್ಲರೂ ಅರಿತುಕೊಳ್ಳುವುದು ಅವಶ್ಯ.

ಬಿಜೆಪಿ, ವಿಹೆಚ್‌ಪಿ ಮತ್ತು ಸಂಘ ಪರಿವಾರದ ಮೂಲ ಉದ್ದೇಶ, ವಿವಾದವಲ್ಲದ ಜಮೀನಿನಲ್ಲಿ ದೇವಾಲಯ ನಿರ್ಮಾಣ ಕಾರ್ಯವನ್ನು ಆರಂಭಿಸುವುದು. ಹಾಗೂ ನ್ಯಾಯಾಲಯದ ಆಜ್ಞೆ ಏನೇ ಇದ್ದರೂ ಗರ್ಭ ಗುಡಿಯನ್ನು ವಿವಾದಿತ ಪ್ರದೇಶದಲ್ಲಿಯೇ ಸ್ಥಾಪಿಸುವುದು. ಆ ಮೂಲಕ ದೇಶದಾದ್ಯಂತ ಕೋಮುದಳ್ಳುರಿ ಹಬ್ಬಿಸಿ, ಬಿಜೆಪಿಯ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವುದು.

ಮಾರ್ಚ್ 31 ರ ನ್ಯಾಯಪೀಠದ ಆಜ್ಞೆ ಕೇವಲ ಕೋಮು ಸೌಹಾರ್ದತೆಯನ್ನು ಕಾಪಾಡುವ ಉದ್ದೇಶ ಹೊಂದಿರುವುದು ಮಾತ್ರವಲ್ಲ, ಅದು 1993 ರ ಕಾಯಿದೆಯ 'ಗುರಿ'ಯನ್ನು ತಲುಪುವ ಉದ್ದೇಶವನ್ನೂ ಹೊಂದಿದೆ.

ಅಂದರೆ, ವಿವಾದಿತ ಪ್ರದೇಶದ ಹಕ್ಕು ಮುಸ್ಲಿಂ ಸಮುದಾಯದ ಪರವಾಗಿ ಬಂದರೆ, ಅದರ ಸುತ್ತಲಿನ ಪ್ರದೇಶದಲ್ಲಿ ಹಿಂದೂ ಕೋಮುವಾದಿ ಗಳ ಚಟುವಟಿಕೆ ನಡೆಯುತ್ತಿದ್ದರೆ, ನ್ಯಾಯಾಲಯದ ಆಜ್ಞೆಯು
ಜಾರಿ ಮಾಡಲು ಕಷ್ಟವಾಗುತ್ತದೆ,
ಹಿನ್ನೆಲೆಯಲ್ಲಿಯೂ ಮಾರ್ಚ್ 31
ನ್ಯಾಯಪೀಠದ ಹೇಳಿಕೆ ಅತ್ಯಂತ ಮಹತ್ವದ್ದು.

ಕೋಮು ಸೌಹಾರ್ದತೆಯನ್ನು ಕಾಪಾಡು
ಉದ್ದೇಶದಿಂದ ನೀಡಿದ ಈ ಆಜ್ಞೆಯು ಬಿಜ
ಸರ್ಕಾರಕ್ಕೆ ತೀವ್ರವಾದ ಮುಖಭಂಗವಾಗಿದೆ
ಸಂಸತ್ತಿನಲ್ಲಿ ಕಾಯಿದೆ ತರಲು ಒತ್ತಾಯ
ಇದೀಗ ನ್ಯಾಯಾಲಯದ ಮೂಲಕ ತನ್ನ ಬ
ಬೇಯಿಸಿಕೊಳ್ಳಲು ಸಾಧ್ಯವಾಗದ ಸಂ
ಪರಿವಾರವು, ಸಂಸತ್ತಿನಲ್ಲಿ ಮಸೂ
ಪಾಸು ಮಾಡ
ವಶಪಡಿಸಿಕೊಳ್ಳಲಾದ 67 ಎ
ಭೂಮಿಯನ್ನು ವಿಹೆಚ್‌ಪಿ ಅಧ
ರಾಮಜನ್ಮ ಭೂಮಿ ನ್ಯಾಸ
ಕೊಡಿಸಬೇಕೆಂದು ಒತ್ತಾಯಿಸು
ಅಷ್ಟಕ್ಕೂ ತಮ್ಮದೆಂದು ಹೇಳಿಕೊಳ
ಈ ಭೂಮಿಗೆ ಅವರು ನೀಡ
ಹಣವೆಷ್ಟು? ಕೇವಲ 1 ರೂ. ಉ
ಪ್ರದೇಶ ದಲ್ಲಿ ಬಿಜೆಪಿ ವಿಜೃಂಭಿ ಸು
ಕಾಲದಲ್ಲಿ ಕಲ್ಯಾಣ ಸಿ
ಮುಖ್ಯಮಂತ್ರಿ ಯಾಗಿದ್ದಾಗ ರಾಮ
ಭೂಮಿ ನ್ಯಾಸ್‌ಗೆ 'ರಾಮ
ಪಾರ್ಕ್' ನಿರ್ಮಾಣ ಮಾಡಲು ಕೇವಲ 1 ರು
ಅದನ್ನು ನೀಡಲಾಗಿತ್ತು.

ನ್ಯಾಯಾಲಯದ ಆದೇಶವನ್ನು
ಸಂಸತ್ತಿನಲ್ಲಿ ಕಾಯಿದೆ ಮೂಲಕ ಈ ಭೂಮಿಯ
ಸಂಘ ಪರಿವಾರಕ್ಕೆ ನೀಡಿದ್ದೇ ಆದಲ್ಲಿ 'ಶಾಬಾ
ಕೇಸಿನಲ್ಲಿ ರಾಜೀವಗಾಂಧಿ ಮುಸ್ಲಿಂ ಮೂಲಭ
ವಾದಿಗಳಿಗೆ ಮಣಿದು ಮಾಡಿದ ಅಪರಾಧ
ಘೋರ ಅಪರಾಧವನ್ನು ವಾಜಪೇಯಿ ಸ
ಮಾಡಿದಂತಾಗುತ್ತದೆ.

ದೇಶದಲ್ಲಿ ಕೋಮುವಾದಿ, ಬಿಜೆಪಿ ನೇ
ಸರಕಾರವೊಂದು ನಡೆಸುತ್ತಿರುವ ಅನ್ಯಾಯ
ನೋಡುತ್ತಾ ಕಣ್ಣುಮುಚ್ಚಿ ಕೂರುವ ದಿನ
ಭಾರತದಲ್ಲಿ ಐಕ್ಯತೆ ಉಳಿಯಬೇಕಾ
ಸಂವಿಧಾನದ ಮೌಲ್ಯವನ್ನು ಕಾಪಾಡಬೇಕಾ
ಸಂಸತ್ತಿನಲ್ಲಿ ಕಾಯಿದೆ ಮೂಲಕ ವಿವಾದ
ಭೂಮಿಯನ್ನು ಸಂಘಪರಿವಾರದ ಕೊಂಬೆ
ನೀಡುವುದು ಸರಿಯಲ್ಲ. ಹಾಗೊಂದು
ಬಿಜೆಪಿ ಬಯಸಿದ್ದೇ ಆದಲ್ಲಿ ಅದರ ವಿರುದ್ಧ
ಪ್ರತಿಭಟನೆ, ಪ್ರಕ್ಷೋಭೆ ಅಗತ್ಯ.

ಅಂಬೇಡ್ಕರ್ ಜಯಂತಿ ಬಂತು

ಪುಟ 9 ರಿಂದ

ಬಡವರು ಶ್ರೀಮಂತರಿಗೆ ತುತ್ತಾಗುತ್ತಿದ್ದಾರೆ. ಶೋಷಿತ ಜನಾಂಗಕ್ಕೆ ಇದರ ಅರಿವು ಮೂಡಿಸುವ ಬದಲು ಜಾತಿ, ಜಾತಿ ವಿಂಗಡಣೆಯಲ್ಲಿ ಜನರನ್ನು ಸಂಘಟಿಸುತ್ತಿದ್ದಾರೆ. ಸರ್ಕಾರದ ಸವಲತ್ತುಗಳನ್ನು ಬಲಗೈನವರು ಹೊಲೆಯರು ಪಡೆಯುತ್ತಿದ್ದಾರೆ. ಎಡಗೈವನರಾದ ಮಾದಿಗರಿಗೆ ಅನ್ಯಾಯವಾಗುತ್ತಿದೆಯೆಂದು ಮೀಸಲಾತಿ ವರ್ಗೀಕರಣಕ್ಕಾಗಿ ಸಮಾವೇಶಗೊಂಡಿದ್ದ ಸಾವಿರಾರು ದಲಿತರನ್ನು ನೋಡಿ ನಿಬ್ಬರಗಾದೆ. ಮೀಸಲಾತಿ ಎಂದರೇನು? ವರ್ಗೀಕರಣವೆಂದರೇನು? ನಾವು ಯಾರು? ನಮಗೇಕೆ ದೇಶದಲ್ಲಿ ತುತ್ತೂ ಕೂಳಿಗೂ ಗತಿಯಿಲ್ಲ ಎಂದು ಯೋಚಿಸಲು ಸಾಧ್ಯವಿಲ್ಲದ ಅಮಾಯಕ ಮನಸ್ಸುಗಳು ಬೆಂಗಳೂರು ನಗರದ ವೈಭವದ ಕಟ್ಟಡಗಳನ್ನು ಪಿಳಪಿಳನೆ ನೋಡುತ್ತಿದ್ದವು. ಚಿಂದಿಯಾದ ಮಾಸಿಈ ಬಟ್ಟೆಗಳಲ್ಲಿ ಕಂದಮ್ಮಗಳ ಜೊತೆಯಲ್ಲಿ ಬಂದ ತಾಯಂದಿರುಗಳಿಗೆ ಸರ್ಕಾರದ ಯಾವುದಾದರೂ ಸವಲತ್ತು ದಕ್ಕಿದೆಯೇ? ಕಿಂಚಿತ್ತೂ ತಲುಪಿಲ್ಲ. ವಿದ್ಯಾವಂತ, ಬಲಿತ ದಲಿತರೇ ಇಂದಿಗೂ ಸರ್ಕಾರದ ಸವಲತ್ತುಗಳನ್ನು ಪಡೆಯುತ್ತಿರುವುದು. ದಲಿತ ನೌಕರರ ವೇತನ ಹೆಚ್ಚಳಕ್ಕಾಗಿ, ಬಡ್ತಿಗಾಗಿ, ಬಂಡವಾಳಶಾಹಿ ರಾಜಕೀಯ ಪಕ್ಷಗಳ ಮತ ಪ್ರದರ್ಶನಕ್ಕಾಗಿ ಈ ನತದೃಷ್ಟರು ರಾಜಧಾನಿಗೆ ಬಂದು ಹೋಗಬೇಕು. ಆಳುವ ಶಕ್ತಿಗಳಿಗೆ ಬಿಟ್ಟಿ ಎತ್ತುಗಳಾಗಿ ದುಡಿಯಬೇಕು. ದಲಿದರ ಮೂಲ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುವ ಗೋಡವೆಗೆ ಯಾರು ಹೋಗುತ್ತಿಲ್ಲದಿರುವುದು ದುರದೃಷ್ಟಕರವಾಗಿದೆ. ಅಂಥ ಸೈದ್ಧಾಂತಿಕ ತಳಹದಿ ಆಧಾರದಲ್ಲಿ ಹಳ್ಳಿ ಹಳ್ಳಿಗಳಿಗೆ ಹೋಗಿ ದಲಿತರನ್ನು ಸಂಘಟಿಸುವ ಯಾವ ಸಂಘಟನೆಗಳು ಇಲ್ಲದಂತಾಗಿವೆ.

ಸ್ವಚ್ಛಂದ ನೀರು ಹರಿಯಬೇಕಿದೆ

ಇಂದಿನ ದಲಿತ ಯುವಕರು ಸಿಡಿಯಬೇಕಿದೆ, ಮತ್ತೊಮ್ಮೆ ಹಿಂದಿನಂತೆ ಶೋಷಿತ ಜನರ ದನಿ ಮೊಳಗಬೇಕಿದೆ. ತಮ್ಮನ್ನು ತಾವೇ ಘೋಷಿಸಿಕೊಂಡು ಆತ್ಮವಂಚನೆಯ ಪರಮಾವದಿ ತಲುಪಿರುವ ನಾಯಕರನ್ನು ತಿರಸ್ಕರಿಸಬೇಕಿದೆ. ಯಾವ ಹಿಂದೂ ಮೂಲಭೂತವಾದದ ವಿರುದ್ಧ ಹೋರಾಡಿದ ಅಂಬೇಡ್ಕರ್‌ರವರನ್ನು ಹಿಂದೂ ನಾಯಕರೆಂದು ಪ್ರಚಾರ ಮಾಡುತ್ತಿರುವ ಶಕ್ತಿಗಳ ಸೊಲ್ಲಡಗಿಸಬೇಕಿದೆ. ಹಿಂದೆ ದನಕರುಗಳನ್ನು ಭಕ್ಷಿಸುತ್ತಿದ್ದ, ಯಜ್ಞ ಯಾಗಾದಿಗಳಿಗೆ ಬಲಿಕೊಡುತ್ತಿದ್ದ ಪುರೋಹಿತಶಾಹಿಗಳು, ಇಂದು ಮನುಷ್ಯ ಮನುಷ್ಯರನ್ನು ದಿನನಿತ್ಯ ಕೊಲ್ಲುತ್ತಿದ್ದರೂ ಸೊಲ್ಲೆತ್ತದೆ, ಗೋ ರಕ್ಷಣೆ, ಗೋಮಾತೆ ಎಂದು ಕೊಚ್ಚುತ್ತಿರುವ ಗೋಮುಖ ವ್ಯಾಘ್ರಗಳಾದ ಪುರೋಹಿತಶಾಹಿಗಳನ್ನು ನಿಗ್ರಹಿಸಬೇಕಿದೆ. ದೇಶದ ಜಾತ್ಯಾತೀತ ಪರಂಪರೆಗೆ ಮಸಿ ಬಳಿಯುತ್ತಿರುವುದನ್ನು ತಡೆಗಟ್ಟಬೇಕಿದೆ. ವಿಶ್ವದ ಎಲ್ಲಾ ದಮನಿತ ದುಡಿಯುವ ಜನರು ಒಗ್ಗೂಡಿ ಒಕ್ಕೊರಲಿನಿಂದ ಸಾಮ್ರಾಜ್ಯಶಾಹಿ, ಬಂಡವಾಳ, ಭೂಮಾಲಿಕ, ಪುರೋಹಿತ ಶಾಹಿಗಳ ವಿರುದ್ಧ ಹೋರಾಡುತ್ತಿರುವ ಶಕ್ತಿಗಳ ಜೊತೆ ದಲಿತ ಸಂಘಟನೆಗಳು ಕೈ ಜೋಡಿಸದೇ ಬೇರೆ ಮಾರ್ಗವಿಲ್ಲ. ಆದ್ದರಿಂದ ಇಂದಿನ ಎಲ್ಲಾ ನಯವಂಚಕರನ್ನು ಕಿತ್ತೊಗೆಯಲು ತ್ಯಾಗ ಬಲಿದಾನಗಳ ಪರಂಪರೆಯುಳ್ಳ ಹೋರಾಟ ಹಾದಿಯನ್ನು ತುಳಿಬೇಕಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್, ಪೆರಿಯಾರ್, ಗಾಂಧಿ, ಕಾರ್ಲ್‌ಮಾರ್ಕ್ಸ್ ಮುಂತಾದವರ ಕನಸನ್ನು ಈಡೇರಿಸೋಣ ಪಟ್ಟಭದ್ರ ಶಕ್ತಿಗಳ, ಅವರ ಬಾಲಂಗೋಚಿಗಳನ್ನು ಬಗ್ಗು ಬಡಿಯೋಣ. ಈ ಆಶಯಗಳನ್ನಿಟ್ಟು ಕೊಂಡು ಅಂಬೇಡ್ಕರ್ ಜಯಂತಿ ಆಚರಿಸೋಣ.

ಗಾಂಧಿ ಕೊಂದವರು ದಿಲ್ಲಿ ದರುಬಾರಿಗೆ

ಅಂದು ಕೊಂದವನ ಜೀವ ಇಂದಿವರ ತತ್ವ
ಬಾಯಲ್ಲಿ ಸ್ವದೇಶಿ ಕೈಯಲ್ಲಿಹುದು ಶ್ವೇತಭವನ
ಗಾಂಧಿ ಕೊಂದವನು ಕೊಂದವನ ಆದರ್ಶಗಳ
ಬಂದು ಅಧಿಕಾರಕೆ ದಿಲ್ಲಿ ದರುಬಾರಿಗೆ

ಶಾಂತಿ ದೂತನಿಗೆ ಭ್ರಾಂತಿಯಂದು
ಧರ್ಮಕಲಹವೇ ಹೊಸ ಕ್ರಾಂತಿಯಂದು
ಕೊಂದನು ಕಂದನ ಕಿಚ್ಚಿತ್ತು ಅವನೆತ್ತವರ
ಬಂದು ಅಧಿಕಾರಕೆ ದಿಲ್ಲಿ ದರುಬಾರಿಗೆ

ಗುಡಿಗುಂಡಾರಕ್ಕೆಲ್ಲ ಪೂಜೆ ಬಣ್ಣ ಸುಣ್ಣ
ಅಯೋಧ್ಯೆಯಲಿ ಹೊಸಬಗೆ ಔತಣ
ಕಾಶಿ ಮಥುರೆಯವರೆಗೂ ಇದೇ ತೋರಣ
ಬಂದು ಅಧಿಕಾರಕೆ ದಿಲ್ಲಿ ದರುಬಾರಿಗೆ

ಅವನೆದೆಯ ನೆತ್ತರ ಹರಿಯಬಿಟ್ಟು ಜನ್ಮಭೂಮಿಗೂ
ಜನನಿ ಅಂಗಳಕ್ಕೂ, ತಾಯಿ ಭಾರತೀಯ ಪಾದ ಶಿರ
ಒಂದೆಡೆ ಹೊಗೆ, ಇನ್ನೊಂದೆಡೆ ಬೆಂಕಿ
ಮತ್ತೆ ಕಮಟು ಜ್ವಾಲೆ
ಬಂದು ಅಧಿಕಾರಕೆ ದಿಲ್ಲಿ ದರುಬಾರಿಗೆ

- ಆರ್ಗ ಹರೀಶ ನಾಯ್ಕ, ದಾಂಡ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH